ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 13th July 1972/Ashadha 22, 1894 (Saka Era).

The House met in the Assembly Chamber, Vidhana Soudha, at Ten of the Clock.

MADAM SPEAKER (SMT. K. S. NAGARATHNAMMA) in the Chair.

Revised Budget Estimates for 1972-73—Demands for Grants Demand Nos. 20, 38, 51 and 22—(*Debate Continued*).

MADAM SPEAKER.—We have three hours at our disposal and we have to conclude the discussion on Demands 20, 38, 51 and 22. The Hon'ble Minister for Agriculture and Forests may take 1½ hours for reply; the Hon'ble Minister of State for Animal Husbandry may take 40 to 45 minutes; and the Hon'ble Minister of State for Fisheries may take about half-an-hour. Anyhow the Demands should be voted by One O' Clock.

† ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ನಿನ್ನೆಯ ದಿವಸ ವಕ್ಕಲುತನ, ಅರಣ್ಯ ಹಾಗೂ ಮೀನುಗಾರಿಕೆ, ತೋಟಗಾರಿಕೆ ಮತ್ತು ಪಶುಸಂಗೋಪನೆ ಈ ಇಲಾಖೆಗಳಿಗೆ ಸಂಬಂಧಪಟ್ಟಂತೆ ಈ ಸದನದ ಎದುರು ಇಟ್ಟಂತಹ ಸರ್ಕಾರದ ಮಾಗಣಿ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಮಾತನಾಡುವಾಗ ಸಮಯದ ಅಭಾವದಿಂದ ಅವರು ಸಮರ್ಪಕವಾಗಿ ವಿಷಯಗಳನ್ನು ನಿವೇದನೆ ಮಾಡುವುದಕ್ಕೆ ಆಗಿಲ್ಲ ಎನ್ನುವ ಅರಿವು ಸರ್ಕಾರಕ್ಕೆ ಆಗಿದೆ. ಆದರೂ ಅವರು ಅವರಿಗೆ ಸಿಕ್ಕಿದ ಅವಧಿಯಲ್ಲಿ ಉಭಯ ಕಡೆಯ ಮಾನ್ಯ ಸದಸ್ಯರೂ ಮಾಡಿರುವ ಎಲ್ಲಾ ಸಲಹೆಗಳನ್ನು ಅಕ್ಷರಶಃ ಸರ್ಕಾರ ಗಮನಿಸಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಅನೇಕ ಮಾನ್ಯ ಸದಸ್ಯರು ಉಗ್ರವಾದ ಭಾಷೆಯನ್ನು ಉಪಯೋಗ ಮಾಡಿದರೂ ಸಹ ವಿರೋಧ ಪಕ್ಷದವರು ಉತ್ತಮವಾದ ಸಲಹೆಗಳನ್ನು ಮಾಡಿದ್ದಾರೆ, ಮತ್ತು ಆಡಳಿತ ಪಕ್ಷದ ಸದಸ್ಯರೂ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಆ ಎಲ್ಲಾ ಮಾನ್ಯ ಸದಸ್ಯರಿಗೂ ಸರ್ಕಾರದ ಪರವಾಗಿ ನನ್ನ ಕೃತಜ್ಞತೆಯನ್ನು ಮೊಟ್ಟಮೊದಲನೆಯದಾಗಿ ಅರ್ಪಿಸುತ್ತೇನೆ. ವಿರೋಧಪಕ್ಷದವರು ಕರ್ತವ್ಯ ದೃಷ್ಟಿಯಿಂದ ಸರ್ಕಾರದ ಲೋಪ ದೋಷಗಳನ್ನು ಎತ್ತುವುದಕ್ಕಿಂತ ಹೆಚ್ಚು ವ್ಯಾಪಕತೆಯ ರಾಷ್ಟ್ರಗನ್ನಡಿಯನ್ನು ಸರ್ಕಾರದ ಜನರಿಗೆ ತೋರಿಸುವುದು ಅವರ ಆದ್ಯ ಕರ್ತವ್ಯ ಎನ್ನುವ ಮಾತನ್ನು ನಾನು ನಂಬಿಕೊಂಡಿದ್ದೇನೆ. ಅವರು ಹೇಳುವಂತಹ ಉಗ್ರ ಟೀಕೆಗಳನ್ನು ನಾನು ಯೋಗ್ಯ ರೀತಿಯಲ್ಲಿ ಗಮನಿಸಿದ್ದೇನೆ.

---

† Indicates that the remarks or

(ಶ್ರೀ ಕೆ. ಎಚ್. ಪಾಟೀಲ್)

ಮಾನ್ಯ ವಿರೋಧ ಪಕ್ಷದ ನಾಯಕರು ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಪ್ರತ್ಯೇಕವಾದ ಒಂದು ಯುಗ ಎಂದು ಕರೆದು ಆ ಯುಗವನ್ನು ಆಳುವ ಕಾಂಗ್ರೆಸ್ಸಿನ ಯುಗಕ್ಕೆ ಒಂದು ಹೊಂದಾಣಿಕೆ ಮಾಡುವಂತಹ ಸಾಹಸವನ್ನು ಮಾಡಿದ್ದಾರೆ. ನಿಜ. ಅವರು ಪಟ್ಟ ಸಾಹಸಕ್ಕೆ ನನ್ನ ಅಭಿನಂದನೆಗಳು. ಈ ಸರ್ಕಾರ ಬಂದು ಕೇವಲ 3-4 ತಿಂಗಳಾಯಿತು. ಈ 3-4 ತಿಂಗಳ ಅವಧಿಯಲ್ಲಿ ಪರಿಶ್ರಮಪಟ್ಟರೂ ವಕ್ಕಲುತನ ಇಲಾಖೆಯಲ್ಲಿ ಲೋಪದೋಷಗಳು ಸಿಕ್ಕದಿದ್ದರೂ ಲೋಪದೋಷಗಳನ್ನು ಹುಡುಕುವ ದೃಷ್ಟಿಯಿಂದ ಹಿಂದಿನ ಆಡಳಿತಗಾರರಲ್ಲಿ ಬಂದ ಲೋಪದೋಷಗಳನ್ನು ಹೊಂದಿಕೆ ಮಾಡಿ ಟೀಕೆ ಮಾಡಿದ್ದಾರೆ. ಹಿಂದಿನ ಆಡಳಿತಗಾರರ ಟೀಕೆಗೂ ನಮ್ಮ ಸರ್ಕಾರಕ್ಕೂ ಯಾವ ಸಂಬಂಧವಿಲ್ಲದಿದ್ದರೂ ಸಹ ಆ ಟೀಕೆಯಲ್ಲಿ ಅಡಗಿರುವಂತಹ ತತ್ವವನ್ನು ನಾನು ಪರಿಪಾಲನೆ ಮಾಡಿ ಅವರು ಮಾಡಿರುವ ತಪ್ಪು ನಮ್ಮ ಅವಧಿಯಲ್ಲಿ ಆಗಬಾರದು ಎನ್ನುವ ದೃಷ್ಟಿಯಿಂದ ಎದುರು ಪಕ್ಷದವರ ಪ್ರತಿಯೊಂದು ವಾಕ್ಯವನ್ನೂ. ಉಪದೇಶವನ್ನೂ ನಾನು ಪಾಲನೆ ಮಾಡುವುದಕ್ಕೆ ಹತ್ತಿದ್ದೇನೆ. ಇದು ಟೀಕೆಗಳ ಯುಗ, ಎಲ್ಲರೂ ಎಲ್ಲಾ ಟೀಕೆಗಳನ್ನೂ ಮಾಡಲಿ, ಆ ಟೀಕೆಗಳಲ್ಲಿ ಯೋಗ್ಯವಾದ ಟೀಕೆಗಳಿದ್ದರೆ ಅವುಗಳನ್ನು ಸ್ವೀಕಾರ ಮಾಡುವುದು ಸಾಧುವಾದ ಸರ್ಕಾರದ ಕರ್ತವ್ಯ. ಟೀಕೆಗಳು ಎದುರು ಪಕ್ಷದಿಂದಲೇ ಬಂದಿರಲಿ, ಆಳುವ ಪಕ್ಷದವರಿಂದಲೇ ಬಂದಿರಲಿ ಅವರು ನಮ್ಮ ತಪ್ಪುಗಳನ್ನು ಸರಿಪಡಿಸಿ ಎಂದು ಹೇಳಿದಾಗ ಅವುಗಳನ್ನು ಸರಿಪಡಿಸಿಕೊಳ್ಳುವುದಿಲ್ಲ ಎಂದು ಹೇಳುವ ಉದ್ಧಾಮ ವೃತ್ತಿಗೆ ಸರ್ಕಾರ ಪ್ರಯತ್ನ ಮಾಡುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ಬ್ಯಾಂಕ್ ರಾಷ್ಟ್ರೀಕರಣ ಮಾಡಿದಾಗ ನಮ್ಮ ನಾಯಕಿಯಾದ ಇಂದಿರಾಜಿಯವರ ಆದಿಯಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ದೇವರಾಜ ಅರಸರವರೆಲ್ಲರೂ ಬಡ ಜನರಿಗೆ ಹಣ ಕೊಡುತ್ತೇವೆ, ಬಡವರ ಬಡತನ ನಿವಾರಣೆ ಮಾಡುವ ಕಾಲ ಬಂತು ಎಂಬ ಆಶ್ವಾಸನೆಯನ್ನು ಕೊಟ್ಟದ್ದು ಈಗ ಗಾಳಿಯ ರೂಪದಲ್ಲಿದೆ ಎಂದು ಸಹ ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿದರು. ನಿಜ; ಆದರೆ ಅದನ್ನು ಮಾಡುವುದಕ್ಕಾಗಿ ನಾವು ಪರಿಶ್ರಮ ಪಡಬೇಕಾಗಿದೆ. ಎಷ್ಟೋ ವರ್ಷಗಳಿಂದ ಬಂದಂತಹ ಬಡತನವನ್ನು ನಾವು ಒಂದೇ ವರ್ಷದಲ್ಲಿ ತೆಗೆದು ಹಾಕುತ್ತೇವೆಂದು ಹೇಳುವುದು ಕಷ್ಟ. ಒಂದು ವರ್ಷದಲ್ಲಿ ಅದನ್ನು ಪರಮಾತ್ಮನಿಗೂ ತೆಗೆದು ಹಾಕಲು ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಹೇಳುತ್ತೇನೆ. ಆದರೆ ಆಡಿದಂತಹ ಮಾತನ್ನು ಮಾಡುವಂತಹ ಕಾರ್ಯವನ್ನು ನಮ್ಮ ಸರ್ಕಾರದವರು ಮಾಡುವುದಕ್ಕೆ ದಿನೇ ದಿನೇ ಪ್ರಗತಿಪರವಾದ ಹೆಜ್ಜೆಯನ್ನು ಇಡುತ್ತಿದ್ದೇವೆ. ಅದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಈಗಾಗಲೇ ವಕ್ಕಲುತನದ ಬಗ್ಗೆ ಹೇಳುವುದಾದರೆ, ಟ್ರಾಕ್ಟರುಗಳನ್ನು ಖರೀದಿ ಮಾಡುವಾಗ ಮತ್ತು ಅದರ ಕಂತುಗಳನ್ನು ಕೊಡುವಾಗ ಅನೇಕ ವಕ್ಕಲಗರಿಗೆ ತಾಯಿಗಿಂತ ಮಗಳು ಭಾರವಾದ ಹಾಗೆ ಬಡ್ಡಿ ಹೆಚ್ಚಾಗಿದೆ. ಅದರ ಬಗ್ಗೆ ದಿನಂಪ್ರತಿ ಅರ್ಜಿಗಳು ಬರುತ್ತಿವೆ. ಅದರಲ್ಲಿ ಅಗ್ರೋ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟದ್ದೂ ಇದೆ, ಡೈರೆಕ್ಟರ್ ಆಫ್ ಅಗ್ರಿಕಲ್ಚರಗೆ ಸಂಬಂಧಪಟ್ಟದ್ದೂ ಇದೆ. ಅದರ ಬಗ್ಗೆ ನಾನು ಈಗಾಗಲೇ ಅಧಿಕಾರಿಗಳಿಗೆ ಆದೇಶಗಳನ್ನು ಕೊಟ್ಟಿದ್ದೇನೆ. ಸಾಧ್ಯವಾದಷ್ಟು ಈ ದಂಡದ ಬಡ್ಡಿಯನ್ನು ಹೆಚ್ಚಾಗಿ ವಸೂಲು ಮಾಡುವುದನ್ನು ನಿಲ್ಲಿಸಬೇಕೆಂದು ಹೇಳಿದ್ದೇನೆ. ಆದರೆ ಒಮ್ಮೆಲೇ ನಿಲ್ಲಿಸಿದರೂ ಕಷ್ಟವಾಗುತ್ತದೆ. ಏಕೆಂದರೆ ನಮ್ಮ ರೈತರು ತೆಗೆದುಕೊಂಡ ಸಾಲದಮೇಲೆ ಅಥವಾ ಟ್ರಾಕ್ಟರ್‌ಮೇಲೆ ಕೊಡಬೇಕಾದಂತಹ ಹಣವನ್ನು ಸರಿಯಾದ ಸಮಯಕ್ಕೆ ಕೊಡದಿದ್ದರೆ ಸರ್ಕಾರದವರು ಡಿಫಾಲ್ಟರ್ ಆಗುವ ಸಂದರ್ಭ ಬರುವುದು ತಮಗೆಲ್ಲರಿಗೂ ಗೊತ್ತಿದೆ. ಆದ್ದರಿಂದ ಕೊಡಬೇಕಾದವರು ಸಮಯಕ್ಕೆ ಸರಿಯಾಗಿ ಕೊಡಲಿ ಎನ್ನುವ ದೃಷ್ಟಿಯಿಂದ ಈ ಪೀನಲ್ ಇಂಟರೆಸ್ಟ್ ಹಾಕುತ್ತಿದ್ದೇವೆ. ಆದ್ದರಿಂದ ನನ್ನ ಖಾತೆಗೆ ಸಂಬಂಧಪಟ್ಟಂತೆ ಇದರ ಬಗ್ಗೆ ಈಗಾಗಲೇ ಸೂಚನೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇನೆ.

ಇನ್ನು ಸಹಕಾರ ರಂಗದದಲ್ಲಿ ಈ ತ್ರಿ ಟೈಯರ್ ಪದ್ಧತಿಯಿಂದಾಗಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಬ್ಯಾಂಕ್ ಮತ್ತು ಪ್ರೈಮರಿ ಸೊಸೈಟಿ—ಇವರು ಹೇರಳವಾದ ಮಾರ್ಜಿನ್ ಆಫ್ ಪ್ರೊಫಿಟ್ ತೆಗೆದುಕೊಂಡು, ರಿಸರ್ವ್ ಬ್ಯಾಂಕಿನಿಂದ ಸಿಗತಕ್ಕಂತಹ ಬಡ್ಡಿಯ ಸೌಲಭ್ಯ ರೈತಾಪಿ ಜನರಿಗೆ ಸಿಗುತ್ತಾ ಇಲ್ಲ. ಈ ಒಂದು ಪರಂಪರೆ ಬಹಳ ದಿವಸಗಳಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಬದಲಾವಣೆ ಮಾಡಬೇಕಾದರೆ, ಸಹಕಾರಿ ರಂಗದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಬೇಕು. ಸರ್ಕಾರದ ಇದರ ಬಗ್ಗೆಯೂ ವಿಚಾರ ಮಾಡುತ್ತಿದ್ದಾರೆ. ಆದರೆ ಒಮ್ಮೆಲೆ ಸರ್ಕಾರದವರು ಇಂತಹ ಕ್ರಾಂತಿಕಾರಿ ಬದಲಾವಣೆಗಳನ್ನು ಆಮೂಲಾಗ್ರವಾಗಿ ಮಾಡುವುದಕ್ಕಾಗುವುದಿಲ್ಲ.

ಏಕೆಂದರೆ ಈ ಚಳವಳಿಯಾಗಿರುವುದು ಜನತೆಯಿಂದ. ಆದ್ದರಿಂದ ಜನತೆಯ ಮನಸ್ಸಿನಲ್ಲಿ ಪರಿವರ್ತನೆಯಾಗಬೇಕು. ಅದನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ನಾವು ಪ್ರಾರಂಭದ ಹಂತದಲ್ಲಿದ್ದೇವೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯ ಅಧಿಕಾರಿಗಳ ರಾಜ್ಯವಾಗಿದೆ, ಮಂತ್ರಿಗಳ ರಾಜ್ಯವಲ್ಲ, ಎಂ. ಎಲ್. ಎ. ಗಳ ರಾಜ್ಯವಲ್ಲ, ಮತ್ತು ಜನತೆಯ ರಾಜ್ಯವಲ್ಲವೆಂದು ಹೇಳುವಂತಹ ಮಾತುಗಳು ಕೇಳಿ ಬರುತ್ತಿದೆ. ನನಗೆ ಆಡಳಿತದಲ್ಲಿ ಮೂರು ತಿಂಗಳ ಅನುಭವ ಆಗಿದ್ದರೂ, ಆ ಕಡೆ ಕೂತು ತಿಳಿದುಕೊಂಡಂತಹ ಅನುಭವ ಬಹಳವಾಗಿ ಇದೆ. ಹೆಚ್ಚು ಕಮ್ಮಿ ಈಗಲೂ ಹಿಂದೆ ಆ ಕಡೆ ಕೂತು ಮಾತನಾಡಿದಂತಹ ಮಾತುಗಳು ನನ್ನ ಬಾಯಿಂದ ಬರುತ್ತಿವೆ. ನನ್ನ ಮಟ್ಟಿಗೆ ಹೇಳುವುದಾದರೆ, ಯಾವುದೇ ಅಧಿಕಾರಿ ನಮ್ಮ ಪ್ರಜಾಪ್ರಭುತ್ವದಲ್ಲಿ ಒಬ್ಬ ಸಾಮಾನ್ಯ ನಾಗರೀಕನಿಗಿಂತ ದೊಡ್ಡವನೇನೂ ಅಲ್ಲವೆಂದು ನಾನು ತಿಳಿಯುತ್ತೇನೆ. ನನ್ನ ದೃಷ್ಟಿಯಲ್ಲಿ ಅವರು ಟ್ರಸ್ಟೀಸ್ ಆಫ್ ದಿ ಪಬ್ಲಿಕ್ ಎನ್ನುವ ರೀತಿಯಲ್ಲಿ ಕೆಲಸಮಾಡಬೇಕು. ಇನ್ನು ಒಬ್ಬರು ಇಂದು ಮಂತ್ರಿಯಾಗಿರಬಹುದು, ಒಬ್ಬರು ಎಂ. ಎಲ್.ಎ. ಆಗಿರಬಹುದು ಅಥವಾ ಒಬ್ಬರು ಎಂ. ಎಲ್. ಎ. ಆಗದೆ ಸೋತಿರಬಹುದು. ಆದರೆ ಇವತ್ತು ಆ ರೀತಿಯಾಗಿದ್ದರೂ, ಇದು ಏನೂ ಶಾಶ್ವತವಲ್ಲ. ಎಲ್ಲರೂ ಸುಪರ್ ಹ್ಯೂಮನ್ಸ್ ಏನೂ ಅಲ್ಲ. ಎಲ್ಲರೂ ಮಾನವೀಯತೆಯ ದೃಷ್ಟಿಯಿಂದ ಮಾನವೀಯ ಸಮಸ್ಯೆಗಳನ್ನು ಬಗೆಹರಿಸಬೇಕಾಗುತ್ತದೆ. ಯಾವಾಗ ಅಧಿಕಾರಿಗಳು ಜನತೆಯ ಕಾರ್ಯಗಳನ್ನು ಮಾಡುವುದರಲ್ಲಿ ಲೋಪವನ್ನು ಮಾಡುತ್ತಾರೆ, ಮತ್ತು ಅವರ ಕರ್ತವ್ಯಗಳಲ್ಲಿ ಲೋಪ ಮಾಡುತ್ತಾರೆ, ಅಂಥವರು ಎಂತಹ ಅಧಿಕಾರಿಗಳೇ ಆಗಿರಲಿ, ಯಾವ ಹುದ್ದೆಯಲ್ಲೇ ಇರಲಿ, ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಈ ಮಾತನ್ನು ಹೇಳುವಾಗ ಮಾನ್ಯ ಸದಸ್ಯರಲ್ಲಿ ಕಳಕಳಿಯ ಪ್ರಾರ್ಥನೆ ಏನೆಂದರೆ, ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೆ, ಒಬ್ಬ ಅಧಿಕಾರಿ ನಮ್ಮಿಂದ ನೇಮಿಸಲ್ಪಟ್ಟು, ನಮ್ಮ ಸರ್ಕಾರದಿಂದ ಸಂಬಳ ತೆಗೆದುಕೊಳ್ಳುತ್ತಿದ್ದರೂ ಸಹ ಆ ಅಧಿಕಾರಿಯ ಜವಾಬ್ದಾರಿ, ಅಥವಾ ಗೌರವ ಹೆಚ್ಚಬೇಕಾದರೆ ನಾವು ಅವನಿಗೆ ಸೂಕ್ತವಾದಂತಹ ಬೆಂಬಲವನ್ನು, ಸೂಕ್ತವಾದ ಗೌರವವನ್ನು ಮತ್ತು ರಕ್ಷಣೆಯನ್ನೂ ಕೊಡಲೇಬೇಕಾಗುತ್ತದೆಂಬ ಮಾತನ್ನು ಅನುಭವಿಗಳಾದ ವಿರೋಧಪಕ್ಷದ ಸದಸ್ಯರಿಗೆ ತಮ್ಮ ಮುಖಾಂತರ ಹೇಳಲಪೇಕ್ಷೆಪಡುತ್ತೇನೆ. ಆದರೆ ಯಾವುದೋ ಒಬ್ಬ ಅಧಿಕಾರಿ ಎಲ್ಲೋ ತಿಂದಾಗ ಅಥವಾ ತಿನ್ನುವುದಕ್ಕೆ ತೊಡಗಿದಾಗ ಅಥವಾ ದುರುಪಯೋಗ ಪಡಿಸುವುದಕ್ಕೆ ಹೊರಟಾಗ, ಅದು ನನ್ನ ನಜರಿಗೆ ಬಂದರೆ ಅವರು ಯಾರೇ ಆಗಲಿ, ಅಥವಾ ಅವನು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಇರಲಿ, ಅಂಥವರಿಗೆ ನನ್ನ ಕೈಯಲ್ಲಿ ರಕ್ಷಣೆ ಸಿಗಲಾರದು. ಹಿಂದೆ ಯಾರೋ ಯಾವುದೋ ತಪ್ಪುಗಳನ್ನು ಮಾಡಿದ್ದಾರೆ ಎಂದಾಕ್ಷಣಕ್ಕೆ ಅವರದ್ದೇ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಇವತ್ತು ನಾನು ಮಂತ್ರಿಯಾಗಿ ಲಂಚಕೋರನಾಗಿದ್ದರೆ, ನನ್ನ ಕೆಳಗಿರುವ ಅಧಿಕಾರಿಗಳೂ ಲಂಚಕೋರರಾಗುತ್ತಾರೆ. ಉದಾಹರಣೆಗೆ ನಾನು ಪ್ರವಾಸದಲ್ಲಿ ಹೋದ ಕಾಲಕ್ಕೆ ಅಲ್ಲಿಯ ಖರ್ಚುಗಳನ್ನು ಅಧಿಕಾರಿಗಳು ಮಾಡಬೇಕೆಂದರೆ, ಆ ಅಧಿಕಾರಿಗಳು ಹಣವನ್ನು ಎಲ್ಲಿಂದ ತರಬೇಕು ? ಮಂತ್ರಿಯಾದವನು ಪ್ರಾಮಾಣಿಕತನದಿಂದ ಜೀವನ ಮಾಡಿದರೆ, ಅವನ ಕೈಕೆಳಗಿನ ಅಧಿಕಾರಿಗಳೂ ಅದೇ ರೀತಿಯಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಬ್ಬ ಸಣ್ಣ ಅಧಿಕಾರಿ ತನ್ನ ಕಿಸೆಯಿಂದ ಖರ್ಚು ಮಾಡಬೇಕಾದರೆ ಅವನು ಯಾವ ರೀತಿಯಲ್ಲಿ ಅದನ್ನು ಮಾಡಬಲ್ಲ ! ಆದ್ದರಿಂದ ಇಲ್ಲಿಯವರೆಗೆ ಇದ್ದದ್ದನ್ನು ನಾವು ಸ್ವಲ್ಪ ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡದೆ ಗತ್ಯಂತರವಿಲ್ಲ. ಅನೇಕ ಸಂದರ್ಭಗಳಲ್ಲಿ ಹಿಂದಿನ ಆಡಳಿತಗಾರರು ಯಾವ ರೀತಿಯಲ್ಲಿ ಸಲಹೆಗಳನ್ನು ಕೊಡುತ್ತಿದ್ದರೋ, ಆ ರೀತಿಯಲ್ಲಿ ಆಡಳಿತವನ್ನು ಅಧಿಕಾರಿಗಳು ನಡೆಸುತ್ತಿದ್ದರು. ಉದಾಹರಣೆಗೆ ನಾನು ಒಬ್ಬ ಗ್ರಾಮಸೇವಕನನ್ನು ಲಂಚಕೋರನೆಂದು ಅವನನ್ನು ತೆಗೆದು ಮುಂದೆ ಎಲ್ಲಿಗೆ ಕಳಿಸಬೇಕು ! ಇನ್ನೊಂದು ಗ್ರಾಮಕ್ಕೆ ಅವನನ್ನು ಕಳಿಸಿದರೆ ಈ ಲಂಚಕೋರರ ಜಾಡ್ಯ ಇನ್ನೊಂದು ಗ್ರಾಮಕ್ಕೂ ಹಬ್ಬುವಂತಾಗುತ್ತದೆ. ಇದು ನಿಮ್ಮ ವಾದವೇ? ಲಂಚಕೋರ ಅಧಿಕಾರಿಯನ್ನು ಲಂಚಕೋರನಾದ ಸ್ಥಳದಲ್ಲಿಯೇ ಹಿಡಿದು ಅವನನ್ನು ಮನೆಗೆ ಕಳಿಸುವಂತಹ ಒಂದು ಚಳವಳಿಯನ್ನು ನಾವು ಮಾಡುವುದು ಸೂಕ್ತವಲ್ಲವೇ? ಇದಕ್ಕೆ ಸಹಕಾರ ತಮ್ಮಿಂದ ಬಂದುದಾದರೆ, ಸರ್ಕಾರದವರು ಇಂತಹ ಲಂಚಕೋರ ಅಧಿಕಾರಿಗಳ ಬಗ್ಗೆ ಉಗ್ರವಾದ ಕ್ರಮವನ್ನು ಕೈಗೊಳ್ಳುವುದಕ್ಕೆ ಬಹಳ ಸಹಾಯವಾಗುತ್ತದೆ ಎಂಬ ಮಾತನ್ನು ಬಹಳ ಪ್ರಾಮಾಣಿಕತೆಯಿಂದ ಹೇಳುತ್ತಿದ್ದೇನೆ. ಇವತ್ತು ಲಂಚಕೋರ ಅಧಿಕಾರಿಗಳು ಬಹಳ ನಿಪುಣರಾಗಿರುತ್ತಾರೆ. ಲಂಚ ತೆಗೆದುಕೊಳ್ಳದ ಅಧಿಕಾರಿಗಳು ಬಹಳ ಪೇಚಿನಲ್ಲಿ ಬೀಳುತ್ತಾರೆ. ಆದ್ದರಿಂದ ಲಂಚ ತೆಗೆದುಕೊಳ್ಳುವ ಅಧಿಕಾರಿಗಳು ಇಂತಹ ಯಾವ ಪೇಚಿನಲ್ಲಿಯೂ ಬೀಳುವುದಿಲ್ಲ. ಅದೂ ಅಲ್ಲದೆ ಲಂಚ ತೆಗೆದುಕೊಳ್ಳುವ ಅಧಿಕಾರಿಗಳು ಅವರನ್ನು ಯಾರು ಪೇಚಿಗೆ ಬೀಳಲು ಪ್ರಯತ್ನ ಮಾಡಿದರೋ, ಅಂಥವರನ್ನೇ ಪೇಚಿಗೆ ಸಿಗುವಂತೆ ಮಾಡುತ್ತಾರೆ. ಅಷ್ಟು ನಿಪುಣರಾಗಿರುತ್ತಾರೆ ಆ ಅಧಿಕಾರಿಗಳು.

(ಶ್ರೀ ಕೆ. ಎಚ್. ಪಾಟೀಲ್)

ಇದರಿಂದಾಗಿ ಮಂತ್ರಿಗಳ ನಿಲುವಿಗೆ ಅಂಥವರು ಸಿಗುವುದಿಲ್ಲವೆಂದು ಕೆಲವು ಸದಸ್ಯರು ತಿಳಿದುಕೊಂಡಿದ್ದಾರೆ. ಅದಲ್ಲದೆ ಇವರು ರೀಜನಲ್ ಭಾವನೆಯಿಂದ ಹೀಗೆ ಮಾಡುತ್ತಿದ್ದಾರೆ, ಅನ್ನ ತಿನ್ನದಿದ್ದರೂ ಇವರಿಗೆ ಕೊಡಲಿಲ್ಲ ; ಅಥವಾ ಅದನ್ನು ಮುಚ್ಚಿಡುವುದಕ್ಕೆ ಹೀಗೆ ಹೇಳುತ್ತಿದ್ದಾರೆ ಎಂದು ಇತ್ಯಾದಿಯಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದ್ದರಿಂದ ಯಾವಾಗ ನಮಗೆ ನಮ್ಮ ಆಡಳಿತದ ಶುದ್ಧೀಕರಣವಾಗಬೇಕೋ ಅದಕ್ಕೆ ನಿಮ್ಮಿಂದ ಸಹಕಾರವನ್ನು ಕೇಳುತ್ತೇವೆಯೇ ಹೊರತು ಹೊಸದೇನೂ ಕೇಳುವುದಿಲ್ಲ. ನಿನ್ನೆಯ ದಿವಸದ ಇಡೀ ಭಾಷಣದಲ್ಲಿ ಅನೇಕ ಮಾತುಗಳನ್ನು ನಾನು ಕೇಳಿದ್ದೇನೆ. ಅದಕ್ಕಾಗಿ ಅಧ್ಯಕ್ಷಿಣಿಯವರ ಮುಖಾಂತರ ಮಾನ್ಯ ಸದಸ್ಯರನ್ನು ಈ ಮೂಲಕ ಇದರ ಬಗ್ಗೆ ಸಹಕಾರ ಕೊಡಬೇಕೆಂಥು ಪ್ರಾರ್ಥಿಸಿಕೊಳ್ಳುತ್ತೇನೆ.

ಇಷ್ಟು ಮಾತುಗಳನ್ನು ಹೇಳಿ ನಾನು ಆಡಳಿತದ ವಿಷಯದ ಬಗ್ಗೆ ಕೆಲವಾರು ಮಾತುಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಬಗ್ಗೆ ಅನೇಕ ಸದಸ್ಯರು ವ್ಯಾಖ್ಯಾನಮಾಡಿದ್ದಾರೆ. ಒಬ್ಬಿಬ್ಬರನ್ನು ಬಿಟ್ಟರೆ, ಉಳಿದವರು ಇದರ ಒಂದು ಕೃತಿಯನ್ನು ಸ್ವಾಗತಿಸಿದ್ದಾರೆ. ಮತ್ತೆ ಇಬ್ಬರು ಸದಸ್ಯರು ಸಾಯಿಲ್ ಟೆಸ್ಟಿಂಗ್ ಕೆಲಸ ನಡೆದಿಲ್ಲವೆಂದು ಹೇಳಿದ್ದಾರೆ. ಗುಲ್ಬರ್ಗದ ಸ್ನೇಹಿತರು ಹಾಗೂ ಬೀದರ್ ಸ್ನೇಹಿತರಿಗೆ ನನ್ನ ಉತ್ತರವಿಷ್ಟೇ. ಇಂದು ನಾವು ಇನ್ನೂ ಶೈಶವಾವಸ್ಥೆಯಲ್ಲಿ ಇದ್ದೇವೆ. ಈ ಸ್ಥಿತಿಯಲ್ಲಿ ಸಮರ್ಪಕ ಕೆಲಸ ನಡೆದಿಲ್ಲವೆಂಬ ಅರಿವೂ ಸಹ ನಮಗೆ ಇದೆ. ಅಷ್ಟೇ ಅಲ್ಲ ಕೆಲಸ ನಡೆದಿಲ್ಲವೆಂಬ ಅರಿವೂ ಆಗಿದೆ. ಈಗಾಗಲೇ ಸರ್ಕಾರ 10 ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿಗಳನ್ನು ಮಂಜೂರು ಮಾಡಿದೆ. ಒಂದು ನಾರ್ತ್ ಕೆನರಾ ಜಿಲ್ಲೆಯ ಒಂದು ಸಹಕಾರ ಬ್ಯಾಂಕಿನಿಂದ ನಡೆಯುತ್ತಿದೆ. ಅವರು ಬಿಟ್ಟರೆ ನಾವು ಇನ್ನೊಂದು ಅಲ್ಲಿಯೇ ಪ್ರಾರಂಭಮಾಡಬೇಕೆಂದು ಇಚ್ಛೆ ಇದೆ.

Sri H. S. SIDDAPPA (Arsikere).—Madam Speaker, you can kindly see that the House is thin ; the Whip and Secretary of the ruling party are not here. It is very inconvenient to us to come so early. We do not get hot water in the General Hostel. We are experiencing great inconvenience there.

Sri K. H. PATIL.—Will the hon. member be justified in raising all those matters here ?

MADAM SPEAKER.—The hon. member can ascertain these things from the Leader of the Opposition. The hon. member being a new comer probably he does not know the conventions here.

ಶ್ರೀ ಕೆ. ಎಚ್. ಪಾಟೀಲ್.—ಈ ದೃಷ್ಟಿಯಿಂದ ಇನ್ನೂ ಎರಡು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಗಳನ್ನು ಕೋಲಾರ ಮತ್ತು ಬೀದರ್ ಜಿಲ್ಲೆಗಳಲ್ಲಿ ಪ್ರಾರಂಭಮಾಡುವ ಯೋಜನೆ ಸರ್ಕಾರದ ಮುಂದೆ ಇದೆ. ಉಳಿದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಮಂಜೂರಾಗಿದೆ. 8 ಜಿಲ್ಲೆಗಳಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಇನ್ನು 8 ಜಿಲ್ಲೆಗಳಲ್ಲಿ ಕೆಲಸ ಪ್ರಾರಂಭಮಾಡುವ ಸಲುವಾಗಿ, ತೀವ್ರಗತಿಯಿಂದ ಕೆಲಸಮಾಡುವ ಸಲುವಾಗಿ ಪ್ರೊಪೋಜಲ್ ಹೋಗಿದೆ. ಕೆಲವು ಕಡೆ ಬಿಲ್ಡಿಂಗ್ಸ್ ಏನೋ ದೊಡ್ಡದಾಗಿವೆ ಮತ್ತು ಎಲ್ಲಿ ಬಾಡಿಗೆ ಬಿಲ್ಡಿಂಗ್ ಇದೆಯೋ ಅಲ್ಲಿ ಕೆಲಸಗಳನ್ನು ಪ್ರಾರಂಭಮಾಡಬೇಕೆಂದು ತಿಳಿಸಿದ್ದೇವೆ. ಪಿ.ಡಬ್ಲ್ಯು.ಡಿ. ಖಾತೆಯವರು ಇಕಾನಮಿ ಆರ್ಡರ್ ಅನ್ವಯ ಮಾಡುವುದರ ಮೂಲಕ ಅಗ್ರಿಕಲ್ಚರಲ್ ಖಾತೆಯ ಕೆಲಸವನ್ನು ತಡ ಮಾಡಿದ್ದಾರೆ. ಅದನ್ನೂ ಸಹ ಪ್ರಾರಂಭಮಾಡಬೇಕೆಂದು ತಿಳಿಸಿದ್ದೇವೆ. ಅವರಿಗೂ ನಾನು ಕೃತಜ್ಞತೆಗಳನ್ನು ಹೇಳುತ್ತೇನೆ. ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಜೊತೆಗೆ ಪ್ಲಾಂಟ್ ಎಗ್ಸಾಮಿನ್ ಮಾಡುವುದಕ್ಕೋಸ್ಕರ ಲ್ಯಾಬೋರೇಟರಿ ಎಕ್ವಿಪ್‌ಮೆಂಟ್ ಕೊಡುವುದು ಸರ್ಕಾರದ ಉದ್ದೇಶವಾಗಿದೆ. ಆ ಬಗ್ಗೆ ಸಲಹೆಗಳನ್ನು ಕೊಟ್ಟಿದೆ. ತೀವ್ರಗತಿಯಿಂದ ಅಂತಹ ಉಪಕರಣಗಳನ್ನು ಅಲ್ಲಿಗೆ ಒದಗಿಸಲಾಗುತ್ತದೆಂದು ಹೇಳುತ್ತಿದ್ದೇವೆ. ಅದರ ಜೊತೆಗೆ ಮೊಬೈಲ್ ವ್ಯಾನನ್ನು ನಾಲ್ಕು ಜಿಲ್ಲೆಗಳಿಗೆ ಒಂದರಂತೆ ಕೊಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಈಗ ನಮ್ಮಲ್ಲಿ ಕೇವಲ ಎರಡು ವ್ಯಾನುಗಳು ಮಾತ್ರ ಇರುತ್ತವೆ. ಇನ್ನು ನಮಗೆ ಮೂರು ವ್ಯಾನುಗಳು ಬೇಕಾಗಿರುವುದರಿಂದ ಅವುಗಳಿಗಾಗಿ ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಮಾತುಕತೆ ನಡೆಸಿದ್ದೇವೆ. ಅದರಿಂದ ಉಪಯುಕ್ತವಾಗಿದೆ. ಅವರು

ಅದಕ್ಕೆ ಒಪ್ಪಿದಂತಾಗಿದೆಯೆಂದು ಹೇಳುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಆದರೆ ಅಧಿಕೃತವಾಗಿ ಅವರಿಂದ ಅಪ್ಪಣೆ ಬರಬೇಕು. ಅದು ಬಂದನಂತರ 4 ಜಿಲ್ಲೆಗಳಿಗೆ ಒಂದರಂತೆ ಮೊಬೈಲ್ ವ್ಯಾನುಗಳನ್ನು ಇಡುತ್ತೇವೆ. ಅದರಲ್ಲಿ ಸುಸಜ್ಜಿತವಾದ ಲ್ಯಾಬೊರೇಟರಿ ಸೌಕರ್ಯ ಇದ್ದು ಪ್ರತಿಯೊಂದು ಜಮೀನಿನ ಮಣ್ಣನ್ನು ಪರೀಕ್ಷೆಮಾಡಿ ಯಾವ ರೀತಿ ಮಣ್ಣು ಇದೆ, ಅದಕ್ಕೆ ಬೇಕಾದ ಗೊಬ್ಬರವೇನು, ಯಾವ್ಯಾವ ಕಾಲಕ್ಕೆ ಎಷ್ಟು ಪ್ರಮಾಣದಲ್ಲಿ ಗೊಬ್ಬರ ಹಾಕಬೇಕು ಎಂಬ ಸಲಹೆ ಅವರು ಕೊಡಬೇಕೆಂಬುದೇ ಸರ್ಕಾರದ ಉದ್ದೇಶ. ಆದಷ್ಟು ಜಾಗ್ರತೆಯಾಗಿ ಅದನ್ನು ಮಾಡಬೇಕಾಗಿದೆ. ಇನ್ನು ಕೆಲವಾರು ಸ್ನೇಹಿತರು ಹೇಳಿದರು, ಪ್ರತಿ ತಾಲ್ಲೂಕಿಗೆ ಒಂದೊಂದು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಆಗಬೇಕೆಂದು. ಎಷ್ಟು ಭೂಮಿ ಇರುತ್ತದೋ ಅದನ್ನು ಗಣನೆಗೆ ತೆಗೆದುಕೊಂಡು ಅದನ್ನು ಮಾಡಬೇಕಾಗುತ್ತದೆ. ಜಿಲ್ಲೆಗೆ ಒಂದರಂತೆ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಮಾಡಬೇಕೆಂಬ ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಇದು ಅತ್ಯಂತ ಪ್ರಗತಿಯಾದುದಾಗಿದೆ. ಕೇಂದ್ರಸರ್ಕಾರದವರೂ ಸಹ ಜಿಲ್ಲೆಗೆ ಒಂದರಂತೆ ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿರುವುದನ್ನು ಬಹಳವಾಗಿ ಪ್ರಶಂಶೆ ಮಾಡಿದ್ದಾರೆ. ಈ ದೇಶದಲ್ಲಿ ನಮ್ಮ ರಾಜ್ಯ ಎಲ್ಲಾರಾಜ್ಯಗಳಿಗಿಂತ ಮೇಲಾಗಿದೆಯೆಂದು ಹೇಳಿದ್ದಾರೆ. ಬಹಳ ಸಂತೋಷವಾಗುತ್ತದೆ. ಇದಾದನಂತರ ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಬಹಳ ಸದಸ್ಯರು ಮಾತನಾಡಿದ್ದಾರೆ. ಎರೇ ಭೂಮಿಯೊಳಗೆ ಆ ಕೆಲಸ ನಡೆಯುತ್ತಾ ಇಲ್ಲ. ಅದರಲ್ಲಿಯೂ ಆ ಕೆಲಸ ಆಗಬೇಕೆಂದು ಹೇಳುತ್ತಿದ್ದಾರೆ. ನಾನು ಆ ಮಾತನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತಿದ್ದೇನೆ. ನಾನು ಎರಡು ಪಕ್ಷದೊಳಗೆ ಇದ್ದಾಗಲೂ ಸಹ ಈ ಮಾತನ್ನು ಹೇಳಿದೆ. ನಾನು ಅಧಿಕಾರಕ್ಕೆ ಬಂದಕೂಡಲೇ ಮೊಟ್ಟಮೊದಲು ಈ ಎರೇ ಭೂಮಿಯೊಳಗೆ ಬದು ಹಾಕಬೇಕೆಂದು ಹೇಳಿದ್ದರಿಂದ ಆ ಕೆಲಸವನ್ನು ಮಾಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ನಮ್ಮನ್ನು ಪ್ರಗತಿದಾಯಕವಾದ ಹೆಜ್ಜೆಗೆ ಹೋಗುವುದಕ್ಕೆ ಬಿಡುವುದಿಲ್ಲ. ಏನೋ ಒಂದು ಹಾದಿ ಹೂಡುತ್ತಾರೆ. ಅಂಥಾದ್ದರೊಳಗೆ ಇದು ಒಂದು ಬಂತು. ತಪ್ಪಲ್ಲ. ಆದರೂ ಸಹ ಕೊನೆಯದಾಗಿ ನಮ್ಮ ಅಧಿಕಾರಿಗಳು ನಮ್ಮ ಅಭಿಪ್ರಾಯಕ್ಕೆ ಸಹಕರಿಸಿದ್ದಾರೆ. ಈಗಾಗಲೇ ರಾಜ್ಯಾದ್ಯಂತ ಎಲ್ಲಾ ಕಡೆಗೂ ಎರೇ ಭೂಮಿಯೊಳಗೆ ಬದುಹಾಕುವ ಕೆಲಸವನ್ನು ಮಾಡಬೇಕೆಂದು ಸರ್ಕಾರ ಆದೇಶ ನೀಡಿದೆ. ಅದರ ಜೊತೆಗೆ ಅಧಿಕಾರಿಗಳು ಬಹಳ ಉಗ್ರವಾಗಿ ನನ್ನ ಅಭಿಪ್ರಾಯಕ್ಕೆ ವಿರೋಧ ಮಾಡುವವರೂ ಕೆಲವರು ಇದ್ದಾರೆ, ಕೆಲವರು ವ್ಯಾಯಾಮಿಮಾಡಿಯಾ ಕೂಡ ಸಹಕಾರ ಮಾಡಿದ್ದಾರೆ. ಕಂಪಲ್ಸರಿಯಾಗಿ ಯಾವ ರೈತ ಎರೆ ಭೂಮಿ ಇರತಕ್ಕವನು ತನ್ನ ಭೂಮಿಯೊಳಗೆ ಬದು ಹಾಕಲು ತೆಗೆದುಕೊಳ್ಳುವುದಕ್ಕೆ ತಕರಾರು ಇಲ್ಲವೆಂದು ಹೇಳುತ್ತಾನೋ ಅಂತಹ ಭೂಮಿಯೊಳಗೆ ಹೋಗಿರಿ ಎಂಬುದಾಗಿ ಸರ್ಕಾರದ ಆದೇಶವಿದೆ. ತಾವೆಲ್ಲರೂ ಇದರಲ್ಲಿ ಸಹಕಾರ ಮಾಡಬೇಕು. ತಮ್ಮ ಮುಖಾಂತರ ಮೈಸೂರು ರಾಜ್ಯದ ರೈತರೆಲ್ಲರಿಗೂ ಇದರ ಲಾಭ ಸಿಗಬೇಕು. ಈ ರಾಜ್ಯದಲ್ಲಿ 262 ಲಕ್ಷ ಎಕರೆ ಭೂಮಿ ಸಾಯಿಲ್ ಕನ್‌ಸರ್‌ವೇಷನ್‌ಗೆ ಒಳಪಡುತ್ತದೆ. ಅದರೊಳಗೆ ಬಂಡ್ ಮಾಡುವುದಕ್ಕೆ ಯೋಗ್ಯ ಭೂಮಿ, 127 ಲಕ್ಷ ಎಕರೆ ಭೂಮಿ ಇದೆ. ಇದರಲ್ಲಿ ಇಲ್ಲಿಯವರೆಗೆ ತೆಗೆದುಕೊಂಡ ಭೂಮಿ ಕೇವಲ 27 ಲಕ್ಷ ಎಕರೆ. ಮೈಸೂರು ರಾಜ್ಯದಲ್ಲಿ ಇನ್ನೂ 100 ಲಕ್ಷ ಎಕರೆ ಭೂಮಿಯಲ್ಲಿ ನಾವು ಬದು ಹಾಕಬೇಕಾಗಿದೆ. ಅದಕ್ಕಾಗಿ ನಾವು ನಾವು ಕನಿಷ್ಠಪಕ್ಷ 10 ವರ್ಷಗಳ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಪ್ರತಿವರ್ಷ 10 ಸಾವಿರ ಎಕರೆಗಳನ್ನು ಈ ಸಾಯಿಲ್ ಕನ್‌ಸರ್‌ವೇಷನ್ನಿನಲ್ಲಿ ಅಳವಡಿಸಬೇಕೆಂಬುದು ನಮ್ಮ ಇಚ್ಛೆಯಾಗಿದೆ. ಇವತ್ತಿನ ಡಿಪಾರ್ಟ್‌ಮೆಂಟ್ ಪ್ಲಾನ್ ಪ್ರಕಾರ ಅದು ಇನ್ನೂ ಕಡಿಮೆಯಾಗಿದೆ. ಅದು ಇನ್ನೂ ಹೆಚ್ಚು ಸ್ಟೇಜಿಗೆ ಬಂದು ಕನಿಷ್ಠಪಕ್ಷ 10 ವರ್ಷಗಳಲ್ಲಿ ಎಲ್ಲಾ ಭೂಮಿಯನ್ನೂ ಬದು ಹಾಕಿ ಮುಗಿಸಬೇಕೆಂಬುದೇ ಇವತ್ತು ಸರ್ಕಾರದ ಉದ್ದೇಶ.

10-30 A.M.

ಇದು ಆಗಬೇಕು. ಆದರೆ ಅಧಿಕಾರಿಗಳು ಹೇಳುತ್ತಾರೆ ನಾವು ಹಣ ಕೊಡಬಹುದು, ಆದರೆ ನಮಗೆ ಬೇಕಾದ್ದು ಟೆಕ್ನಿಕಲ್ ಜನ ಬೇಕು, ಕೆಲಸಗಾರರು ಬೇಕು ಮತ್ತು ಅದಕ್ಕೆ ತಕ್ಕ ಮೆಷನರಿ ಬೇಕು ಇದಕ್ಕೆಲ್ಲಾ ಕಾಲಾವಕಾಶ ಬೇಕೆಂದು ಅವರು ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳಿದ್ದೇನೆ ಆ ಕಾಲವೇನಿದ್ದರು ದಿನಗಟ್ಟಲೆ ಇರಬಹುದೇ ವಿನಾ ಅದಕ್ಕೂ ಹೆಚ್ಚು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ ಎಂದು. ಈ ವಿಚಾರದಲ್ಲಿ ಎಷ್ಟು ತೀವ್ರವಾಗಿ ಇದನ್ನು ಸಾಧಿಸಬಹುದೋ ಅಷ್ಟು ತೀವ್ರವಾಗಿ ಮಾಡಬೇಕೆಂಬ ಆಸೆ ಸರ್ಕಾರಕ್ಕಿದೆ. ಇದರ ಸಲುವಾಗಿ ಒಂದು ಸಮಗ್ರ ಯೋಜನೆಯನ್ನು ಹಾಕಿಕೊಂಡು ಇದನ್ನು ರಾಜ್ಯಾದ್ಯಂತವೂ 10 ವರ್ಷಗಳ ಅವಧಿಯಲ್ಲಿ ಮುಗಿಸಬೇಕೆಂಬ ಕಾಳಜಿ ಸರ್ಕಾರಕ್ಕಿದೆ. ಇದಕ್ಕೆ ಅಗತ್ಯವಾದ ಸಾಯಿಲ್ ಕನ್‌ಸರ್ವೇಷನ್ ಸೆಂಟರುಗಳಲ್ಲಿ ಕೆಲಸಮಾಡುವುದಕ್ಕೆ ಜನರನ್ನು

(ಶ್ರೀ ಕೆ. ಎಚ್. ಪಾಟೀಲ್)

ತಯಾರು ಮಾಡತಕ್ಕ ಟ್ರೈನಿಂಗ್ ಸೆಂಟರುಗಳನ್ನು ಸಾಕಷ್ಟು ತೆರೆದು ಅವುಗಳಲ್ಲಿ ಎರಡು ಪಟ್ಟು ವರ್ಷದಲ್ಲಿ ಟ್ರೈನೀಸುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವಂತೆ ವ್ಯವಸ್ಥೆ ಮಾಡಲಾಗುತ್ತದೆ. ಒಟ್ಟಿನಲ್ಲಿ ಈ ಸಾಯಿಲ್ ಕನ್‌ಸರ್ವೇಷನ್ ಕೆಲಸವನ್ನು ರಾಜ್ಯಾದ್ಯಂತವೂ ಒಂದು ಸಮರ್ಪಕವಾದಂಥ ರೀತಿಯಲ್ಲಿ ಮಾಡುತ್ತೇವೆಂಬ ಒಂದು ಆಶ್ವಾಸನೆಯನ್ನು ನಾನು ತಮಗೆ ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ.

ಇನ್ನು ಗೊಬ್ಬರದ ವಿಚಾರ: ಇದರ ವಿತರಣೆ ರಾಜ್ಯದಲ್ಲಿ ಸರಿಯಾಗಿಲ್ಲ ಎಂದು ಅನೇಕ ಸದಸ್ಯರು ಆರೋಪಣೆ ಮಾಡಿದ್ದಾರೆ. ಈ ಆರೋಪಣೆಗಳು ಈ ಕಡೆಯವರಿಂದಲೂ ಬಂದಿವೆ. ಆ ಕಡೆಯವರಿಂದಲೂ ಬಂದಿವೆ. ಇನ್ನು ಕೆಲವರು ಉಗ್ರವಾಗಿಯೂ ಟೀಕೆ ಮಾಡಿದ್ದಾರೆ. ಇನ್ನು ಕೆಲವರು ಬಹುಶಃ ನಮ್ಮ ನಾಯಕರು ಇರಬಹುದು ಈ ಗೊಬ್ಬರದ ಧಾರಣೆ ಇನ್ನೂರು ಪಟ್ಟು ಏರಿದೆ ಎಂಬುದಾಗಿ ಹೇಳಿದರು. ಆದರೆ ಅಷ್ಟು ಏರಿಲ್ಲ. ಆದರೆ ಅದು ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಏರಿದೆ. ಆದರೆ ಮೊದಲಿಗಿಂತ ಈಗ ಸ್ವಲ್ಪ ಜಾಸ್ತಿಯಾಗಿದೆ. ನನ್ನಲ್ಲಿ ರೈತರಿಗೆ ಯಾವ ದರದಲ್ಲಿ ಗೊಬ್ಬರವನ್ನು ಮಾರಾಟಮಾಡಲಾಗುತ್ತಿತ್ತು ಎನ್ನತಕ್ಕ ಬಗ್ಗೆ 1968 ರಿಂದಲೂ ಅಂಕಿ ಅಂಶಗಳಿವೆ. ಅದಕ್ಕೆ ಹಿಂದಿನದಿಲ್ಲ. 1968 ರಲ್ಲಿ ಸಲ್ಫೇಟ್ 502ರಂತೆ ಮಾರಾಟವಾಗುತ್ತಿತ್ತು, 1970ರಲ್ಲಿ ಅದು 529ಕ್ಕೆ ಏರಿತು. ಮತ್ತು ಈಗ 549 ಇದೆ. ಅಂದರೆ ಮೊದಲಿಗೂ ಈಗ್ಗೂ ಶೇ 8 ಜಾಸ್ತಿ ಆಗಿದೆ ಎನ್ನಬಹುದು. ಇನ್ನು ಯೂರಿಯಾ 1968 ರಲ್ಲಿ 768 ಇತ್ತು; ಅನಂತರ 1970ರಲ್ಲಿ 923 ಆಯಿತು; ಈಗ ಅದು 959 ಕ್ಕೇರಿದೆ. ಹಾಗೇ ಕ್ಯಾಲ್ಸಿಯಂ—1968 ರಲ್ಲಿ 525 ಇತ್ತು; ಅನಂತರ 1970-71ಕ್ಕೆ 571ಕ್ಕೇರಿತು. ಈಗ ಅದು 594 ಇದೆ. ಅಂದರೆ ಈಗ 19 ರೂಪಾಯಿ ಜಾಸ್ತಿ ಆಗಿದೆ. ಅದರಂತೆ ಅಮೋನಿಯಂ ಸಲ್ಫೇಟ್—ನೈಟ್ರೇಟ್: 1968ರಲ್ಲಿ 515 ಇತ್ತು; 1970 ರಲ್ಲಿ 625 ಕ್ಕೇರಿತು. ಈಗ ಅದು 626 ಇದೆ. ಅಂದರೆ ಒಂದು ರೂಪಾಯಿ ಜಾಸ್ತಿ ಆಯಿತು. ಅಂದರೆ ಇದರ ಟ್ರೆಂಡ್ ಹೆಚ್ಚುವುದರ ಕಡೆಗಿದೆಯೇ ವಿನಾ ತಗ್ಗುತ್ತಿಲ್ಲ. ಆದರೆ ಮೊದಲು ರೈತರಿಗೆ ಈ ಗೊಬ್ಬರದ ಬಗ್ಗೆ ಒಂದು ಹೆಚ್ಚಿನ ಪ್ರಚಾರ ಬೇಕಾಗಿತ್ತು. ಈ ದಿವಸ ಅಂಥ ಪ್ರಚಾರವೇನೂ ಬೇಕಾಗಿಲ್ಲ. ಜನರೆಲ್ಲರೂ ಮೆನ್ಯೂರ್ ಮೈಂಡೆಡ್ ಆಗಿದ್ದಾರೆ. ಆದರಿಂದ ಸ್ವಲ್ಪ ಗೊಬ್ಬರದ ಧಾರಣೆ ಜಾಸ್ತಿ ಆಗಿದೆ. ಆದರೆ ಇದರ ಧಾರಣೆಯನ್ನು ಕಡಮೆ ಮಾಡದ ವಿನಾ ರೈತರ ಕಲ್ಯಾಣವಾಗುವುದಿಲ್ಲ. ಈ ದಿವಸ ನಾವು ಈ ಗೊಬ್ಬರವನ್ನು ಪರದೇಶದಿಂದ ತರಿಸಬೇಕು ಮತ್ತು ಅವರು ಹೇಳಿದಂಥ ಧಾರಣೆಗೇ ನಾವು ಅದನ್ನು ಕೊಳ್ಳಬೇಕಾಗಿದೆ. ಆದರೆ, ನಾವು ಎಂದು ಈ ಗೊಬ್ಬರವನ್ನು ಪರದೇಶದಿಂದ ತರಿಸುವುದು ಬಂದಾಗುತ್ತದೋ ಮತ್ತು ಎಂದು ನಾವು ಈ ಗೊಬ್ಬರವನ್ನು ನಮ್ಮ ದೇಶದಲ್ಲೇ ಉತ್ಪನ್ನ ಮಾಡಬಲ್ಲೆವೋ ಆ ದಿವಸ ಇದರ ಧಾರಣೆ ಕಡಮೆ ಆಗಲಿಕ್ಕೆ ಸಾಧ್ಯ ಎನ್ನುವಂಥ ಮಾತನ್ನು ನಾನು ತಮಗೆ ತಿಳಿಸುತ್ತಿದ್ದೇನೆ. ಈಗಾಗಲೆ ನಮ್ಮ ಮಂಗಳೂರಲ್ಲಿ ಒಂದು ಗೊಬ್ಬರದ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಶುರುವು ಮಾಡಿದ್ದೇವೆ, ಅದು 1974ರ ವೇಳೆಗೆ ಸ್ವಲ್ಪ ಪ್ರೊಡಕ್ಷನ್ ಕೊಡಬಹುದೆಂಬ ನಿರೀಕ್ಷಣೆ ನಮಗಿದೆ. ಆದರೆ ಈ ದಿವಸ ನಮ್ಮಲ್ಲಿ ಈ ಗೊಬ್ಬರದ ಬಗ್ಗೆ ಯಾವ ರೈತರಿಗೂ ಚಳವಳಿಯನ್ನೇನೂ ಮಾಡಬೇಕಾಗಿಲ್ಲ. ಅವರೆಲ್ಲಾ ಈಗಾಗಲೆ ಮೆನ್ಯೂರ್ ಮೈಂಡೆಡ್ ಆಗಿದ್ದಾರೆ. ಗೊಬ್ಬರವನ್ನು ಸಕಾಲಕ್ಕೆ ಕೊಡದಿದ್ದರೆ ಅಧಿಕಾರಿಗಳ ಕೊರಳು ಹಿಡಿದು ಗೊಬ್ಬರ ಕೊಡಿ ಎನ್ನತಕ್ಕಂಥ ಸ್ಥಿತಿಯಲ್ಲಿದ್ದಾರೆ ಅವರು. ಆದರೆ ಈ ದಿವಸ ಸರ್ಕಾರದವರೇನಿದ್ದರೂ ಎಲ್ಲ ಎಂಥ ಗೊಬ್ಬರ ಹಾಕಬೇಕು, ಎಲ್ಲ ಎಂಥ ಬೆಳೆಯನ್ನು ಇಡಬೇಕು, ಯಾವಾಗ ಯಾವ ಬೆಳೆಯನ್ನು ಇಡಬೇಕು, ಯಾವ ಬೆಳೆಗೆ ಏನು ಗೊಬ್ಬರ ಹಾಕಬೇಕು ಎಂಬ ವಿಚಾರದಲ್ಲಿ ಚಳವಳಿಯನ್ನು ಮಾಡಿದರೆ ಸಾಕಾಗಿದೆ. ಆದ್ದರಿಂದ ಈಗ ನಮ್ಮ ಪ್ಲಾನ್ ಆಫ್ ಆಕ್ಷನ್ ಈ ವ್ಯವಸಾಯದ ಬಗ್ಗೆ ಬದಲಾವಣೆಯಾಗಬೇಕಾಗಿದೆ. ಈ ದಿವಸ ಅಪ್ಪ ಏನು ಬೆಳೆಯನ್ನು ಬೆಳೆಯುತ್ತಿದ್ದ ಅಷ್ಟೇ ಪ್ರದೇಶ ವ್ಯವಸಾಯಕ್ಕೆ ಇರುವುದು. ಆದರೆ ಅದರಲ್ಲಿ ಬರತಕ್ಕ ಉತ್ಪತ್ತಿಯನ್ನು ತಿನ್ನತಕ್ಕ ಜನರಲ್ಲಿ ಆಗ್ಗೂ ಈಗ್ಗೂ ಬದಲಾವಣೆಯಾಗಿದೆ. ಈದಿನ ಆ ಭೂಮಿ ಅಷ್ಟೇ ಇದ್ದರೂ ಅದರಲ್ಲಿ ಬೆಳೆ ಹೆಚ್ಚು ತೆಗೆಯದಿದ್ದರೆ ಆ ಕುಟುಂಬದಲ್ಲಿ ಇಂದು ಆ ಅಪ್ಪ, ಮಗ, ಮೊಮ್ಮಗ ಇಷ್ಟೆಲ್ಲಾ ಜನರು ಹೊಟ್ಟೆ ಹೊರೆಯಬೇಕಾಗಿದ್ದರೆ ಅದರಲ್ಲಿ ಬರತಕ್ಕ ಉತ್ಪತ್ತಿ ಏನಿತ್ತು ಅದನ್ನು ಮೊದಲಿಗಿಂತ ಉತ್ತಮ ಪಡೆಯಬೇಕು. ಆದ್ದರಿಂದ ಉತ್ತಮ ವ್ಯವಸಾಯ ನಡೆಯಬೇಕು. ಉತ್ತಮ ಬೀಜಗಳು ಬೇಕು, ಉತ್ತಮ ಗೊಬ್ಬರ ಬೇಕು. ಇಷ್ಟೆಲ್ಲಾ ಮಾಡಿದರೇ ಆ ಒಕ್ಕಲುತನ ಅಭಿವೃದ್ಧಿಗೆ ಬರುವುದು. ಇಲ್ಲದಿದ್ದರೆ ಅದು ಸಾಧ್ಯವಿಲ್ಲ ಎಂದು ಕೈ ಎತ್ತಿ ಹೇಳಬಹುದು. ಆದ್ದರಿಂದ ಈ ಒಕ್ಕಲುತನದ ವಿಚಾರದಲ್ಲಿ ಸರ್ಕಾರದವರೇನಾದರೂ ಅಶ್ರದ್ಧೆ ಮಾಡಿದರೆ ಮಾನ್ಯ ವಿರೋಧಪಕ್ಷದ ಸದಸ್ಯರು ಆಡಳಿತಪಕ್ಷವನ್ನು ಕಟುವಾಗಿ ಟೀಕಿಸಿ ನಮ್ಮನ್ನು ದಾರಿಗೆ ತರಬೇಕಾದ್ದು ಅವರ ಆದ್ಯ

ಕರ್ತವ್ಯ ಎಂದು ತಿಳಿಸ ಬಯಸುತ್ತೇನೆ. ನಾವು ಈ ದಿವಸ ಈ ಟೀಕೆಗಳನ್ನೆಲ್ಲಾ ಒಂದು ಗಣನೀಯವಾದ ರೀತಿಯಲ್ಲಿ ಕಡಮೆ ಮಾಡುವುದಕ್ಕೆ ಅವಕಾಶವಿತ್ತು ಎಂದು ಕಾಣುತ್ತದೆ. ಹಿಂದೆ ಇದೇ ಸಭೆಯಲ್ಲಿ ಡಾ : ಆರ್. ನಾಗನಗೌಡ ಅವರು ಹೇಳುತ್ತಿದ್ದ ಆ ಅಮೋನಿಯಂ ನೈಟ್ರೋಜನ್ ಗ್ಯಾಸನ್ನು ನಾವು ಈ ದಿವಸ ತಯಾರು ಮಾಡುತ್ತಿದ್ದ ಪಕ್ಷಕ್ಕೆ, ಅವರು ಅ ದಿವಸವೇ ಕೇಳುತ್ತಿದ್ದರೂ ಅದನ್ನು ರೈತರಿಗೆ ಏಕೆ ಪುರವಟೆ ಮಾಡಬಾರದು ಎಂದು, ಅದನ್ನು ನಾವು ಗಮನಿಸಿದ್ದರೆ ಈ ದಿವಸ ಈ ಟೀಕೆಗಳಿಗೆಲ್ಲ ಅವಕಾಶ ಇರುತ್ತಿರಲಿಲ್ಲ. ಅಮೋನಿಯ in the form of Water ತಯಾರು ಮಾಡಿದ್ದರೆ ಅದನ್ನು ಎಕರೆ ಒಂದಕ್ಕೆ 4 ರೂಪಾಯಿನ ದರದಲ್ಲಿ ಒದಗಿಸಬಹುದಾಗಿತ್ತೆಂದು ಅವರು ಹೇಳುತ್ತಿದ್ದರು. ಅಗ ನಾವು ಅದಕ್ಕೆ ಅಷ್ಟು ಹೆಚ್ಚಿನ ಗಮನ ಕೊಡಲಿಲ್ಲ. ಆದ್ದರಿಂದಲೇ ಇಂದು ಗೊಬ್ಬರ ಬೆಲೆ ಎಲ್ಲೋ ಮೀರಿ ಹೋಗಿದೆ. ಈ ದಿವಸ ಇದರ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕಮಾಡಿ ಅವರ ಸಲಹೆಯನ್ನೂ ಮತ್ತು ಪರರಾಷ್ಟ್ರದ ತಜ್ಞರ ಸಲಹೆಗಳನ್ನು ಪಡೆದು ನಮ್ಮಲ್ಲಿ ಇಷ್ಟು ಯಥೇಷ್ಟವಾಗಿ ನೀರು ಗಾಳಿ ಮತ್ತು ವಿದ್ಯುಚ್ಛಕ್ತಿ ಇರುವುದರಿಂದ ಇಲ್ಲೇ ಆ ಅಮೋನಿಯಂ ತಯಾರಿಸುವುದಕ್ಕೆ ಸಾಧ್ಯಇದೆಯೋ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ನಾನು ಈ ವಿಚಾರವನ್ನು ಕೇಂದ್ರ ಸರ್ಕಾರದವರ ಗಮನಕ್ಕೂ ಕೂಡ ತಂದಿದ್ದೇನೆ. ಅವರು ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ನಡೆಸುತ್ತಿದ್ದಾರೆಂದು ನಾನು ಆಶಿಸುತ್ತೇನೆ. ಅದನ್ನು ಕಾರ್ಯರೂಪಕ್ಕೆ ತಂದರೆ ಇಲ್ಲಿ ಗೊಬ್ಬರವನ್ನು ಸೋವಿ ರೇಟಿನಲ್ಲಿ ಪುರೋಟೆ ಮಾಡುವುದಕ್ಕೆ ಸಾಧ್ಯವಾಗಬಹುದೆಂದು ನನ್ನ ಆಸೆ. ಇನ್ನು ಈ ಗೊಬ್ಬರದ ವಿಚಾರದಲ್ಲಿ ಶ್ರೀ ಕಾಗೋಡು ತಿಮ್ಮಪ್ಪನವರು ಕೆಲವು ಬಹಳ ಯೋಗ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳು. ನಮ್ಮ ರಾಜ್ಯದಲ್ಲಿ ಗೊಬ್ಬರದ ಪುರಾವಟೆ ವಿಚಾರದಲ್ಲಿ ಆತಂಕ ಪಡಿಸಿದ ಅಧಿಕಾರಿಗಳ ಬಗ್ಗೆ ಸರ್ಕಾರದವರು ಏಕೆ ಅವರಿಗೆ ಸೂಕ್ತ ಶಿಕ್ಷೆ ವಿಸಧಿಲಿಲ್ಲ ಎಂಬ ಅಂಶವನ್ನು ಎತ್ತಿ, ಈ ಕ್ರಮವನ್ನು ಕೈಗೊಳ್ಳದಿದ್ದ ಕಾರಣ ಅವರು ಸರ್ಕಾರವನ್ನೂ ಕೂಡ ಶಂಕಿಸಬೇಕಾದ ಪ್ರಸಂಗ ಉಂಟಾಗಿದೆ ಎಂದು ಹೇಳಿದ್ದಾರೆ. ನಾನು ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ಮಾಡಿ ನೋಡಿದೆ. ಆದರೆ ಅಲ್ಲಿ ಶಿಕ್ಷೆಗೆ ಅರ್ಹರಾದವರು ಯಾರೂ ಇಲ್ಲ. ಅವರನ್ನು ಶಿಕ್ಷೆಗೊಳಪಡಿಸುವಂಥ ಶಕ್ತಿ ನನಗಿಲ್ಲ. ಕಾರಣ ಅವರು ಸಕಾಲಕ್ಕೆ ನಮ್ಮ ರಾಜ್ಯಕ್ಕೆ ಎಷ್ಟು ಗೊಬ್ಬರ ಬೇಕು ಎಂಬುದನ್ನು ಕೂಲಂಕ್ಷವಾಗಿ ವಿಚಾರಮಾಡಿದ್ದಾರೆ. ಆದರೆ ಆ ದಿವಸ ನಮ್ಮ ಮಾರ್ಕೆಟ್ಟಿನಲ್ಲಿ ಸಾಕಷ್ಟು ಸ್ಟಾಕಿದ್ದು ಅದು ಮಾರಾಟವಾಗದ ಹಾಗೆ ಉಳಿದಿದ್ದ ಕಾರಣ ಅದನ್ನು ಖರ್ಚುಮಾಡದೆ ಮತ್ತೆ ಹೊಸದಾಗಿ ಗೊಬ್ಬರ ತರಿಸಿದರೆ ಸರ್ಕಾರಕ್ಕೆ ಅದರಿಂದ ದೊಡ್ಡ ಹಾನಿಯಾಗುತ್ತದೆಂದು ಹೇಳಿದ್ದರಿಂದ ನಾನು ಅವರ ಬಗ್ಗೆ ಕ್ರಮ ಕೈಗೊಳ್ಳಲು ಅಸಹಾಯಕನಾಗಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಾರೂ ತಮ್ಮ ಮನಸ್ಸಿನಲ್ಲಿ ಯಾವ ತರಹೆ ಕಲ್ಮಷವನ್ನೂ ಇಟ್ಟುಕೊಳ್ಳಬಾರದೆಂದು ಕೇಳಿಕೊಳ್ಳುತ್ತೇನೆ. ಆ ಒಂದು ದೃಷ್ಟಿಯಿಂದ ಅಧಿಕಾರಿಗಳು ಆ ದಿವಸ ಹೊಸದಾಗಿ ಗೊಬ್ಬರಕ್ಕೆ ಆರ್ಡರನ್ನು ಕೊಡಲಿಲ್ಲ. ಮತ್ತು ಈ ವಿಚಾರದಲ್ಲಿ ಸರ್ಕಾರವೇನೂ ಮರೆತು ಮಗಲಿಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಆ ಮದ್ರಾಸಿನಲ್ಲಿ ಜೋನಲ್ ಕೌನ್ಸಿಲ್ ಮೀಟಿಂಗ್ ನಡೆದಕಾಲಕ್ಕೆ ನಮ್ಮ ರಾಜ್ಯಕ್ಕೆಷ್ಟು ಗೊಬ್ಬರ ಬೇಕಾಗುತ್ತದೆ ಎಂಬುದನ್ನು ಆ ದಿವಸವೇ ಅವರ ನಜರಿಗೆ ತಂದಿದ್ದಾರೆ. ಆ ಕಾಲಕ್ಕೆ ಅಲ್ಲಿನ ಅಧಿಕಾರಿಗಳು ಈಗಾಗಲೇ ತಮ್ಮ ಇಂಡೆಂಟ್ ಕೈ ಬಿಟ್ಟು ಹೋಗಿದೆ, ಆದಾಗ್ಗೂ ಬರತಕ್ಕ ಗೊಬ್ಬರದಲ್ಲೇ ಇಡೀ ರಾಜ್ಯಕ್ಕೆಲ್ಲಾ ವಿನಿಯೋಗಿಸಬೇಕಾಗಿದೆ, ಆ ಇಂಪೋರ್ಟಿನಲ್ಲ ಸಾಧ್ಯವಾದ ಮಟ್ಟಿಗೂ ನಮಗೆ ಎಷ್ಟು ಅಗತ್ಯವೋ ಅಷ್ಟನ್ನು ಕೊಡುವುದಕ್ಕಾಗದಿದ್ದರೂ ಒಂದು ಸಮಾಧಾನಕರವಾಗುವಷ್ಟು ಮಟ್ಟದಲ್ಲಿ ಕೊಡುವುದಾಗಿ ಅವರಿಂದ ಒಂದು ಆಶ್ವಾಸನ ಬಂದಿದೆ. ಅದಕ್ಕಾಗಿ ನಾನು ಕೇಂದ್ರ ಸರಕಾರದವರನ್ನು ವಂದಿಸುತ್ತಿದ್ದೇನೆ. ಇದಾದ ನಂತರ ಈಗ ಕೊಟ್ಟಿರುವ ಆಶ್ವಾಸನೆ ಸಾಲದು ಮತ್ತೇ ಸರಿಯಾದ ಆಶ್ವಾಸನೆ ಕೊಡಬೇಕು ಎಂದು ಹೇಳಿದ್ದೇವೆ. ಅವರು ಹೆಚ್ಚು ಕೊಡಲು ಪ್ರಯತ್ನಮಾಡಿದ್ದಾರೆ ಮತ್ತು ಆಶ್ವಾಸನೆ ಸಹ ಕೊಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಜುಲೈನಿಂದ ಯಾವುದೇ ರೀತಿಯಲ್ಲಿ ಗೊಬ್ಬರದ ಕೊರತೆ ಬೀಳುವುದಿಲ್ಲ. ಜುಲೈ ಕಳೆಯುವವರೆಗೆ ಕೊರತೆಯಾದರೂ ಅದನ್ನು ನಿವಾರಣೆ ಮಾಡಬಹುದು. ಜನರಿಗೆ ಅಮೋನಿಯ ಮತ್ತು ಯೂರಿಯ ಸರಬರಾಯಿ ಮಾಡಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಎನ್ ಪಿ ಕೆ ಪ್ರಮಾಣವನ್ನು ಯಾವರೀತಿ ಹಾಕಬೇಕು ಎಂಬ ವಿಚಾರದಲ್ಲ ವ್ಯವಸಾಯ ಇಲಾಖೆ ಡೈರೆಕ್ಟರು ಮತ್ತು ತಜ್ಞರ ಸಲಹೆ ಪ್ರಕಾರ ಮಾಡಿದರೆ ಅನುಕೂಲವಾಗುವುದು. ಉಳಿದ ಗೊಬ್ಬರಗಳನ್ನು ಸಹ ಕಾರ್ಖಾನೆಗಳಿಂದ ತಯಾರಿಸಿ ಹಂಚುವುದರಿಂದ ಕೊರತೆ ನೀಗಬಹುದು. ಅದುದರಿಂದ ಮಾನ್ಯ ಸದಸ್ಯರು ಇಂದು ಸಂಶಯ ಪಡಬೇಕಾದ ಕಾರಣವಿಲ್ಲ. ಆದರೆ ಗೊಬ್ಬರದ ಹಂಚಿಕೆಯಲ್ಲಿ ಮಹಾದೋಷವಿದೆ, ನಿಜ. ಒಂದೇ ದಿವಸದಲ್ಲಿ

(ಶ್ರೀ ಕೆ. ಹೆಚ್. ಪಾಟೀಲ್)

ಗೊಬ್ಬರದ ವಿತರಣೆ ಮೂರು ರೀತಿಯಲ್ಲಾಗುತ್ತಿದೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮೂಲಕ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಮತ್ತು ಖಾಸಗಿ ಜನರ ಮೂಲಕ ಹೀಗೆ ಮೂರು ಏಜೆನ್ಸಿಗಳಿಂದ ಹಂಚಲಾಗುತ್ತಿದೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಗೊಬ್ಬರವನ್ನು ಹಂಚುವಾಗ ಡೈರೆಕ್ಟಾಗಿ ಅಥವ ಖಾಸಗಿಯವರ ಮೂಲಕ ಕೊಡುವ ವ್ಯವಸ್ಥೆ ಇದೆ. ಅದರ ಪರಿಣಾಮವಾಗಿ ಸೇಕಡ 50 ಭಾಗ ಸೊಸೈಟಿ ಮೂಲಕ ಉಳಿದ 50 ಭಾಗ ಖಾಸಗಿಯವರ ಮೂಲಕ ಹಂಚುವುದು. ಖಾಸಗಿಯವರು ಸರಿಯಾಗಿ ಹಂಚದಿರುವಾಗ ಅವರ ಲೈಸನ್ಸ್ ರದ್ದುಮಾಡಲು ಅವಕಾಶವಿತ್ತು, ಅದನ್ನು ಮಾಡಿದೆ. ಇದರ ಮೇಲೆ ನಿಯಂತ್ರಣಕ್ಕೆ ಸಾಕಷ್ಟು ಅವಕಾಶವಿಲ್ಲದಿದ್ದುದರಿಂದ ರೈತರಿಗೆ ತೊಂದರೆ ಆಗಿದೆ. ಇದಕ್ಕಾಗಿ ಸಭೆ ಕರೆದು ಖಾಸಗಿ ಜನರ ಮೂಲಕ ಫರ್ಟಿಲೈಜರ್ಸ್‌ನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಹಂಚುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ತಿಳಿಸಲಾಗಿದೆ. ಹಾಗೆ ಮಾಡಿ ಸೇಕಡ 50 ಭಾಗ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮೂಲಕ ಮತ್ತು ಸೇಕಡ 50 ಭಾಗ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಹಂಚಬೇಕು, ಹಂಚಿ ಕೊರತೆ ನೀಗಿಸಬೇಕು ಎಂಬ ಆಲೋಚನೆ ಮಾಡಿದೆ. ಮಾರ್ಕೆಟಿಂಗ್ ಸೊಸೈಟಿ ವಿತರಣೆ ಅಸಮಂಜಸ ವಾಗಿರುವ ಕಡೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಂದೆ ಬಂದು ರೈತರಿಗೆ ಅನುಕೂಲಮಾಡಬೇಕೆಂದಿದ್ದಾರೆ. ಅವರೆಡಕ್ಕೂ ಹೊಂದಾಣಿಕೆಯಾದರೆ ಅನುಕೂಲವಾಗುವುದು. ವಿತರಣೆಯಲ್ಲಿ ಈಗಾಗಲೆ ಪ್ರಗತಿಯಾಗಿದೆ, ಒಂದೇ ದಿವಸದಲ್ಲಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಕೆಲವು ದಿವಸ ಸಮಾಧಾನ ಪಟ್ಟುಕೊಳ್ಳಬೇಕು. ನಾನು ಒಂದು ನಿಮಿಷವೂ ಸುಮ್ಮನೆ ಕೂಡದೆ ಗೊಬ್ಬರದ ವಿತರಣೆಯ ವಿಚಾರದಲ್ಲಿ ಸೂಕ್ತ ಕ್ರಮ ಕೈಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ. ತೊಂದರೆಯಾಗಬಾರದು ಎಂಬುದೇ ಮುಖ್ಯ ಉದ್ದೇಶ. ಈಗ ಪರ್ಮಿಟ್ ವ್ಯವಸ್ಥೆ ಪ್ರಾರಂಭಿಸಲಾಗಿದೆ. ಇದು ಹೊಸ ಪದ್ಧತಿ ಎಂದು ಹೇಳಬಹುದು. ಪರ್ಮಿಟ್ ಪದ್ಧತಿಯನ್ನು ಜಾರಿಗೆ ತಂದಿರುವುದರ ಉದ್ದೇಶ ಗೊಬ್ಬರದ ವಿತರಣೆಯ ಸಂಬಂಧದಲ್ಲಿ ಯಾವುದೇ ರೀತಿಯಲ್ಲಿ ದುರುಪಯೋಗವಾಗಬಾರದು ಎಂಬುದು. ಒಂದರಿಂದ ಐದು ಚೀಲ ಬೇಕಾದರೆ ಬಿಡಿಓ ಮೂಲಕ, ಅದರಮೇಲೆ ತಾಲ್ಲೂಕು ಅಗ್ರಿಕಲ್ಚರಲ್ ಅಧಿಕಾರಿ ಮೂಲಕ, ಅದರಮೇಲೆ ಡೆಪ್ಯುಟಿ ಡೈರೆಕ್ಟರ್ ಮೂಲಕ, ಪಡೆಯಬಹುದು. ಕೆಲವು ಸಂದರ್ಭಗಳಲ್ಲಿ ಅದನ್ನು ಮೀರಿ ಪರ್ಮಿಟ್ ಪಡೆದು ಬ್ಲಾಕ್ ಮಾರ್ಕೆಟ್ ಮಾಡಿರುವುದು ಸಹ ಇದೆ. ಇದರ ಸಲುವಾಗಿ ನಾನು ನಿವೇದನೆ ಮಾಡುವುದು ಸಹಕಾರ ಕೊಡಬೇಕು, ಎಲ್ಲ ಅವ್ಯವಹಾರಗಳನ್ನೂ ತಡೆಗಟ್ಟಲು ಕಾರ್ಯಕ್ರಮ ತೆಗೆದುಕೊಳ್ಳುತ್ತಿದೆ, ಸರಕಾರ ಸಾಧ್ಯವಾದ ಪ್ರಯತ್ನ ಮಾಡಿ ಬೇಕಾದ ಗೊಬ್ಬರ ಕೊಡಲು ಪ್ರಯತ್ನಮಾಡುವುದು. ಒಕ್ಕಲತನದ ಖಾತೆ ಅಧಿಕಾರಿಗಳಿಗೆ ಈಗ ಅತ್ಯಂತ ಕಠಿಣವಾಗಿ ಆಜ್ಞೆ ಮಾಡಲಾಗಿದೆ. ಗೊಬ್ಬರದ ವಿತರಣೆಯಲ್ಲಿ ಎಳ್ಳಷ್ಟೂ ಅಪ್ರಾಮಾಣಿಕತೆಗೆ ಅವಕಾಶ ಕೊಡಬಾರದು ಎಂದು ತಿಳಿಸಲಾಗಿದೆ. ತಪ್ಪು ಮಾಡಿದ ವರ್ತಕರಿಗೆ ಶಿಕ್ಷೆ ಮಾಡಬೇಕು ಎಂದು ತಿಳಿಸಿದೆ. ಇನ್ನು ಅಡಲ್ಟರೇಷನ್ ವಿಷಯವಿದೆ. ಅಡಲ್ಟರೇಷನ್ ಗೊಬ್ಬರಕ್ಕೆ ಸಂಬಂಧಪಟ್ಟಂತೆ ಬಹಳವಾಗಿ ಆಗುತ್ತಿದೆ ಎಂಬ ದೂರಿದೆ. ಈ ಅಪಾದನೆಯಲ್ಲಿ ಬಹಳಮಟ್ಟಿಗೆ ನಿಜಾಂಶವಿದೆ. ಬಹಳ ಮಟ್ಟಿಗೆ ಈ ವಿಚಾರದಲ್ಲಿ ಎಚ್ಚರಿಕೆ ವಹಿಸಲಾಗಿದೆ. ಕೋಲಾರದಲ್ಲಿ ನಡೆದಿರುವ ವಿಚಾರ ಪತ್ರಿಕೆಯಲ್ಲಿ ಬಂದಿವೆ ಎಂದು ಹೇಳುತ್ತಾರೆ. ಪತ್ರಿಕೆಯಲ್ಲಿ ಬರುವುದೆಲ್ಲಾ ನಿಜವಲ್ಲ, ಇಲ್ಲದಿರುವುದನ್ನೂ ಕೆಲವು ವೇಳೆ ಪ್ರಕಟಮಾಡುವರು. ಇದನ್ನು ಹೇಳುವಾಗ ಪತ್ರಿಕೆಗಳ ವಿಷಯದಲ್ಲಿ ಅನುಭವವಿರುವ ನಾನು ಅಭಿಮಾನವಿರುವ ನಾನು ಬಹಳ ಜಾಗ್ರತೆಯಿಂದ ಹೇಳುತ್ತಿದ್ದೇನೆ. ಕೆಲವು ಪತ್ರಿಕೆಗಳು ಉತ್ತಮವಾದ ಕೆಲಸ ಮಾಡುತ್ತಿವೆ. ಅವು ಬಹಳ ಹೆಚ್ಚಿನ ಕಾರ್ಯ ಮಾಡುತ್ತಿವೆ.

Sri C. M. ARUMUGAM (K. G. F.).—I request the Hon'ble Minister to yield for a minute. The Deputy Director of Agriculture, Kolar, did not say that what appeared in the Press is incorrect. Has the Hon'ble Minister called for the report from the Deputy Director of Agriculture? For the information of the Hon'ble Minister I might say that in a meeting of the District Development Council, the Deputy Director of Agriculture stated that there was adulteration in the fertilizers, and he also stated that it had happened at Mangalore.

Sri K. H. PATIL.—Have I said 'no'? Please allow me to have my say.

SRI C. M. ARUMUGAM.—The Hon'ble Minister was commenting about the Press, about the incorrectness of the report in the Press. Did the Hon'ble Minister call for a report from the Deputy Director of Agriculture and whether he has that information before him ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ನನ್ನನ್ನು ತಿಮ್ದುವ ರೀತಿಯಿಂಗ ಮಾತನಾಡಿರಬೇಕು. ಡೆಪ್ಯುಟಿ ಡೈರೆಕ್ಟರ ಅಭಿಪ್ರಾಯ ತೆಗೆದುಕೊಳ್ಳದೆ ಮಂತ್ರಿಗಳು ಮಾತನಾಡಿ ಪೇಟಿವಲ್ಲಿ ಬೀಳುವರು ಎಂಬ ಅಭಿಪ್ರಾಯವಿರಬಹುದು. ಬರೀ ಡೆಪ್ಯುಟಿ ಡೈರೆಕ್ಟರ ಅಭಿಪ್ರಾಯ ಮಾತ್ರವಲ್ಲ, ಡೈರೆಕ್ಟರು, ಸೆಕ್ರೆಟರಿ ಮತ್ತು ಸಂಬಂಧಪಟ್ಟ ಟೆಕ್ನಿಕಲ್ ಇರಾಖೆಯುವರ ಅಭಿಪ್ರಾಯವನ್ನು ಸಹ ತೆಗೆದುಕೊಳ್ಳಲಾಗಿವೆ. ಈ ವಿಷಯದಲ್ಲಿ ಲ್ಯಾಬೊರೇಟರಿ ಟೆಸ್ಟ್‌ಗೆ ಸಹ ಪ್ರಯತ್ನವಾಡಿವೆ. ಹಾಗೆ ಮಾಡಿ ವರದಿ ತರಿಸಿ ನೋಡಲಾಗಿದೆ, ಎಲ್ಲಾ ಸರಿಯಾಗಿದೆಯೆಂದು ಗೊತ್ತಾಗಿದೆ. ಹೈಲೈಟ್ ಮಾಡುವಾಗ ಪ್ರಪೋರ್ಷನ್ ಸರಿಯಾಗಿರಬೇಕು, ಅದಿಲ್ಲದಿದ್ದರೆ ಸರಿ ಯಾಗಿರುವುದಿಲ್ಲ. ನೋಡಿದ ತಕ್ಷಣ ಆರ್ಡರ್ ಮಾಡಿದೆ. ಎನ್‌ಕ್ವೈರಿ ಮಾಡಬೇಕು, ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿ ರಿಪೋರ್ಟ್ ಮಾಡಬೇಕು ಸಾಧ್ಯವಾದರ ಲೈಸನ್ಸ್ ಕ್ಯಾನ್ಸಲ್ ಮಾಡಬೇಕು ಎಂದು ಹೇಳಿದೆ. ಅಭಿಪ್ರಾಯ ತೆಗೆದುಕೊಳ್ಳದೆ ದುಡುಕಿದೆ. ಸಾಯಿಲ್ ಟೆಸ್ಟ್ ಲ್ಯಾಬರೋಟರಿ ರಿಪೋರ್ಟ್ ಬಂದ ತಕ್ಷಣ ಹೆಚ್ಚಿಗೆ ಸಮಾಧಾನವಾಯಿತು. ಇದನ್ನು ಹೇಳುವಾಗ ಅಡಲ್ಟ್ರೇಷನ್ ಇಲ್ಲವೇ ಇಲ್ಲ ಎಂದಲ್ಲ. ಅಡಲ್ಟ್ರೇಷನ್ ಬಹಳ ಕಡೆ ಆಗುತ್ತದೆ. ನನಗೆ ನಿನ್ನೆ ಮೊನ್ನೆ ಒಬ್ಬ ಜವಾಬ್ದಾರಿಯುತನಾದ ನೌಕರನಿಂದ ವರದಿ ಬಂದಿದೆ. ಫುಡ್ ಕಾರ್ಪೊರೇಷನ್ ಇಟ್ಟಿರುವ ಚೀಲದಲ್ಲಿ ಅಡಲ್ಟ್ರೇಷನ್ ಆಗಿದೆ. ಈ ಬಗ್ಗೆ ತನಿಖೆ ನಡೆಯುತ್ತಾ ಇದೆ. ಮತ್ತು ಯೋಗ್ಯ ಕ್ರಮ ಕೈಗೊಳ್ಳುತ್ತೇವೆ. ಇನ್ನು ಒಂದು ಮಾತು ಹೇಳಬಲ್ಲೆ. ಅಡಲ್ಟ್ರೇಷನ್ ಯಾರಿಂದಲೇ ನಡೆಯಲಿ, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಿಂದಲೇ ನಡೆಯಲಿ, ಕೇಂದ್ರ ಸರ್ಕಾರದ ಖಾತೆಗಳಿಂದಲೇ ನಡೆಯಲಿ, ಅಥವಾ ಖಾಸಗಿ ಜನರಿಂದಲೇ ನಡೆಯಲಿ ಅಥವಾ ಸಹಕಾರ ಸಂಘಗಳಿಂದಲೇ ನಡೆಯಲಿ ಎಲ್ಲಿ ಅಡಲ್ಟ್ರೇಷನ್ ಆಗಿರುವುದನ್ನು ನೋಡಿದರೂ ಸಹ ಅಡಲ್ಟ್ರೇಷನ್ ಸಲುವಾಗಿ ಟೆಸ್ಟ್ ಮಾಡಿ ಕಟ್ಟಳೆ ಹಾಕುವ ಅಧಿಕಾರವನ್ನು ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ಗೆ ಕೊಟ್ಟಿದ್ದೇವೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಯಾರ ಮುಲಾಜನ್ನೂ ನೋಡದೆ ಟೆಸ್ಟ್ ಮಾಡಿ, ತಪ್ಪಿತಸ್ಥನ ಮೇಲೆ ಕಟ್ಟಳೆ ಹಾಕಬೇಕು ಎಂದು ಹೇಳಿದ್ದೇನೆ. ಅಧಿಕಾರಿಗಳು ಯಾರೇ ಇರಲಿ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಸಿಕ್ಕಿದರೂ ಸಹಿತ ಕೂಡಲೇ ಕಟ್ಟಳೆ ಹಾಕಬೇಕು ಎಂದು ನನ್ನ ಅಭಿಪ್ರಾಯ. ಅಡಲ್ಟ್ರೇಷನ್ ಮಾಡುವುದನ್ನು ಕಡಿಮೆ ಮಾಡಿ ಎಂದು ಹೇಳಿದರೆ ಅದು ನನ್ನ ಕೈಯಲ್ಲಿ ಇಲ್ಲ. ಎಲ್ಲಿಯವರೆಗೆ ಸೊಸೈಟಿಯಲ್ಲಿ ಕೆಟ್ಟ ಪ್ರವೃತ್ತಿ ಮಾಡುವ ದುಷ್ಟ ಜನ ಇರುತ್ತಾರೋ ಅಲ್ಲಿಯವರೆಗೆ ಈ ಅಡಲ್ಟ್ರೇಷನ್ ನಡೆಯುತ್ತದೆ. ಅಂಥಾವರಿಗೆ ಉಗ್ರವಾದ ಶಾಸನ ಮಾಡಿ ಬಂದೋಬಸ್ತು ಮಾಡಬೇಕು. ಅಧಿಕಾರಿಗಳು ಚುರುಕಾಗಿ ಆಗಬೇಕು. ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಪ್ರಾಮಾಣಿಕರಾಗಿ ಸೇವೆಯನ್ನು ಮಾಡುವ ಅವಕಾಶ ಅವರಿಗೆ ಈಗ ದೊರಕಿದೆ. ಅದಕ್ಕಾಗಿ ಅವರು ಪ್ರಯತ್ನ ಮಾಡಬೇಕು. ಹಿಂದೆ ಯಾರನ್ನಾದರೂ ಅವರನ್ನು ಮೈಮೇಲೆ ಹಾಕಿಕೊಳ್ಳುವ ಮಂತ್ರಿಗಳು ಇರುತ್ತಿದ್ದರು. ಈಗ ಆ ತರಹ ಪರಿಸ್ಥಿತಿ ಇಲ್ಲ. ಮುಲಾಜು ನೋಡದೆ ಅವರ ಮೇಲೆ ಕ್ರಮ ತೆಗೆದುಕೊಂಡು ಆಮೇಲೆ ನನ್ನ ಕಡೆಗೆ ಕಳುಹಿಸಬಹುದು ಎಂದು ಹೇಳಿದ್ದೇನೆ. ಹಾಗೆ ಮಾಡದೇ ಇದ್ದರೆ ಒಂದು ದಾಕ್ಷಿಣ್ಯಕ್ಕೆ ಬೀಳಬೇಕಾಗಿತ್ತು. ಈಗ ಗೊಬ್ಬರದ ಮಿಕ್ಸ್ಚರ್‌ನ್ನು ಪರೀಕ್ಷೆ ಮಾಡಬೇಕಾದರೆ ಸಾಯಿಲ್ ಟೆಸ್ಟಿಂಗ್‌ಗೆ ಬೆಂಗಳೂರಿಗೆ ಕಳುಹಿಸಬೇಕಾಗಿದೆ. ಅದಕ್ಕಾಗಿ ಫರ್ಟಿಲೈಸರ್ ಟೆಸ್ಟಿಂಗ್ ಮಾಡುವ ಲ್ಯಾಬೊರೇಟರಿಯನ್ನು 2-3 ರೀಜನ್‌ವೈಸ್ ಪ್ರಾರಂಭ ಮಾಡಬೇಕು ಎನ್ನುವ ಉದ್ದೇಶ ಇದೆ. ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಿ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ.

ಇನ್ನು ಕ್ರಾಪ್ ಪ್ರೊಟೆಕ್ಷನ್ ವಿಷಯವಾಗಿ ಸಹಿತ ಅನೇಕ ಸದಸ್ಯರು ಮಾತನಾಡಿದ್ದಾರೆ. ಕ್ರಾಪ್ ಪ್ರೊಟೆಕ್ಷನ್ ವಿಷಯವಾಗಿ ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ಏರಿಯಲ್ ಸ್ಪ್ರೇ ಕೇಂದ್ರ ಸರ್ಕಾರದ ಸಹಾಯದಿಂದ ತೆಗೆದುಕೊಳ್ಳಲಿಕ್ಕೆ ಈಗಾಗಲೇ ಆಜ್ಞೆ ಹೊರಡಿಸಲಾಗಿದೆ. ಇದು ಬಡಬೋರೇಗೌಡನ ಬೊಕ್ಕಸಕ್ಕೆ ಖರ್ಚು ಬೀಳುವುದರಿಂದ ಎಲ್ಲಿ ಅವಶ್ಯವಾಗಿ ಬೀಳುತ್ತದೆ ಅಲ್ಲಿ ಮಾಡಿ, ಇಲ್ಲದಿದ್ದರೆ ಗ್ರೌಂಡ್ ಸ್ಪ್ರೇಯಿಂಗ್ ಮಾಡಿ ಎಂದು ಹೇಳಿದ್ದೇವೆ. ಎಲ್ಲಿ ಗ್ರೌಂಡ್ ಸ್ಪ್ರೇಯಿಂಗ್ ಎಪಿಡಮಿಕ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ ಅಲ್ಲಿ ಏರಿಯಲ್ ಸ್ಪ್ರೇಯಿಂಗ್ ತೆಗೆದುಕೊಳ್ಳಲಾಗಿದೆ ಎಂದು ನೋಟಿಫಿಕೇಷನ್ ತೆಗೆದಿದ್ದೇವೆ ಪೆಸ್ಟ್ ಕಂಟ್ರೋಲ್ ಆಕ್ಟ್ ಮೈಸೂರಿನಲ್ಲಿ ಅಮಲ್‌ನಲ್ಲಿ ಬಂದಿರುವುದನ್ನು ಗಮನದಲ್ಲಿಡಬೇಕು. ಇದನ್ನು ತೀವ್ರವಾಗಿ ಗಮನಕ್ಕೆ ತೆಗೆದು

(ಶ್ರೀ ಕೆ. ಎಚ್. ಪಾಟೀಲ್)

ಕೊಳ್ಳುತ್ತೇನೆ ಎಂದು ಹೇಳುತ್ತೇನೆ. ಸರ್ಕಾರದವರಿಗೆ ಗೊತ್ತಿರುವಹಾಗೆ ಕೇಂದ್ರದಿಂದ ಮಂಜೂರಾಗುವ ಸ್ಕೀಮುಗಳು ಜನವರಿ, ಫೆಬ್ರುವರಿಯಲ್ಲಿ ಮಂಜೂರು ಆಗಿ ಮಾರ್ಚಿಯಲ್ಲಿ ರ‍್ಯಾಪ್ಸ್ ಆಗುತ್ತಿತ್ತು. ಆರೀತಿ ಹಿಂದಿನ ಸದನದಲ್ಲಿ ಟೀಕೆ ಮಾಡಿದ್ದು ನನ್ನ ಗಮನಕ್ಕೆ ಬಂದಿದೆ. ಆರೀತಿ ಆಗದಂತೆ ಕೇಂದ್ರ ಸರ್ಕಾರದವರ ಕಾಂಪೋಸಿಟ್ ಸ್ಕೀಮುಗಳು ಮಂಜೂರಾಗಿ ಏನು ಬಂದಿವೆ ಅವುಗಳನ್ನು ಈಗಾಗಲೇ ಕಾರ್ಯಗತಗೊಳಿಸಬೇಕು ಎನ್ನುವ ಉದ್ದೇಶ ಇದೆ. ಒಂದೊಂದು ಸ್ಕೀಮನ್ನೂ ಒಂದೊಂದು ಭಾಗಕ್ಕೆ ಮಾಡಿ ಎಲ್ಲೆಲ್ಲಿ ಯಾವ ಯಾವ ಪೀಕುಗಳು ಬೆಳೆಯುತ್ತಾರೋ ಅದನ್ನು ಶೋಧಿಸಿ ಆ ಸ್ಕೀಮ್ ಕೊಡಬೇಕೆಂದು ಆಜ್ಞೆ ಮಾಡಿದ್ದೇನೆ. ಆ ರೀತಿ ಸಮಸ್ತ ಮೈಸೂರು ರಾಜ್ಯದ ಜನತೆ ವ್ಯವಸಾಯಗಾರರು ಲಾಭವನ್ನು ಪಡೆಯುತ್ತಾರೆ.

ಇನ್ನು ಹಾರ್ಟಿಕಲ್‌ಚರ್ ವಿಷಯದಲ್ಲಿ ಯಾವುದೇ ತರಹ ಟೀಕೆಗಳು ಬರಲಿಲ್ಲ. ಸೀಡ್ಸ್ ವಿಷಯದಲ್ಲಿ ಸಹ ಮಾನ್ಯ ಸದಸ್ಯರು ಮಾತನಾಡಿರುವ ವಿಷಯವನ್ನು ನಾನು ಬಹಳ ಗಮನಿಸಿದೆ. ಹಿರಿಯ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಒಂದು ಅರ್ಜಿಯನ್ನು ಕಳುಹಿಸಿದರು. ಅವರು ಕಳುಹಿಸಿದ ಕೂಡಲೇ ತನಿಖೆಗಾಗಿ ಹಿಂದಿನ ದಿವಸವೇ ಕಳುಹಿಸಿಕೊಟ್ಟೆ. ಈ ತನಿಖೆಯಿಂದ ಅವರಿಗೆ ಸಮಾಧಾನವಾಯಿತೋ ಇಲ್ಲವೋ ಗೊತ್ತಿಲ್ಲ. ಅವರು ಹೇಳಿದ ವಾದ ಇಷ್ಟೆ. ನಾವು ಹೋದ ವರ್ಷ 4½ ರೂಪಾಯಿಗೆ ಖರೀದಿ ಮಾಡಿದೆವು. ಬೀಜಗಳು ಬೇಕಾದವರು ಯಾರು ಯಾರಿಂದ ಖರೀದಿ ಮಾಡಬೇಕೋ ಅವರಿಂದ ಖರೀದಿ ಮಾಡಲು ಒಬ್ಬರಿಗೆ ಒಂದು ರೇಟು, ಒಬ್ಬರಿಗೆ ಒಂದು ರೇಟು ಮಾಡಿಲ್ಲ. ಬೀಜಗಳು ಸಿಕ್ಕದ ಮೇಲೆ 4 ರೂಪಾಯಿ ರೇಟು ಮಾಡಿದ್ದೇವೆ. ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರು ಸಮಾಧಾನ ಮಾಡಿಕೊಳ್ಳಬಹುದು ಎಂದು ನಾನು ತಿಳಿದಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಕಳಪೆ ಸೀಡ್ಸ್ ಮಾರಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಕೆಲವು ಸಂದರ್ಭಗಳಲ್ಲಿ ಬೀಜವನ್ನು ಹಂಚುವಾಗ ನ್ಯಾಷನಲ್ ಸೀಡ್ಸ್ ಕಾರ್ಪೋರೇಷನ್‌ನವರಿಂದ ಸರ್ಟಿಫೈ ಆಗಿದ್ದ ಸೀಡ್ಸ್ ಸಮರ್ಪಕವಾಗಿ ಹುಟ್ಟಲಿಲ್ಲ ಎಂದು ನನಗೆ ವರದಿ ಬಂದಿದೆ. ಆಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನವರು 'ಸಮರ್ಪಕವಾದ ರೀತಿಯಲ್ಲಿ ಬೀಜಗಳನ್ನು ವಿತರಣೆ ಮಾಡಬೇಕು, ಸರಿಯಾಗಿ ಟೆಸ್ಟ್ ಮಾಡಿದ್ದಾರೆ ಮತ್ತು ನಮ್ಮ ಜರ್ಮಿನೇಷನ್ ಟೆಸ್ಟ್ 90 ಪರ್ಸೆಂಟ್‌ಗಿಂತ ಹೆಚ್ಚು ಬಂದಿದೆ' ಎನ್ನುವ ಮಾತನ್ನು ಹೇಳಿದರು. ಅವರೂ ಕೆಲವು ಕಡೆ ಹುಟ್ಟಲಿಲ್ಲ ಎಂದು ನನಗೆ ಗೊತ್ತಿರುವುದರಿಂದ ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿ ಎಲ್ಲೆಲ್ಲಿ ತೀರ ಹಾನಿಗೆ ಈಡಾಗಿದ್ದಾರೆ ಅಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಸೀಡ್ಸನ್ನು ಅವರಿಗೆ ಪುಕ್ಕಟೆ ಕೊಟ್ಟು ಕಾಂಪನ್ಸೇಟ್ ಮಾಡಬೇಕು ಮತ್ತು ಆಗ್ರೋ ಇಂಡಸ್ಟ್ರೀಸ್ ಪರವಾಗಿ ಅಪಾಲಜಿ ಕೇಳಿರಿ ಎನ್ನುವ ಮಾತು ಹೇಳಿದ್ದೇನೆ. ಇಷ್ಟೊಂದು ಹೇಳಿದ ಮೇಲೆ ಮಾನ್ಯ ಸದಸ್ಯರಿಗೆ ಸಮಾಧಾನವಾಗಬಹುದು ಎಂದು ತಿಳಿದುಕೊಂಡಿದ್ದೇನೆ. ಈ ರೀತಿ ಬೀಜಗಳ ವಿತರಣೆ ಈಗಾಗಲೇ ಆಗಿದೆ. ಎಲ್ಲಿಯಾದರೂ ಆಗದೇ ಇದ್ದಂಥ ಸಂದರ್ಭ ಇದ್ದರೆ ನನ್ನ ಗಮನಕ್ಕೆ ತಂದರೆ ಎನ್‌ಕ್ವೈರಿ ಮಾಡಿ ಸಮರ್ಪಕವಾಗಿ ನಿರ್ಣಯವನ್ನು ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri C. ANDANEPPA (Hadagali).—They are not certified by the NSC.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಮಾತನ್ನು ಗಮನಿಸಿದ್ದೇನೆ. ಅನ್‌ಸರ್ಟಿಫೈಡ್ ಸೀಡ್ಸ್ ಮಾರಿದ್ದರೆ ಹಾಗೆ ಮಾಡಬಾರದು ಎಂದು ಈ ಸದನದ ಮೂಲಕ ಹೇಳುತ್ತಿದ್ದೇನೆ. ಇದನ್ನೇ ಸರ್ಕಾರದ ಆಜ್ಞೆ ಎಂದು ತಿಳಿಯಬಹುದು ಎಂದು ಹೇಳುತ್ತೇನೆ.

Sri C. ANDANEPPA.—They are not certified by the NSC.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಾ ಎನ್.ಎಸ್.ಸಿ. ಯವರೇ ಸರ್ಟಿಫೈ ಮಾಡಬೇಕೆಂದು ಇಲ್ಲ. ಬೀಜವನ್ನು ಸರ್ಟಿಫೈ ಮಾಡಬೇಕಾದರೆ ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಕೂಡ ಸರ್ಟಿಫೈ ಮಾಡಬಹುದು. ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಅವರು ಸರ್ಟಿಫೈ ಮಾಡುವಾಗ ತೊಂದರೆ ಇದೆ ಎಂದು ಹೇಳುವುದಾದರೆ ಆ ಬಗ್ಗೆ ತನಿಖೆ ಮಾಡೋಣ. ಎನ್.ಎಸ್.ಸಿ. ಗೆ ಹೋಗಿ ನಮ್ಮ ಸರ್ಕಾರದ ಬೀಜ ಸರ್ಟಿಫೈ ಮಾಡಬೇಕು ಎಂದು ಹೇಳುವುದು ಸೂಕ್ತವಲ್ಲ. ಆ ಧೋರಣೆ ನಾನು ಒಪ್ಪುವುದಿಲ್ಲ.

11-00 A.M.

ಹಾರ್ಟಿಕಲ್ಚರ್ ವಿಷಯವಾಗಿ ಯಾವುದೇ ಟೀಕೆಯನ್ನು ಮಾಡಿಲ್ಲ. ಒಂದು ಟೀಕೆಯನ್ನು ಮಾತ್ರ ನಾನು ನೋಡಿದೆ. ಬಿದರೆಯ ಸ್ನೇಹಿತರು ಮಾತ್ರ ಅವರ ಭಾಗದಲ್ಲಿ ಹಾರ್ಟಿಕಲ್ಚರ್ ಡೆವಲಪ್ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಹರಿಹರದವರೆಗೆ ಹಾರ್ಟಿಕಲ್ಚರ ಡೆವಲಪ್‌ಮೆಂಟ್ ಬಹಳ ಚೆನ್ನಾಗಿ ಆಗಿದೆ. ಅಲ್ಲಿಂದ ಮುಂದಕ್ಕೆ ಉತ್ತರ ಕರ್ಣಾಟಕ, ಹೈದರಾಬಾದ್ ಕರ್ಣಾಟಕ ಎಲ್ಲಿಯೂ ತೋಟಗಾರಿಕೆ ವಿಭಾಗ ಸಾಕಷ್ಟು ರೀತಿಯಿಂದ ಬೆಳವಣಿಗೆ ಮಾಡಿಲ್ಲ. ಅದಕ್ಕೆ ಕಾರಣ, ಇಲ್ಲಿ ಬಹುಪುರಾತನ ಕಾಲದಿಂದ ತೋಟಗಾರಿಕೆ ಬಗ್ಗೆ ಆಸ್ಥೆ ಇದ್ದಂಥ ಪ್ರವೃತ್ತಿ ಬೆಳೆದು ಬಂದಿದೆ. ಅದಕ್ಕೆ ಅನುಕೂಲವಾದ ವಾತಾವರಣ, ಹವೆ ಇಲ್ಲದೆ. ಅಲ್ಲಿರುವ ವಾತಾವರಣದಲ್ಲಿ ತೋಟಗಾರಿಕೆ ಚೆನ್ನಾಗಿ ಬರುವುದಿಲ್ಲವೆಂಬ ಭಾವನೆ ಇದೆ. ಅದಕ್ಕಾಗಿಯೇ ಅಲ್ಲಿಯೂ ಕೂಡ ಹಾರ್ಟಿಕಲ್ಚರ್ ಡೆವಲಪ್ ಮಾಡಲೇ ಬೇಕು ಎಂಬುದು ಈ ಸರ್ಕಾರದ ಉದ್ದೇಶವಾಗಿದೆ. ಎಲ್ಲ ಭಾಗಗಳಲ್ಲಿಯೂ ಸಮಾನವಾದ ರೀತಿಯಿಂದ ತೋಟಗಾರಿಕೆ ಬೆಳೆಯಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಬೆಂಗಳೂರಿನಲ್ಲಿ ತೋಟಗಾರಿಕೆ ಬೆಳೆದರೂ ಕೂಡ ಬೆಂಗಳೂರಿನ ಸುತ್ತಮುತ್ತ ಗ್ರೀನ್ ಬೆಲ್ಟ್ ನಶಿಸಿಹೋಗಿದೆ. ಬೆಂಗಳೂರಿನಿಂದ 20—30 ಮೈಲಿ ದೂರ ಹೋದರೂ ಬರೇ ಗುಡ್ಡ ಕಾಣುತ್ತಿದೆ, ಬೆಂಗಳೂರಿನ ಸುತ್ತ ಅರಣ್ಯವನ್ನು ಬೆಳೆಸಬೇಕೆಂದು ತೀವ್ರ ಪ್ರಯತ್ನ ಮಾಡಲಾಗುತ್ತಿದೆ. ಅದು ಮೆಕಾನೈಸ್ಡ್ ಕಲ್ಟಿವೇಷನ್‌ನಿಂದ ಪ್ರಾರಂಭವಾಗಬೇಕು. ಇನ್ನು ನಾಲ್ಕು ವರ್ಷದಲ್ಲಿ ಈ ಸ್ಕೀಂ ಪ್ರಕಾರ ಕಾಡು ಬೆಳೆಯಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಗ್ರೀನ್ ಬೆಲ್ಟ್ ಬೆಳೆಯುವ ದೃಷ್ಟಿಯಿಂದ 30 ಮೈಲಿ ಫಾಸಲೆಯಲ್ಲಿ ಅಫಾರೆಸ್ಟೇಷನ್ ತೆಗೆದುಕೊಳ್ಳಬೇಕೆಂದು ಸರ್ಕಾರದ ಇಚ್ಛೆಯನ್ನು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಕೆಲಸ ಇನ್ನು ಸ್ವಲ್ಪ ದಿವಸದಲ್ಲಿಯೇ ನಡೆಯುತ್ತದೆ ಎಂದು ಹೇಳುತ್ತೇನೆ.

ಒಬ್ಬ ಅಧಿಕಾರಿ ಯಶವಂತರಾವ್ ಐಲಿ ಎನ್ನುವವರ ವಿಷಯವಾಗಿ ಮಾನ್ಯ ಸದಸ್ಯರು ಹೇಳಿದರು. ನಾನು ಆ ಬಗ್ಗೆ ನೋಡಿದೆ. ಈಗಾಗಲೇ ಸ್ಪಷ್ಟವಾದ ಆದೇಶವನ್ನು ಕೊಟ್ಟಿದ್ದೇವೆ. ಸರ್ಕಾರದ ಆಜ್ಞೆ ಅವರ ಕೈ ಮುಟ್ಟಿದೆ. ಈ ಆಜ್ಞೆ ಸಂಬಂಧಪಟ್ಟ ಅಧಿಕಾರಿಗೆ ಮುಟ್ಟಬೇಕಾದರೆ ಅದಕ್ಕೆ ಒಂದು ಪ್ರೊಸೀಜರ್ ಇದೆ. ಪ್ರೊಸೀಜರ್ ವಿಷಯದಲ್ಲಿ ಮಾನ್ಯ ಸದಸ್ಯರು ಸಹಕಾರ ಮಾಡಬೇಕು. ಡೈರೆಕ್ಟರವರು ಯಶವಂತ ಐಲಿ ಎನ್ನುವವರು ಹಾಜರಿ ಮಾಡಿಕೊಳ್ಳಲು, ನನ್ನ ಅಭ್ಯಂತರವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅವರು ಹೋದರೂ ತೆಗೆದುಕೊಳ್ಳಲಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಆಜ್ಞೆ ಪ್ರಕಾರ ಟ್ರಾನ್ಸ್‌ಫರ್ ಆಗಿರುವುದರಿಂದ ಆ ಆಜ್ಞೆ ದೊರುಕುವ ಮೊದಲೇ ಹೇಗೆ ಹೋದ ಎಂದು ಕೇಳಬೇಕಾಗುತ್ತದೆ. ಈ ವಿಚಾರದಲ್ಲಿ ಡೈರೆಕ್ಟರನ್ನು ಅಭಿನಂದಿಸುತ್ತೇನೆ. ಸರ್ಕಾರದ ಆಜ್ಞೆ ಕೈ ಸೇರುವ ಮೊದಲೇ ಈ ಅಧಿಕಾರಿ ಯಾವರೀತಿಯಿಂದ ಹೋಗಿ ಹಾಜರಾಗುತ್ತೇನೆಂದು ಕೇಳುತ್ತಿದ್ದಾನೆ? ಕೇಳುವುದೂ ಸೂಕ್ತವಲ್ಲ, ಹೇಳುವುದೂ ಸೂಕ್ತವಲ್ಲ. ಡೈರೆಕ್ಟರ್ ಆರ್ಡರ್ ಕೊಡದೆ ಹೇಗೆ ಹೋದ? ಆ ಅಧಿಕಾರಿಯನ್ನು ಹಾಜರು ಮಾಡಿಸಿಕೊಳ್ಳಲಿಕ್ಕೆ ಡೈರೆಕ್ಟರ್ ಒಪ್ಪಿದ್ದಾರೆ. ನಿಜವಾಗಿ ಈ ರೀತಿ ಅಧಿಕಾರಿಗೆ ಒಂದು ಸಾರಿ ಕ್ಷಮಾಪಣೆ ಮಾಡಬಹುದೇ ವಿನಾ, ಇಂಥ ವಿಚಾರಗಳು ಪುನರಪಿ ಬಂದರೆ ಅಂಥ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳದೆ ಗತ್ಯಂತರವಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ

ಕೃಷಿ ವಿಶ್ವವಿದ್ಯಾಲಯದ ಸಲುವಾಗಿ ಅನೇಕ ಸದಸ್ಯರು ಹೇಳಿದ್ದಾರೆ. ಅದರೊಳಗೆ ಕೆಲವು. ಸದಸ್ಯರು ಒಕ್ಕಲುತನ ಮಾಡುವಂಥ ವ್ಯವಸಾಯಗಾರರ ಮಕ್ಕಳಿಗೆ ಇಲ್ಲದಂಥ ಶಿಕ್ಷಣ ಎಂಥ ಶಿಕ್ಷಣ ಎಂದು ಕರೆದಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ನಾನು ಪರೀಕ್ಷೆ ಮಾಡಿ ನೋಡಿದ್ದರಲ್ಲಿ ಬಂದಂಥ ಅರ್ಜಿಗಳಲ್ಲಿ 50 ಪರ್ಸೆಂಟ್ ಅರ್ಜಿಗಳಲ್ಲಿ ಉದ್ಯೋಗವೆಂದರೆ ಒಕ್ಕಲುತನ ಎಂದು ಬರೆದಿರುತ್ತಾರೆ. ಅದು ಇದೆಯೋ ಇಲ್ಲವೋ ಗೊತ್ತಿಲ್ಲ ಒಕ್ಕಲುತನ ಅಥವಾ ವ್ಯವಸಾಯ ಎಂದು ಬರೆದಿರುತ್ತಾರೆ. ಹಿಂದೆ ಇರತಕ್ಕ ಆಜ್ಞೆ ಪ್ರಕಾರ ನೋಟಿಫಿಕೇಷನ್ ತೆಗೆದಿದ್ದರು. ವ್ಯವಸಾಯ ವಿಶ್ವವಿದ್ಯಾಲಯದ ವೈಸ್ ಛಾನ್ಸಲರು ವ್ಯವಸಾಯಗಾರರು 50 ಪರ್ಸೆಂಟ್ ಇದ್ದಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನನಗೆ ಸಮಾಧಾನವಾಗಿಲ್ಲ. ಆದರೂ ಸಹ ಹೊಸ ಕಾಯಿದೆ ಮಾಡಿ, ಈ ವರ್ಷಕಾಲ ಮೀರಿದೆ, ಮುಂದಿನ ವರ್ಷ ಒಕ್ಕಲಿಗರ ಮಕ್ಕಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಸಿಕ್ಕಬೇಕೆಂಬುದು ನನ್ನ ಆಸೆ. ಆ ಬಗ್ಗೆ ಈಗಿರುವ ಕಾಯಿದೆಯನ್ನು ಬದಲಾವಣೆ ಮಾಡುವ ಸಲುವಾಗಿ ತಮ್ಮ ಎದುರಿಗೆ ತರುತ್ತೇನೆ. ಆವಾಗ ತಮ್ಮ ಬೆಂಬಲವನ್ನು ಕೋರುತ್ತೇನೆ. ಅಗ್ರಿಕಲ್ಚರ

(ಶ್ರೀ ಕೆ. ಎಚ್. ಪಾಟೀಲ್)

ಯೂನಿವರ್ಸಿಟಿಯಲ್ಲಿ ಅನೇಕ ರೀತಿಯ ಮಾರ್ಪಾಡುಗಳು ಆಗಬೇಕಾಗಿವೆ. ಕಾಯಿದೆ ಇಲಾಖೆಯ ಪರಿಣತರನ್ನು ಕೇಳಿ ಸೂಕ್ತವಾದ ತಿದ್ದುಪಡಿಗಳನ್ನು ಮಾಡಿ ಕಾಯಿದೆಯನ್ನು ತಮ್ಮ ಮುಂದೆ ಇಡುತ್ತೇನೆ.

ಮಹಾರಾಷ್ಟ್ರದಲ್ಲಿ ವಿಶ್ವವಿದ್ಯಾಲಯಗಳು ಬಹಳವಾಗಿವೆ, ಇಲ್ಲಿ ಬಹಳ ಆಗಿಲ್ಲ ಎನ್ನುವ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುತ್ತಾರೆ. ಮಹಾರಾಷ್ಟ್ರದಲ್ಲಿ ಮೂರು ವಿಶ್ವವಿದ್ಯಾಲಯಗಳಿದ್ದರೆ ನಮ್ಮಲ್ಲಿ ಒಂದು ಒಕ್ಕಲುತನದ ವಿಶ್ವವಿದ್ಯಾಲಯವಿದೆ. ನಮ್ಮಲ್ಲಿಯೂ ಇನ್ನೂ ಒಂದೆರಡು ಒಕ್ಕಲುತನದ ವಿಶ್ವವಿದ್ಯಾಲಯಗಳ ಸಲುವಾಗಿ ನಾವು ಪ್ರಯತ್ನ ಮಾಡಬೇಕು. ಇನ್ನೂ ಒಂದೆರಡು ಜನರಲ್ ಯೂನಿವರ್ಸಿಟಿಗಳಾಗಬೇಕು ಎಂದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದು ಆಗುವುದರ ಜೊತೆಗೆ ಒಕ್ಕಲುತನದ ಯೂನಿವರ್ಸಿಟಿ ಸಹಿತ ಹೆಚ್ಚಾಗಬೇಕು. ಕೇಂದ್ರ ಸರ್ಕಾರದೊಡನೆ ಪರಿಶೀಲನೆ ಮಾಡಿ ನಮಗೆ ಎಷ್ಟು ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ ಎನ್ನುವುದನ್ನು ನೋಡಿಕೊಂಡು ಮಾಡೋಣ. ಈ ವಿಷಯವಾಗಿ ಮುಖ್ಯ ಮಂತ್ರಿಗಳೊಡನೆ ವಿಚಾರ ಮಾಡಿ ಅವರನ್ನೂ ಕರೆದುಕೊಂಡು ಕೇಂದ್ರ ಸರ್ಕಾರದ ಮಂತ್ರಿಗಳಲ್ಲಿ ಆಲೋಚನೆ ಮಾಡುತ್ತಿದ್ದೇನೆ. ಅವಶ್ಯವಿದ್ದರೆ ಎರಡೋ ಅಥವಾ ಅದಕ್ಕಿಂತ ಹೆಚ್ಚೋ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡುವುದರ ಅವಶ್ಯಕತೆ ನಮ್ಮ ರಾಜ್ಯದಲ್ಲಿದೆ ಎನ್ನುವ ವಿಷಯವನ್ನು ಕೂಡ ಬೆಂಬಲಿಸುತ್ತೇವೆ.

ಅಗ್ರಿಕಲ್ಚರಲ್ ಪಾಲಿಟೆಕ್ನಿಕ್ ಸಲುವಾಗಿ ಕೇಂದ್ರ ಸರ್ಕಾರದ ಎದುರಿಗೆ ವಿಚಾರವಿದೆ. ಅದರ ಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ನಮ್ಮ ರಾಜ್ಯಕ್ಕೆ ಒಂದು ಅಂಥ ಪಾಲಿಟೆಕ್ನಿಕ್ ಕೊಡಲಿಕ್ಕೆ ಈಗಾಗಲೇ ಔಪಚಾರಿಕವಾಗಿ ಒಪ್ಪಿದ್ದಾರೆ. ಒಂದಕ್ಕಿಂತ ಹೆಚ್ಚು ಎಂದರೆ ಎರಡು ಪಾಲಿಟೆಕ್ನಿಕ್ ಬೇಕು ಎಂದು ಕೇಳುತ್ತಿದ್ದೇವೆ.

ತಮ್ಮೆಲ್ಲರ ಇಚ್ಛೆಯನ್ನು, ಮನಸ್ಸನ್ನು ಕೆರಳಿಸಿರುವಂಥ ಅರಣ್ಯ ಸಂಪತ್ತಿನ ವಿಷಯವಾಗಿ ನಾನು ಕೆಲವು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಅರಣ್ಯ ಸಂಪತ್ತಿನ ಸಂಬಂಧದಲ್ಲಿ ಪ್ರಾಮುಖ್ಯವಾಗಿ ಮೂರು ಮಾತುಗಳನ್ನು ಹೇಳಿದ್ದಾರೆ. ಒಂದನೆಯದು ಫಾರೆಸ್ಟ್ ವಿಷಯದಲ್ಲಿ ಪ್ಲಾನ್ ಆಫ್ ವರ್ಕ್ ಇಲ್ಲ, ಎರಡನೆಯದು ಸ್ಮಗ್ಲಿಂಗ್ ಇನ್ನೂ ಸಾಕಷ್ಟು ಕಂಟ್ರೋಲ್ ಆಗಿಲ್ಲ, ಮೂರನೆಯದು ಲ್ಯಾಂಡ್ ಕೊಡುವಂಥ ವಿಷಯದಲ್ಲಿ ಸರ್ಕಾರದಿಂದ ತೆಗೆದುಕೊಳ್ಳುವ ಧೋರಣೆಯಿಂದ ಭೂ ರಹಿತರಿಗೆ ಬಹಳ ತೊಂದರೆಯಾಗಿದೆ. ಅದಕ್ಕೆ ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕು ಎನ್ನುವುದನ್ನು ಆ ಕಡೆಯ ಸದಸ್ಯರೂ, ಈ ಕಡೆಯ ಸದಸ್ಯರು ಎಲ್ಲರೂ ಹೇಳಿದ್ದಾರೆ. ಈ ಮೂರು ಮಾತುಗಳ ಜೊತೆಗೆ ಇನ್ನೂ ಕೆಲವು ಏನು ಹೇಳಿದ್ದಾರೆಂದರೆ, ಇಲಾಖೆ ಕರಪ್ಟ್ ಅಧಿಕಾರಿಗಳಿಂದ ತುಂಬಿದೆ, ಲೋಕೋಪಯೋಗಿ ಇಲಾಖೆ ಎನಿಮಿ ನಂಬರು ಒಂದು ಆದರೆ, ಫಾರೆಸ್ಟ್ ಡಿಪಾರ್ಟ್‌ಮೆಂಟ್ ಎನಿಮಿ ನಂಬರ್ ಎರಡು ಆಗಿದೆ ಎಂದು ಹೇಳಿದ್ದಾರೆ. ಎಲ್ಲಿ ಬೆಲ್ಲವಿರುತ್ತದೆ ಅಲ್ಲಿ ನೊಣ ಕೂಡುತ್ತದೆ.

ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ದುಡ್ಡನ್ನು ನಿರಾಯಾಸವಾಗಿ ತಿನ್ನಲಿಕ್ಕೆ ಬರುತ್ತದೆ. ಹಣ ತಿನ್ನುವವರು ಫಾರೆಸ್ಟ್ ಇಲಾಖೆಯಲ್ಲಿಯೂ ಹಣವನ್ನು ದೋಚಲಿಕ್ಕೆ ಅವಕಾಶವಿದೆ. ಅದಕ್ಕೋಸ್ಕರ ಈ ಕೆಟ್ಟ ಹುಳುಗಳು ಕಾಡುತ್ತಿವೆ. ಕೆಟ್ಟ ಹುಳುಗಳಿಂದ ಹೇಗೆ ದೇಶವನ್ನು ರಕ್ಷಣೆ ಮಾಡಬೇಕು ಎನ್ನುವುದನ್ನು ನಾವು ನೀವು ಆಲೋಚನೆ ಮಾಡಬೇಕು. ಇವೊತ್ತು ಅಧಿಕಾರಸ್ಥರು ಪರಿಶುದ್ಧರಾಗಿದ್ದಾರೆ ಎಂದು ಹೇಳಿದರೆ ಅವರು ಲಂಚದಿಂದ ದೂರವಾಗುವುದಿಲ್ಲ. ಅಧಿಕಾರಿಗಳು ಲಂಚಕೋರರು ಎಂದರೆ ಅವರು ಲಂಚದಿಂದ ದೂರವಾಗುವುದಿಲ್ಲ. ಈ ಎರಡು ಮಾತುಗಳನ್ನು ತಿಳಿದುಕೊಂಡು ಅಧಿಕಾರಿಗಳಿಂದ ಸಮರ್ಪಕವಾಗಿ ಕೆಲಸ ಹೇಗೆ ತೆಗೆದುಕೊಳ್ಳಬೇಕು ಎಂದು ನಾವು ನೀವೂ ಆಲೋಚನೆ ಮಾಡಬೇಕು. ಅಧಿಕಾರಸ್ಥರು ಎಂದರೆ ಬಿಡಲಾರದ ಕರ್ಮ, ಒಂದು ಕಡೆ ವರ್ಗಾ ಮಾಡಿದರೆ ಕೆಟ್ಟತನ ಹೋಗುವುದಿಲ್ಲ ಕೆಟ್ಟತನ ಹಬ್ಬುತ್ತದೆ. ಲಂಚಕೋರ ಎಂದು ಹೇಳಿದರೆ, ಲಂಚಕೋರತನ ಹೋಗುವುದಿಲ್ಲ ಲಂಚಕೋರ ಎಂದು ಹೇಳಿದ ಮೇಲೆ ಇನ್ನು ಏನು ಉಳಿಯಿತು ಎನ್ನುವುದು ಆಗುತ್ತದೆ. ಎರಡನ್ನು ಹೊಂದಾಣಿಸಿ ಕಾರ್ಯ ಮಾಡಬೇಕಾಗಿದೆ. ಇದಕ್ಕೆ ತಮ್ಮ ಸಹಕಾರ ಹೆಚ್ಚಾಗಿ ಬೇಕು. ವಿರೋಧಪಕ್ಷದ ಸದಸ್ಯರ ಸಹಕಾರ ಒಂದೇ ಅಲ್ಲ, ಎಲ್ಲಾ ಮಾನ್ಯ ಸದಸ್ಯರ ಸಹಕಾರವೂ ಬೇಕು ಎಂದು ಸಭಾಧ್ಯಕ್ಷಿಣಿಯವರ ಮೂಲಕ ಕೇಳಿಕೊಳ್ಳುತ್ತೇನೆ. ಏಕೆಂದರೆ ಬೆಳೆದು ಬಂದಂಥ ಲಂಚಕೋರತನ, ಕಳ್ಳತನ ಸುಮ್ಮನೆ ಇದ್ದರೂ ಇರಗೊಡುವುದಿಲ್ಲ. ಅಧಿಕಾರಸ್ಥರು ಮಡಿಯಲ್ಲಿ ಇದ್ದರೂ ಏನಾದರೂ ಮಾಡಿ ಮೈಲಿಗೆ ಮಾಡುವುದಕ್ಕೆ ಪ್ರಯತ್ನ ಮಾಡುವ ಕದೀಮ ಕಂಟ್ರಾಕ್ಟರುಗಳು ಇರುತ್ತಾರೆ. ಅವರು ಅಧಿಕಾರಿಗಳಿಂದ ದೂರ ಇರಬೇಕು ಎಂದು ಎಷ್ಟು ಹೇಳಿದರೂ ಬೆಳೆದು ಬಂದಂಥ ಜಾಡ್ಯದ ಪರಿಣಾಮವಾಗಿ ಅವರು ಸಮೀಪ ಸಮೀಪಕ್ಕೆ ಹೋಗುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಸಮೀಪಕ್ಕೆ ಹೋಗುವ ಪರಿಣಾಮವಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಬಡವರಿಗೆ ಮತ್ತು ಶ್ರೀಮಂತರಿಗೆ ಆಗುತ್ತಿರುವ ಒಂದು ರೀತಿಯ ಅವ್ಯವಹಾರಿಕ ನಡವಳಿಕೆಗಳನ್ನು ನಾವು ಈ ಖಾತೆಯಲ್ಲಿ ಕಾಣುತ್ತಿದ್ದೇವೆ. ಅನೇಕ ಜನ ಲ್ಯಾಂಡ್ ಇಲ್ಲದವರಿಗೆ ಲ್ಯಾಂಡ್ ಕೊಡಿ ಎಂದು ವಾದವಾಡುತ್ತಿದ್ದಾರೆ. ಈವೊತ್ತಿನ ದಿವಸ ಹೊಲ ಇಲ್ಲದವರಿಗೆ ಹೊಲ ಹಂಚಲಿಕ್ಕೆ ಕೊಟ್ಟಂಥ ಭೂಮಿ ಅಷ್ಟು ಸಮರ್ಪಕವಾಗಿ ಹಂಚಿಕೆಯಾಗಿಲ್ಲ. ಕಾರವಾರದಲ್ಲಿ ಒಂದು ಸಾ ನೋಟಿಫಿಕೇಷನ್ ರದ್ದು ಮಾಡಿದ್ದೇವೆ. ಅನೇಕ ಸ್ನೇಹಿತರು ಇವತ್ತು ವಾದ ಮಾಡುತ್ತಿದ್ದಾರೆ, ಆದರೆ ನಾನು ಅವರನ್ನು ಇಷ್ಟು ಮಾತ್ರ ಕೇಳುತ್ತೇನೆ. ನಾವು ಕೊಟ್ಟಂಥ ಹೊಲ ಎಷ್ಟು ಜನ ಬಡವರಿಗೆ ಮುಟ್ಟಿದೆ ಎಂದು? ಇದಕ್ಕೆ ತಾವು ಏನು ಉತ್ತರ ಹೇಳಬಲ್ಲಿರಿ? ಮಾನ್ಯ ಸ್ನೇಹಿತರಾದ ಗುಂಡುರಾವ್ ಅವರು, ಒಬ್ಬರಿಗೆ 2900 ಎಕರೆ ಜಮೀನನ್ನು ಕೊಟ್ಟು ಬಿಟ್ಟಿದ್ದಾರೆ ಎಂದು ಒಂದು ಮಾತು ಹೇಳಿದರು. ಜಮೀನು ಕೊಡಬೇಕಾದರೆ, ಸರ್ಕಾರಕ್ಕೆ ಯಾರು ಅಧಿಕಾರ ಕೊಟ್ಟವರು? ಬಡವರ ಹೆಸರಿನಿಂದ ಇವತ್ತು ಲಕ್ಷ ಎಕರೆ ಭೂಮಿ ಕೊಟ್ಟರಿ, ಆದರೆ ಅದೇ ಬಡವ ಅರ್ಜಿ ಹಾಕಿದರೆ, ಅದು ನನ್ನ ತನಕ ಮುಟ್ಟುವುದಿಲ್ಲ. ಬಡವರ ರಕ್ತ ಹೀರುವವರನ್ನು ತಡೆದು ನಿಲ್ಲಿಸಿದರೆ ರಾಜ್ಯದ ಸಂಪತ್ತು ಉಳಿಯಬಲ್ಲದು., ಇಲ್ಲದಿದ್ದರೆ ಹಾಳಾಗಿಹೋಗುತ್ತದೆ. ಖರೇ ಹೇಳುತ್ತೇನೆ, ಒಬ್ಬರಿಗೆ ಭೂಮಿ ಹಂಚಲಿಕ್ಕೆ ಕೊಟ್ಟರೆ, ಬಡವನನ್ನು ಬಿಟ್ಟು ಯಾರೋ ಒಬ್ಬ ತೆಗೆದುಕೊಳ್ಳುತ್ತಾನೆ, ಆದ್ದರಿಂದ ಹೊಲ ಕೊಡಿ ಎಂದು ಹೇಳುವುದರಿಂದ ಏನೂ ಲಾಭ ಇಲ್ಲ. ಇವತ್ತಿನ ದಿವಸ, ಏನಾದರೂ ಕೂಡ ಮಾಡಿದ್ದರೆ, ಸ್ಟೇಟ್ ಇಂಟರೆಸ್ಟ್ ನಿಂದ ಮಾಡಿದ್ದೇನೆ. ಅದಕ್ಕೆ ವಿರೋಧಪಕ್ಷದ ಮಾನ್ಯ ಸದಸ್ಯರು ನನಗೆ ಶಭಾಸ್‌ಗಿರಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಲ ಕೊಡುವ ವಿಷಯದಲ್ಲಿ ನಾನು ಮಾಡಿದಂಥ ಕಪಿಮುಷ್ಟಿಯಿಂದ ರಾಜ್ಯದ ಹಿತವನ್ನು ಕಾಪಾಡಲಿಕ್ಕೆ ಒಬ್ಬ ಮಂತ್ರಿ ಬಂದರಲ್ಲಾ ಎನ್ನುವ ಹೆಮ್ಮೆ ಬರಬೇಕಾಗಿತ್ತು. ಆದರೆ, ಅದು ಬರಲಿಲ್ಲ, ಎಂದು ನನಗೆ ವ್ಯಥೆಯಾಗಿದೆ. ಇವತ್ತು ವಿಚಾರ ಮಾಡಿ. ಮಾನವೀಯತೆಯ ದೃಷ್ಟಿಯಿಂದ ನೋಡಿ, ಒಂದು ಲಕ್ಷ ಎಕರೆ ಭೂಮಿಯನ್ನು ರಿಲೀಸ್ ಮಾಡಬೇಕು ಎಂದು ಆರ್ಡರ್ ಅನ್ನು ಪಾಟೀಲರು ಮಾಡುತ್ತಾರೆ ಹೊರತು ಅದು ಬಡವರಿಗೆ ಮುಟ್ಟುವುದಿಲ್ಲ. ಲ್ಯಾಂಡ್ ಇಲ್ಲದ ಮನುಷ್ಯನ ಅರ್ಜಿ ಮಂತ್ರಿಗಳ ತನಕ ಮುಟ್ಟುವುದಿಲ್ಲ. ನೋಟಿಫೈ ಆಗಿ, ಡಿ ನೋಟಿಫೈ ಆಗಿ ಮತ್ತೊಂದು ನೋಟಿಫಿಕೇಷನ್ ಆಗುವವರೆಗೆ ಬಡವ ಎಲ್ಲಿಗೆ ಹೋಗುತ್ತಾನೆ. ಅವನಿಗೆ ಹೊಲ ಮಾಡಲಿಕ್ಕೆ ಆಸೆ ಇದೆ, ಆದರೆ ಹೊಲ ಮುಟ್ಟುವುದು ಯಾರಿಗೆ? ಫಾರೆಸ್ಟ್ ಲ್ಯಾಂಡ್ ಅನ್ನು ನನ್ನ ಕೈಯಿಂದ ಬಿಡಿಸಬಹುದು. ನಿಮ್ಮ ಸರ್ಕಾರ ನೀವು ಹೇಳಿದಂತೆ ನಾನು ಬದಲಾವಣೆ ಮಾಡಬೇಕಾಗುತ್ತದೆ. ಇದಕ್ಕೆ ನಾನು ಒಪ್ಪಿದೆ ಅಂದರೆ, ಲ್ಯಾಂಡ್ ಅನ್ನು ಕೊಡಬಹುದು, ಆದರೆ ಹೊಲ ಮಾತ್ರ ನೀವು ಹೇಳಿದ ಹಾಗೆ ಬಡವರಿಗೆ ಹೋಗುವುದಿಲ್ಲ. ಇದನ್ನು ಲಕ್ಷದಲ್ಲಿಟ್ಟುಕೊಂಡು ತಾವು ಸಲಹೆ ಕೊಡಿ ಎಂದು ಕೇಳುತ್ತೇನೆ. ತಾವು ಸಲಹೆ ಕೊಡುವಾಗ, ಫಾರೆಸ್ಟ್ ಲ್ಯಾಂಡ್ ಅನ್ನು ಕೊಡುವುದರಿಂದ ದೇಶದ ಭದ್ರತೆಗೆ ಬಹಳ ಹಾನಿಯಾಗುತ್ತದೆ ಎನ್ನುವ ಮಾತನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ಸಭೆಯಲ್ಲಿ ಅನೇಕ ಹಿರಿಯ ಮಾನ್ಯ ಸದಸ್ಯರು ಇದ್ದಾರೆ, ಅನುಭವಸ್ಥರು ಇದ್ದಾರೆ, ಇದನ್ನು ಆಲೋಚನೆ ಮಾಡಿ ಎಂದು ನಾನು ಬೇರೆ ಹೇಳಬೇಕಾಗಿಲ್ಲ. ನಮ್ಮ ದೇಶದಲ್ಲಿ ದುರಾದೃಷ್ಟವಶಾತ್ 100ಕ್ಕೆ 18ರಷ್ಟು ಮಾತ್ರ ಫಾರೆಸ್ಟ್ ಲ್ಯಾಂಡ್ ಇವೆ. ಬೇರೆ ದೇಶಗಳಲ್ಲಿ ಶೇಕಡ 35 ರಷ್ಟು ಫಾರೆಸ್ಟ್ ಲ್ಯಾಂಡ್ ಇರುವಾಗ ಹಿಂದೂಸ್ಥಾನದಲ್ಲಿ ಶೇಕಡ 28ರಷ್ಟು ಫಾರೆಸ್ಟ್ ಲ್ಯಾಂಡ್ಇದೆ. ನಮ್ಮ ರಾಜ್ಯದಲ್ಲಿ 100ಕ್ಕೆ 18ರಷ್ಟು ಮಾತ್ರ ಆಗಿದೆ. ಹಿಂದೆ ಇದು ಶೇಕಡ 20ರಷ್ಟು ಇತ್ತು, ಈಗ ಪುನಃ ಫಾರೆಸ್ಟ್ ಲ್ಯಾಂಡ್ ಅನ್ನು ಸಾಗುವಳಿ ಮಾಡುವುದಕ್ಕೆ ಕೊಟ್ಟರೆ ಶೇಕಡ 15ರಷ್ಟಾಗುತ್ತದೆ. 1957ರಿಂದ ಇಲ್ಲಿಯತನಕ ಎಷ್ಟು ಫಾರೆಸ್ಟ್ ಲ್ಯಾಂಡ್ ಕೊಟ್ಟಿದ್ದೇವೆ ಎನ್ನುವುದಕ್ಕೆ ವಿವರಗಳು ಈ ಕೆಳಗೆ ಕಂಡಂತಿವೆ:—

Area of land under submersion	29,390	hectares
Area released for rehabilitation	20,089	,,
Area given for cultivation	63,595	,,
Areas under mining	19,850	,,
Areas given to townships	1,531	,,
Areas given for other non-Agricultural purposes	4,477	,,

Total : 1,47,549 hectares or 3 lakhs 50 thousand acres.

ಇಷ್ಟಾದರೂ ಬಡವನಿಗೆ ತೃಪ್ತಿಯಾಗಿಲ್ಲ, ಬಡವನಿಗೆ ಇನ್ನೂ ಹೊಲ ಮುಟ್ಟಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಬಡವನಿಗೆ ಕೊಟ್ಟಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಬಡವನಿಗೆ ಸಿಗುವುದಿಲ್ಲ, ಏಕೆಂದರೆ ಪ್ರೊಸಿಜರ್ ಪ್ರಕಾರ ಬಡವನಿಗೆ ಗೋಮಾಳ ಲ್ಯಾಂಡ್ ಸಿಕ್ಕುತ್ತದೆ. ಹೊಲ ಕೊಡಲಿಕ್ಕೆ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಮಾಡಿದ್ದಾರೆ. ಅದರಲ್ಲಿ ಆಯಾ ಕ್ಷೇತ್ರದ ಎಲ್ಲಾ ಸದಸ್ಯರು ಇರುತ್ತಾರೆ. ಅದರಲ್ಲಿ ಬಡವನಿಗೆ ಹೊಲ ಕೊಡಲಿಕ್ಕೆ ಪ್ರಯತ್ನ ಮಾಡೋಣ. ಫಾರೆಸ್ಟ್ ಲ್ಯಾಂಡ್ ಅನ್ನು ಒಂದು ಎಕರೆ ಸಹಿತ ಕೊಡಬಾರದು ಎಂದು ಇದ್ದರೂ ಎಲ್ಲೆಲ್ಲಿ ಅತ್ಯಂತ ಅವಶ್ಯ ಇದೆಯೋ, ಎಲ್ಲಿ ಫಾರೆಸ್ಟ್ ಲ್ಯಾಂಡ್ ಕೊಡದಿದ್ದರೆ ಆ ಮನುಷ್ಯನ ಮನೆ ಹಾಳಾಗಿ ಹೋಗುತ್ತದೋ ಅಂಥ ಕಡೆ ಹೊಲ ಕೊಡುವುದಕ್ಕೆ ಪ್ರಯತ್ನ ಮಾಡೋಣ. ಇದರ ಅರ್ಥ ಹೇಳುವಾಗ, ಹೊಲಕ್ಕೆ ಫಾರೆಸ್ಟ್ ಲ್ಯಾಂಡ್ ಅನ್ನು ಬಿಡಬಾರದು ಎಂದಿದ್ದುದನ್ನು ಸರ್ಕಾರ ಬದಲಾವಣೆ ಮಾಡಿದೆ ಎಂದು ಯಾರೂ ತಿಳಿಯಬಾರದು. ಯಾರಿಗಾದರೂ ಈ ಭೂಮಿಯನ್ನು ಕೊಡದಿದ್ದರೆ, ಅವನು ನಿರ್ಗತಿಕನಾಗುತ್ತಾನೆ ಎಂದರೆ ಸರ್ಕಾರಕ್ಕೆ ಹಾನಿಯಾದರೂ ಪರವಾಗಿಲ್ಲ ಹೊಲ ಕೊಡೋಣ. ಹಣಕಾಸಿನ ಮಂತ್ರಿಗಳು ಒಪ್ಪುವುದಾದರೆ, ಕೆಲವೊಂದು ಎಕರೆ ಜಮೀನನ್ನು ಜಹಗೀರ್‌ದಾರರಿಂದ ಆಗಲೀ ಅಥವಾ ದೇಸಾಯಿಯವರ ಕಡೆಯಿಂದಾಗಲೀ ಖರೀದಿ ಮಾಡಿ, ಸರ್ಕಾರಕ್ಕೆ ತೆಗೆದುಕೊಂಡು ಫಾರೆಸ್ಟನ್ನು ಬೆಳೆಸಬೇಕು. ಫಾರೆಸ್ಟ್ ಅನೇಕ ಕಡೆ ನಾಶವಾಗಿದೆ ಎಂದು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ದುರಾದೃಷ್ಟದಿಂದ ಅನೇಕ ಜನರಿಗೆ ಪರ್ಮಿಟ್ಟನ್ನು ಕೊಟ್ಟುಬಿಟ್ಟಿದ್ದಾರೆ, ಅದರಿಂದ ಫಾರೆಸ್ಟ್ ನಾಶವಾಗಿದೆ. ಅದಕ್ಕೆ ನಾನು ಭಾಧ್ಯಸ್ಥನಲ್ಲ. ಹೇಗೆ ಇರಲಿ, ಯಾವುದೇ ರೀತಿಯಿಂದ ಹುಟ್ಟಿರಲಿ ತಂದೆ ತಾಯಿಗಳ ಪಾಪದಿಂದ ಹುಟ್ಟಿದ ಪಿಂಡವನ್ನು ಪಾಲಿಸುವುದು ಸರ್ಕಾರದ ಕರ್ತವ್ಯ. ಹಿಂದೆ ಮಾಡಿದ್ದು ಎಂದು/ತುಚ್ಛೀಕರಿಸಲಿಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ನಾವು ವಿಚಾರ ಮಾಡುವಾಗ, ಬೆಳೆದುಬಂಧಂಥ ಇಂಡಸ್ಟ್ರೀಸ್‌ಗಳು, ಬೆಳೆದು ಬಂದಂಥ ಉದ್ಯೋಗಗಳನ್ನು ಮುಂದೆ ಬೆಳೆಸಲಿಕ್ಕೆ ಫಾರೆಸ್ಟ್ ಮೆಟೀರಿಯಲ್ ಇಲ್ಲ. ಫಾರೆಸ್ಟ್ ಮೆಟೀರಿಯಲ್ ಅನ್ನು ಸಮನಾಗಿ ಹಂಚಿಕೆಯಾಗಬೇಕು ಎಂದು ನಿಜವಾಗಿಯೂ ಆಲೋಚನೆ ಮಾಡಿದರೆ, ಫಾರೆಸ್ಟ್ ಮೆಟೀರಿಯಲ್ ಸಿಕ್ಕದೆ ಕೆಲವು ಉಧ್ಯೋಗ ದಂದೆಗಳನ್ನು ಸದಾ ಮುಚ್ಚಬೇಕಾಗುತ್ತದೆ. ಹೀಗೆಯೇ ಹೋದರೆ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಮುಂಜಾಗ್ರತೆ ವಹಿಸಿ ನಿಮ್ಮೆಲ್ಲರ ಸಹಕಾರ ಪಡೆದು ಅರಣ್ಯ ಸಂಪತ್ತನ್ನು ಬೆಳೆಸಬೇಕಾಗುತ್ತದೆ, ಇಲ್ಲದಿದ್ದರೆ ಹೊಸ ಉದ್ಯೋಗಗಳನ್ನು ಬಂದ್ ಮಾಡಬೇಕಾಗುತ್ತದೆ. ಶ್ರೀಮಾನ್ ಗುಂಡೂರಾವ್ ಅವರು ಹೇಳಿದಂಥ ವ್ಯಕ್ತಿಗೆ 2900 ಎಕರೆ ಜಮೀನನ್ನು ಯೋಚನೆ ಮಾಡದೆ ಕೊಟ್ಟುಬಿಟ್ಟಿದ್ದಾರೆ. ನಾನು ಕೂರ್ಗಗೆ ಪ್ರವಾಸ ಹೋದಾಗ ಇದು ಯಾರ ಫಾರಂ ಎಂದು ಕೇಳಿದೆ, ಕೇಳಿದ ಕೂಡಲೇ ಇಂಥ ವ್ಯಕ್ತಿಯದು ಸರ್ಕಾರದವರು ಸುಮಾರು 2900 ಎಕರೆ ಭೂಮಿಯನ್ನು ಆ ವ್ಯಕ್ತಿಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಅಂದೆ ನಾನು ಒಂದು ಮಿನಿಟ್ ಅನ್ನು ಕಳುಹಿಸಿದೆ. ಆದರೆ ಆಗಲೇ 600 ಎಕರೆ ಭೂಮಿಯನ್ನು ಕೊಟ್ಟಿದ್ದರು, ಉಳಿದಂಥ 2300 ಎಕರೆ ಜಮೀನಿಗೆ ಸ್ಟೇ ಆರ್ಡರ್ ಕೊಟ್ಟಿದ್ದೇನೆ. ಆದ್ದರಿಂದ ಅದನ್ನು ಅವರು ಇನ್ನೂ ಆ ವ್ಯಕ್ತಿಗೆ ಕೊಟ್ಟಿಲ್ಲ. ಈ 600 ಎಕರೆಯೂ ಸಹ ಅಗ್ರಿಮೆಂಟ್ ಬ್ರೀಚ್ ಆಗಿದೆ ಎಂದು ಎಕ್ಸಾಮಿನ್ ಮಾಡುವುದಕ್ಕೆ ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಯಾವ ಕಾರಣಕ್ಕಾಗಿ ಕೊಟ್ಟರು ?

ಶ್ರೀ ಕೆ. ಎಚ್. ಪಾಟೀಲ್.—ನಿಷ್ಕಾರಣವಾಗಿ 600 ಎಕರೆ ಕೊಟ್ಟರು ಅದನ್ನು ಸಹ ಪರಿಶೀಲನೆ ಮಾಡಲಿಕ್ಕೆ ಹೊರಟಿದ್ದೇನೆ. ಅದನ್ನು ಸರ್ಕಾರ ತಿರುಗಿ ಪಡೆಯಲಿಕ್ಕೆ ಸಾಧ್ಯವಿದೆಯೇ ಎಂದು ನೋಡುತ್ತಿದ್ದೇವೆ. ಅದು ಒಂದು ಉದಾಹರಣೆ ಗಮನಕ್ಕೆ ಬಂದಿದೆ. ಇಂಥ ಅನೇಕ ಮಹನೀಯರು 50 ಎಕರೆ 100 ಎಕರೆ ತೆಗೆದುಕೊಂಡು ಬೆಳೆಸಿಕೊಂಡು ಬಿಟ್ಟಿದ್ದಾರೆ. ಹೀಗೆ ಅಧಿಕಾರಸ್ಥರು ಕೊಟ್ಟಿದ್ದಾರೆ. ಅವರ ಮಾತು ಇವರು ಹೇಳುವ ಹಾಗಿಲ್ಲ. ಇವರ ಮಾತು ಅವರು ಹೇಳುವ ಹಾಗಿಲ್ಲ. ಯಾರು ಯಾರಿಗೆ ಕೊಟ್ಟಿದ್ದಾರೆಂದು ಹುಡುಕಬೇಕಾದರೆ ನಿಮ್ಮ ಸಹಕಾರಬೇಕು. ಲಿಂಗಪ್ಪನವರು ಇಂಥವರಿಗೆ ಕೊಡಿ ಎಂದು ಹೇಳಿ ಅವರಿಗೆ ಕೊಟ್ಟಿದ್ದರೂ ಹಣದ ಆಸೆಯಿಂದ ಅದನ್ನು ಆತ ಮಾರುತ್ತಾನೆ. ಅವನು ಮುಂದೆಯೂ ಲ್ಯಾಂಡ್‌ಲೆಸ್ ಆಗಿ ಇರುತ್ತಾನೆ. ಲ್ಯಾಂಡ್‌ಲೆಸ್ ಆಗಿ ಉಳಿಯುತ್ತಾನೆ. ರಾಜದ ದೃಷ್ಟಿ ನಮಗೆ ಹೆಚ್ಚು ಬೇಕು. ಇವೊತ್ತು ನಾನು ಮಂತ್ರಿಯಾಗಿ ಮಾತನಾಡುವುದು ಒಳ್ಳೆಯ ಹಿತಕರವಾಗಬಹುದು. ನೀವು ನಾಳೆ ದಿವಸ ಕೆಲವು ದಿವಸಗಳಾದಮೇಲೆ ನನ್ನ ಹೊಣೆಗಾರಿಕೆ ಸ್ಥಾನಕ್ಕೆ ಬಂದಾಗ, ನೀವು ರಾಜ್ಯ ಬರಿದುಮಾಡಿ ಹೋದಿರಿ ಎಂದು ಹಿಂದಿನ ಸರ್ಕಾರಕ್ಕೆ ಬಂದಂಥ ಟೀಕೆಗಳು ನನ್ನ ಮೇಲೆ ಬರುತ್ತದೆ. ಈ ಟೀಕೆ ಬರದಹಾಗೆ ನಡೆದುಕೊಳ್ಳಬೇಕು ಎನ್ನುವುದು ನನ್ನ ಉದ್ದಿಶ್ಯ.

ಇನ್ನು ಕಳ್ಳಸಾಗಾಣಿಕೆ ವಿಷಯವಾಗಿ ತಾವು ಹೇಳಿದ್ದೀರಿ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ವಿಮ್ಕೋ ಮ್ಯಾಚ್ ಕಂಪನಿ ಸಲುವಾಗಿ ಹೇಳಿದ್ದಾರೆ. ತಾತ್ವಿಕವಾಗಿ ನಮ್ಮ ರಾಜ್ಯದಲ್ಲಿ ಇಲ್ಲದೆ ಇದ್ದಂತ ಕೈಗಾರಿಕೆಗಳಿಗೆ ಏಕೆ ಸಹಾಯ ಮಾಡಬೇಕು ಎಂದು ನಮಗೂ ಅನಿಸುತ್ತದೆ. ಹೆಚ್ಚು ಇದ್ದಾಗ ಎಲ್ಲರಿಗೂ ಕೊಡೋಣ ಕಡಿಮೆ ಇರುವಾಗ ಏತಕ್ಕೆ ನಿಲ್ಲಿಸಬಾರದು ಅನ್ನಿಸುತ್ತದೆ. ಆದರೆ ಮೊದಲೇ ಅಗ್ರಿಮೆಂಟ್ ಮಾಡಿದ್ದಾರೆ. ಇದನ್ನು ರದ್ದು ಮಾಡುವುದಕ್ಕೆ ನನಗೆ ಮಿತಿ ಇದೆ ಆ ಮಿತಿಯನ್ನು ಮೀರಿ ಹೋಗುವುದಕ್ಕೆ ಬರುವುದಿಲ್ಲ. ಸಾಫ್ಟ್‌ವುಡ್ ಕೊಟ್ಟದ್ದನ್ನು ಹಾರ್ಡ್ ಉಡ್ ತೆಗೆದುಕೊಂಡಿದ್ದಾರೆಂದು ನಿಜವಾಗಿ ನನ್ನ ಗಮನಕ್ಕೆ ಬಂದಿದ್ದರೆ, ಅಂದೇ ಅಗ್ರಿಮೆಂಟ್ ರದ್ದು ಮಾಡುತ್ತಿದ್ದೆ. ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಪ್ರಾರ್ಥನೆ ಮಾಡುತ್ತೇನೆ. ಯಾವುದೇ ದೃಷ್ಟಿಯಿಂದ ಸರ್ಕಾರದ ಗಮನವನ್ನು ತೆಗೆದುಕೊಳ್ಳುವಂತ ರೀತಿಯಲ್ಲಿ ನನ್ನ ಗಮನವನ್ನು ಸೆಳೆದರೆ ನಿಜವಾಗಿ ಉಗ್ರವಾದ ಕ್ರಮವನ್ನು ಅಗ್ರಿಮೆಂಟ್ ಇದ್ದರೂ ಸಹಿತ ತೆಗೆದುಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಲೀಸ್ ಪೀರಿಯೇಡ್ ಮುಗಿದಮೇಲೆ ಏನು ಮಾಡುತ್ತೀರಿ !

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ರಾಜ್ಯದಲ್ಲಿ ಕಡಿಮೆ ಇರುವಾಗ ಮುಂದಿನದು ಕೊಡುವುದಿಲ್ಲ. ಈಗ ಇರುವ ಲೀಸ್ ರದ್ದು ಮಾಡಬೇಕಾದರೆ ಅದು ಬ್ರೀಚ್ ಆಫ್ ಅಗ್ರಿಮೆಂಟ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಮರ ಕಡಿದರೆ 200 ಅಡಿ ಸುತ್ತಳತೆ ಕಾಡು ನಾಶ ಮಾಡುತ್ತಾರೆ. ಸೇಫ್ಟಿಮೆಷರ್ಸ್ ಅಪ್ಲೈ ಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಆ ಬಗ್ಗೆ ಅಧಿಕಾರಸ್ಥರು ಸೂಕ್ತ ನಿಗಾ ಇಡುವ ಸಲುವಾಗಿ ತಿಳಿಸುತ್ತೇನೆ. ಇಷ್ಟು ಮಾತ್ರ ಹೇಳಬಲ್ಲೆ ಕಳ್ಳಸಾಗಾಣಿಕೆ ವಿಷಯವಾಗಿ ಗಮನೀಯವಾದ ಸಲಹೆ ಮಾಡಿದ್ದೀರಿ. ಇನ್ನು ಗಣನೀಯವಾಗಿ ಸಹಾಯ ಅಪೇಕ್ಷೆ ಮಾಡಿದ್ದೆ. ಚೆಕ್‌ಪೋಸ್ಟು ಸಲುವಾಗಿ ಯಾವ ರೀತಿ ಸಲಹೆ ಮಾಡುತ್ತೀರಿ ಎಂದು ನೋಡುತ್ತಿದ್ದೆ. ಕಳ್ಳಸಾಗಾಣಿಕೆ ಸಂಬಂಧದಲ್ಲಿ ಹುಬ್ಬಳ್ಳಿಯಲ್ಲಿ ಇರುವವರೊಬ್ಬರಿಗೆ ಟೀಕೆ ಮಾಡಿದ್ದೀರಿ ಅದು ಅಧಿಕಾರಿಯು ಕೊಟ್ಟ ವರದಿಯಲ್ಲಿ ಇದೆ. ಮುಖ್ಯವಾಗಿ ಆ ಗ್ಯಾಂಗಿಗೆ ಸಂದಂಧಿಸಿದ ಗ್ಯಾಂಗಸ್ಟರ್ ಹುಬ್ಬಳ್ಳಿಯಲ್ಲ ಇದ್ದಾನೆಂದು ಹೇಳಿದ್ದಾರೆ. 10–15 ವರ್ಷಗಳಾಯಿತು ಅವನ ಮೇಲೆ ಅಪಾದನೆ ಒಳಗೊಳಗೆ ಇದ್ದರೂ ಅವನು ತಪ್ಪಿಸಿಕೊಳ್ಳುತ್ತಿದ್ದಾನೆ. ಅಧಿಕಾರಿಗಳು ಹೋಗಬೇಕು ಅವನು ಇರುವುದು ಬಾಂಬೆ ಅಥವಾ ಡೆಲ್ಲಿಯಲ್ಲಿ ಖೂನಿ ಪತ್ತೆ ಮಾಡಲು ಮುತುವರ್ಜಿ ವಹಿಸಿ ಕಂಡುಹಿಡಿಯುವ ರೀತಿಯಲ್ಲಿ ಚಳುವಳಿ ನಡೆದಿದೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಕೆಲವು ಹಳ್ಳಿಯವರು ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದಾರೆ. ಕೆಲವು ಮಾನ್ಯ ಸದಸ್ಯರು ಟೀಕೆ ಮಾಡುತ್ತಾ ಕಾಡು ಬೇಕಾದಂತೆ ಕಡಿದು ಹಾಕಿದುದರಿಂದ ಅದು ಕಡಿಮೆಯಾಗಿದೆ ಎಂದು ಹೇಳಿದರು ನಿಜ. ಆದರೆ ಗಂಧದ ಕಟ್ಟಿಗೆಯಲ್ಲಿ ಎಣ್ಣೆ ಎಲ್ಲಿ ಇರುತ್ತದೆ ಎನ್ನುವ ಪ್ರತ್ಯಕ್ಷ ಅನುಭವ ಅಗತ್ಯ. ಖುದ್ದಾಗಿ ನಾನು ಕಾಡನ್ನು ಸಂದರ್ಶಿಸಿ ಬಂದಿದ್ದೇನೆ. ಸಂದರ್ಶಿಸಿ ನೋಡಿದಾಗ ಕಳುವು ಮಾಡಿಕೊಂಡು ಹೋದ ಗಿಡದ ಮೇಲುಭಾಗ ಕಡಿದಿದ್ದಾರೆ. ಕಡಿಯಬೇಕಾಗಿದ್ದದ್ದು ಬಹಳ ಇದೆ. ಮೇಲು ಬಾಗ ಏನು ಕಡಿದಿದ್ದಾರೆ ಅದರಲ್ಲಿ ಗಂಧದ ಎಣ್ಣೆಗೆ ಬೇಕಾಗುವಂತೆ ಹೆಚ್ಚು ಕಡಿಮೆ ಇದೆ. ಹೆಚ್ಚು ಕೆಚ್ಚು ಇರುವುದು ಕೆಳಗಿನ ಬಾಗದಲ್ಲಿ ಅವನ್ನು ಪಂಚನಾಮ ಮಾಡಿ ಹಿಡಿದಿದ್ದಾರೆ. ಕಡಿದುಕೊಂಡು ಹೋಗಿ ಬಿಟ್ಟಂತೆ ಮೋಟುಗಳು ಎಷ್ಟು ಹಿಡಿದಂಥ ಕಟ್ಟಿಗೆ ಎಷ್ಟು ಎಂದು ವರದಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ದುಡ್ಡು ಎಷ್ಟು ಖರ್ಚುಮಾಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ್.—ತಾವು ಇದುವರೆಗೆ ಮಾಡಿರುವ ವರದಿಯನ್ನು ಒಪ್ಪಿಸುತ್ತೇನೆ. ದುಡ್ಡು ಎಷ್ಟು ಖರ್ಚಾಗಿದೆ ಎಂದರೆ 2-3 ಸಾವಿರ 4 ಸಾವಿರ ಆಗಿದ್ದರೆ ಪಗಾರ ಸೇರಿ ಹೆಚ್ಚು ಆಗಬಹುದು. ಆದರೆ ಬರತಕ್ಕ ಹಣ 30 ಸಾವಿರ ಎಂದು ಹೇಳಿದರೆ, ಅದು ಆಕ್ಷನ್‌ನಲ್ಲಿ 8 ಸಾವಿರಕ್ಕೆ ಇಳಿದಿದೆ. ಟ್ರಿಕ್ ಮಾಡುತ್ತಾರೆ. ಟ್ರಿಕ್ ಮಾಡಿರುವುದು ನಮ್ಮ ನಜರಿಗೆ ಬಂದ ತಕ್ಷಣ ಆಕ್ಷನ್ ರದ್ದು ಮಾಡಿದೆ. ಎಷ್ಟು ಬೆಲೆ ಬರುತ್ತದೆ ಎಂಬುದನ್ನು ಸ್ವಲ್ಪ ದಿವಸ ಕಾದು ನೋಡಿ ಉಳಿದ ಗಂಧದ ಕಟ್ಟಿಗೆಗೆ ಕಡಿಮೆ ಬರುವುದಕ್ಕೆ ಆಗುವುದಿಲ್ಲ. ತೂಕದ ಆಧಾರದಿಂದ ಎಣ್ಣೆ ಪರ್ಸೆಂಟೇಜ್ ನಿಗದಿ ಮಾಡುತ್ತಾರೆ, ಯಾವ ಬಾಗಕ್ಕೂ ಸಹಿತ ಕಡಿದು ಗುಡ್ಡೆ ಇಟ್ಟಂಥ ಗಂಧದ ಕಟ್ಟಿಗೆ 50 ಲಕ್ಷಕ್ಕೆ ಕಡಿಮೆ ಬರುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಇದುವರೆಗೆ ಎಲ್ಲಾ ಭಾಗದಿಂದ ಕಳಿಸಿರತಕ್ಕ ಕಟ್ಟಿಗೆಯನ್ನು ಹಿಡಿದಿದ್ದೇವೆ ರೋಸ್ ಉಡ್ ತೆಗೆದುಕೊಂಡು ಹೋಗುವಂತ ಟ್ರಕ್ಕುಗಳನ್ನು ಹಿಡಿದಿದ್ದೇವೆ. ಎಲ್ಲಾ ಕೂಡಿದರೆ ಒಂದು ಕೋಟಿ ರೂಪಾಯಿ ಕಡಿಮೆ ಇಲ್ಲದಷ್ಟು ಆದಾಯ ಸರ್ಕಾರಕ್ಕೆ ಹುಟ್ಟಿದೆ

(ಶ್ರೀ ಕೆ. ಎಚ್. ಪಾಟೀಲ್)

ಎಂಬ ಮಾತು ಹೇಳಿದರೆ ಶಹಬಾಸ್‌ಗಿರಿ ಪಡೆಯಲಿಕ್ಕೆ ಹೇಳುತ್ತೇನೆಂದು ಭಾವಿಸಬಾರದು. ಒಂದು ಕೋಟಿ ರೂಪಾಯಿ ಕಳ್ಳಸಾಗಾಣಿಕೆ ನಡೆದಿದೆ. ಇನ್ನು ಹೆಚ್ಚಿನದು ನಡೆಯುತ್ತಿದೆ. ಅದನ್ನು ಬಂದ್ ಮಾಡಬೇಕು. ನಾವು ನೀವು ಕೂಡಿ ಸಹಕರಿಸಿ ಮಾಡಬೇಕು. ಶಹಬಾಸ್‌ಗಿರಿ ಒಬ್ಬರಿಗೇ ಅಲ್ಲ. ಅದು ಎಲ್ಲರಿಗೂ ಬರಬೇಕಾಗುತ್ತದೆ. ಅಧಿಕಾರಸ್ತರು ಹಿಡಿದವರಿಗೂ ಬರಬೇಕಾಗುತ್ತದೆ. ಕಳ್ಳಸಾಗಾಣಿಕೆ ಹಿಡಿಯಲು ಸಹಕಾರ ಮಾಡಿದ ಹಳ್ಳಿ ಜನರಿಗೂ ಶಹಬಾಸ್‌ಗಿರಿ ಕೊಡಬೇಕು. ಅಧಿಕಾರಸ್ಥರು ಇನ್ನೊಬ್ಬರ ಮೇಲೆ ಹೇಳಿದಂಥ ದೂರಿನ ಆಧಾರದ ಮೇಲೆ ತಪಾಸಣೆ ಮಾಡಿದ್ದಾರೆ. ನಾನ್ ಅಫಿಷಿಯಲ್ಸ್ ಟೆಲಿಫೋನ್ ಮುಖಾಂತರ ಪತ್ರದ ಮುಖಾಂತರ ಹೇಳಿದ್ದಾರೆ. ಖಾಸಗಿಯವರು ಆ ರೀತಿ ವರ್ತಮಾನ ಕಳುಹಿಸಿದಾಗ 100 ರಲ್ಲಿ 97 ಕ್ಕಿಂತ ಹೆಚ್ಚಿನದು ಸತ್ಯ ಎಂದು ಕಂಡು ಬಂದಿದೆ. ಅಂಥ ಅಧಿಕಾರಿಗಳಿಗೆ ಮತ್ತು ಅಧಿಕಾರೇತರರಿಗೆ ಬಹುಮಾನ ಕೊಡುವುದು ನನ್ನ ಗಮನದಲ್ಲಿದೆ. ಮುಖ್ಯಮಂತ್ರಿಗಳು ಕೂಡಿ, ಮಾತನಾಡಿದ್ದೇನೆ. ತಪಾಸಣೆ ಮುಗಿದ ನಂತರ, ಕಾಲ ನೋಡಿಕೊಂಡು, ಯೋಗ್ಯವಾದ ಬಹುಮಾನ ಎಲ್ಲರ ಗಮನಕ್ಕೆ ತಂದುಕೊಡಬೇಕೆಂದು ಇಚ್ಛೆ ಇದೆ. ಅಧಿಕಾರಸ್ಥರು ಸಹಿತ ಕೆಲವು ಜನರನ್ನು ಸಸ್‌ಪೆಂಡ್ ಮಾಡಿದ್ದೇನೆ. ಸಸ್‌ಪೆಂಡ್ ಆಗದೆ ಇರುವ ಅಧಿಕಾರಸ್ಥರು ಇನ್ನೂ ಅನೇಕ ಜನರು ಇದ್ದಾರೆ. ಸಸ್‌ಪೆಂಡ್ ಆಗದೇ ಇರುವವರು ನಿರ್ಮಲವಾಗಿದ್ದಾರೆಂದು ನಾನು ಹೇಳುವುದಿಲ್ಲ. ಇದರಲ್ಲಿ ಕದೀಮರೂ ಇದ್ದಾರೆ ಎಲ್ಲರೂ ಅಪ್ರಾಮಾಣಿಕರೆಂದು ಹೇಳುವುದಿಲ್ಲ. ಅದರಲ್ಲಿ ಪ್ರಾಮಾಣಿಕಸ್ಥರೂ ಇದ್ದಾರೆ. ಬಹು ಜನರು ಫಾರೆಸ್ಟ್ ಡಿಪಾರ್ಟ್‌ಮೆಂಟನ್ನು ಎನಿಮಿ ನಂಬರ್ 2 ಎಂದು ಕಾಣಲಿಕ್ಕೆ ಹತ್ತಿದ್ದಾರೆ. ಇದನ್ನು ಬದಲಾವಣೆ ಮಾಡಬೇಕು ನಿಮ್ಮ ಟೀಕೆ ಔಚಿತ್ಯ ಮತ್ತು ನಿಮ್ಮ ಟೀಕೆಯ ಉಗ್ರತೆಯನ್ನು ಅಧಿಕಾರ ವರ್ಗ ಗಮನಿಸುತ್ತದೆ. ಏನಾದರೂ ಅವರ ಮನಸ್ಸಿನ ಬದಲಾವಣೆ ಮಾಡಿಕೊಂಡು ಒಂದು ಪುನರ್ ಜೀವನ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಆಗಲಿಕ್ಕೆ ಅವಕಾಶವಾಗುತ್ತದೆಂದು ಪ್ರಾರ್ಥನೆ ಮಾಡೋಣ. ಆದರೆ ನಾನು ಇವತ್ತಿನ ದಿವಸ ಸಂಪೂರ್ಣವಾಗಿ ಅರಣ್ಯ ಇಲಾಖೆಯನ್ನು ನಿರ್ಮಲ ಮಾಡುತ್ತೇನೆ, ಪವಿತ್ರವಾದ ಇಲಾಖೆಯನ್ನಾಗಿ ಮಾಡುತ್ತೇನೆ ಎನ್ನುವ ಉದ್ಧಟತನಕ್ಕೆ ನಾನು ಹೋಗುವುದಿಲ್ಲ. ನಾನು ಸಾಧ್ಯವಾದಮಟ್ಟಿಗೆ ಮಾಡುತ್ತೇನೆ ಮತ್ತು ಹೆಚ್ಚಿನ ಪ್ರಯತ್ನ ಮಾಡುತ್ತೇನೆ ಎಂದು ಮಾತ್ರ ಹೇಳುತ್ತೇನೆ. ಇದಕ್ಕಿಂತ ಹೆಚ್ಚು ಹೇಳುವುದಿಲ್ಲ. ಕಳ್ಳತನದ ಸಾಗಾಣಿಕೆ ಏನು ನಡೆಯುತ್ತಿದೆ ಅದರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಿದೆ. ಅದಕ್ಕಾಗಿ ನಾನು ಎಲ್ಲೆಲ್ಲಿ, ಯಾವ ಯಾವ ಕಡೆಗೆ ಪ್ರವಾಸ ಹೋಗುತ್ತೇನೆ ಆಗ ಸರ್ಪ್ರೈಸ್ ವಿಜಿಟ್ ಮಾಡುತ್ತೇನೆ. ಮೊನ್ನೆ ನಾನು ಹುಣಸೂರಿಗೆ ಹೋದಾಗ ಅಲ್ಲಿಯ ಸಾಮಿಲ್‌ನವರು 18 ತಿಂಗಳಿಂದ ಲೆಕ್ಕವನ್ನೇ ಇಟ್ಟಿರಲಿಲ್ಲ. ನಾನು ಮಂತ್ರಿಯಾಗಿ ಹೇಳುತ್ತಿದ್ದೇನೆ, ಏನೆಂದರೆ, ಇಂತಹ ಸಾಮಿಲ್‌ಗಳನ್ನು ನಂಬಿಕೊಂಡು ನಮ್ಮ ಸರ್ಕಾರ ಇರುವುದಾದರು ಹೇಗೆ ? ಮಾನ್ಯ ಸದಸ್ಯರಾರೂ ಈ ವಿಷಯವನ್ನು ಹೇಳದಿದ್ದರೂ ಸಹ ನಾನೇ ಹೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಕೂಡಲೇ ನಾನು ಸಸ್ಪೆಂಡ್ ಮಾಡಬೇಕಾಯಿತು. ಸಸ್ಪೆಂಡ್ ಆದ ವ್ಯಕ್ತಿ ತಮ್ಮಂತಹವರ ಹತ್ತಿರ ಬಂದು ನಾನು ಹೊಸದಾಗಿ ಕೆಲಸಕ್ಕೆ ಬಂದಿದ್ದೆ, ಆ ಸಾಮಿಲ್‌ನ ಲೆಕ್ಕಕ್ಕೂ ನನಗೂ ಏನೂ ಸಂಬಂಧವಿಲ್ಲ, ಕೆ. ಎಚ್. ಪಾಟೀಲರು ತಮ್ಮ ಕಡೆಯವರನ್ನು ಅಲ್ಲಿಗೆ ಹಾಕುವುದರ ಸಲುವಾಗಿ ನನ್ನನ್ನು ಸಸ್ಪೆಂಡ್ ಮಾಡಿದ್ದಾರೆಂದು ಹೇಳಬಹುದು. ಅಂತಹ ಪ್ರಸಂಗ ಬಂದಾಗ ಮಾನ್ಯ ಸದಸ್ಯರು ತಮ್ಮ ಕಿವಿಯನ್ನು ಮತ್ತು ಹೃದಯವನ್ನು ಸಮರ್ಪಕವಾದಂಥ ರೀತಿಯಿಂದ ತೂಗಿ ನೋಡಿ, ಅಂತಹ ಅಧಿಕಾರಿಗಳ ಟೀಕೆಗೆ ಮಹತ್ವ ಕೊಡಬಾರದೆಂದು ತಮ್ಮಲ್ಲಿ ನಿವೇದನೆ ಮಾಡುತ್ತಿದ್ದೇನೆ. ಲಂಚಗುಳಿತನವನ್ನು, ಭ್ರಷ್ಟಾಚಾರವನ್ನು ತೊಡೆದು ಹಾಕುವುದಕ್ಕೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಉಗ್ರವಾಗಿ ಕ್ರಮವನ್ನು ಕೈಕೊಳ್ಳುತ್ತಿದ್ದೇನೆ. ಅದಕ್ಕೆ ನಮ್ಮ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲರೂ ಸಹಾಯಕರಾಗಿದ್ದಾರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

11-30 A.M.

ಮಲೆನಾಡಿನ ಪ್ರಿವಿಲೇಜಸ್ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಾರ್ತ್ ಕೆನರಾ ಏರಿಯಾ ಮತ್ತು ಮಲೆನಾಡು ಪ್ರದೇಶಗಳಲ್ಲಿರುವ ಜನರಿಗೆ ಕೆಲವು ಸೌಕರ್ಯಗಳನ್ನು ಅನಾದಿ ಕಾಲದಿಂದ ಕೊಟ್ಟುಕೊಂಡು ಬರಲಾಗುತ್ತಿತ್ತು. ಈ ಸೌಕರ್ಯಗಳನ್ನು ಕೊಡುವ ಬಗ್ಗೆ ನಮ್ಮ ರಾಜ್ಯದಲ್ಲಿ ನಾನಾ ಭಾಗಗಳಿಗೆ ಅನ್ವಯವಾಗುವಂತೆ ಬೇರೆ ಬೇರೆ

ಕಾಯಿದೆಗಳಿದ್ದುವು. ಈ ಎಲ್ಲ ಕಾಯಿದೆಗಳನ್ನು ಸೇರಿಸಿ ಏಕರೂಪತೆ ಮಾಡಬೇಕೆಂಬ ದೃಷ್ಟಿಯಿಂದ ಮೊನ್ನೆ ಹೊಸದಾಗಿ ಒಂದು ಜಿ. ಓ. ಅನ್ನು ಹೊರಡಿಸಿದ್ದೇವೆ. ಅದರ ಪ್ರಕಾರ ಯಾವ ಯಾವ ಏರಿಯಾದವರಿಗೆ ಎಷ್ಟೆಷ್ಟು ಸೌಕರ್ಯ ಕೊಡಬೇಕು ಎಂಬುದನ್ನು ಅದರಲ್ಲಿ ನಮೂದಿಸಲಾಗಿದೆ. ಅದನ್ನು ಓದುವುದಕ್ಕೆ ಸಮಯ ಇಲ್ಲವಾದ್ದರಿಂದ ಅದನ್ನು ಸಭೆಯ ಟೇಬಲ್ ಮೇಲೆ ಇಡುತ್ತೇನೆ. ಅದನ್ನು ಮಾನ್ಯ ಸದಸ್ಯರು ನೋಡಿ ಏನಾದರು ಬದಲಾವಣೆ ಮಾಡುವುದು ಇದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಬದಲಾವಣೆ ಮಾಡುವುದಿದ್ದರೆ ಮಾಡೋಣ. ಹರಿಜನರಿಗೆ ಕಟ್ಟಿಗೆ ಕೊಡುವ ವಿಷಯವನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಹರಿಜನರಿಗೆ ಕೊಡುತ್ತಿದ್ದ ಕಟ್ಟಿಗೆ ಸೌಕರ್ಯವನ್ನು ಅವರ ಹೆಸರಿನಲ್ಲಿ ಸಮಾಜದ್ರೋಹಿಗಳು ಲಕ್ಷಗಟ್ಟಲೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರೀತಿ ದುರುಪಯೋಗವಾಗಬಾರದು, ಅವರಿಗೆ ಕೊಡುವುದು ಅವರಿಗೇ ಮುಟ್ಟುವಂತಾಗಲು, ಮರದಿಂದ ಕಿಟಕಿ ಮತ್ತು ಬಾಗಿಲುಗಳನ್ನು ತಯಾರಿಸಿ ಅವರಿಗೆ ಮುಟ್ಟಿಸುವುದು ಒಳ್ಳೆಯದು ಎಂಬ ಬಗ್ಗೆ ಸರ್ಕಾರದವರು ತೀವ್ರವಾದಂಥ ಪರಿಶೀಲನೆ ಮಾಡುತ್ತಿದ್ದಾರೆ. ಇದರ ಬಗ್ಗೆ ತಮ್ಮೆಲ್ಲರ ಅಭಿಪ್ರಾಯವನ್ನು ತಿಳಿದುಕೊಂಡು ಮತ್ತು ವಿರೋಧಪಕ್ಷದ ನಾಯಕರೊಡನೆ ವಿಚಾರ ಮಾಡಿ ಒಂದು ಸೂಕ್ತವಾದ ನಿರ್ಣಯವನ್ನು ಸರ್ಕಾರ ಹೊರಡಿಸುತ್ತದೆಂದು ಹೇಳುತ್ತೇನೆ.

ಮಾನ್ಯ ಸದಸ್ಯರು ಅಧಿಕಾರಿಗಳ ಬಗ್ಗೆ ಮಾತನಾಡುತ್ತಾ, ಅಧಿಕಾರಿಗಳಿಗೆ ಹೆಚ್ಚಿನ ರೀತಿಯ ಪ್ರಮೋಷನ್ ಇಲ್ಲ, ಹರಿಜನರಿಗೆ ಸೂಕ್ತವಾದಂಥ ಪ್ರಾತಿನಿಧ್ಯ ಇಲ್ಲ ಎಂದು ಹೇಳಿದ್ದಾರೆ ಈ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ. ಹರಿಜನರಿಗೆ ರಾಜ್ಯಾಂಗದ ಪ್ರಕಾರ ಎಲ್ಲ ಕಡೆಗಳಲ್ಲಿಯೂ ಪ್ರಾತಿನಿಧ್ಯ ಕೊಡುವುದಕ್ಕೆ ತೀವ್ರವಾದಂಥ ಕ್ರಮವನ್ನು ಕೈಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri C. M ARUMUGAM.—The Director of Agriculture is noe moving about. He has not visited certain Centres. For instance, ht has not visited the Rural Centres in Mandya and Dharwar. He has not visited them ever since he took over as Director. Because he is not touring, the Department is not functioning effectively. The Hon'ble Minister has not touched that point.

ಶ್ರೀ ಕೆ. ಎಚ್. ಪಾಟೀಲ್.—ಮಂಡ್ಯ ಮತ್ತು ಧಾರವಾಡದ ಟ್ರೈನಿಂಗ್ ಕಾಲೇಜ್‌ಗಳಲ್ಲಿ ಯೋಗ್ಯವಾದಂಥ ಬದಲಾವಣೆ ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಮತ್ತು ಈ ಬಗ್ಗೆ ಡೈರಕ್ಟರ್ ಅವರು ತೀವ್ರವಾದಂಥ ಕಾರ್ಯಕ್ರಮ ಕೈಕೊಂಡಿಲ್ಲವೆಂದು ಹೇಳಿದ್ದಾರೆ, ಇದರ ಬಗ್ಗೆ ನಾನೇ ಸ್ವತಃ ಪರಿಶೀಲನೆ ಮಾಡಿ ಅವಶ್ಯಕವಾದಂಥ ಕ್ರಮಗಳನ್ನು ತೆಗೆದುಕೊಳ್ಳುವುದಿದ್ದರೆ ಅದನ್ನು ತೆಗೆದುಕೊಳ್ಳುತ್ತೇನೆ. ಒಕ್ಕಲುತನದ ಸುಧಾರಣೆಯ ಬಗ್ಗೆ ಅರಣ್ಯದ ಸಿರಿಸಂಪತ್ತನ್ನು ಕಾಪಾಡುವುದರ ಸಲುವಾಗಿ, ತೋಟಗಾರಿಕೆ ಇಲಾಖೆಯಿಂದ ಜನರಿಗೆ ಎಲ್ಲ ಸೌಕರ್ಯಗಳು ಸಿಗುವಂತಾಗಲು ತಮ್ಮೆಲ್ಲರ ಸಹಕಾರವನ್ನು ಮತ್ತೊಮ್ಮೆ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಕೊಟ್ಟ ಉತ್ತರಕ್ಕಾಗಿ ಅಭಿನಂದಿಸುತ್ತೇನೆ. ಬಹಳ ಚೆನ್ನಾಗಿ ಉತ್ತರ ಕೊಟ್ಟರು. ಅವರ ನಿಷ್ಠೆಯ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಅವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಒಂದು ಕಡೆ ಎಡವಿದ್ದಾರೆ. ಈ ಇಲಾಖೆಯನ್ನು ಸ್ವಚ್ಛಗೊಳಿಸಬೇಕೆಂಬ ಕಾತುರತೆ ನಿಮ್ಮಲ್ಲಿ ಇದೆ. ಅದಕ್ಕಾಗಿ ಅಭಿನಂದಿಸುತ್ತೇನೆ. ಆದರೆ ಬಡ್ಜೆಟ್ ಸೆಷನ್ ಡಿಸ್‌ಕಷನ್ ಆಗುತ್ತಿರುವ ಸಂದರ್ಭದಲ್ಲಿ ವ್ಯವಸಾಯ ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ರೀಜೆಂಟ್‌ಗೆ ಒಬ್ಬರನ್ನು ನಾಮಿನೇಟ್ ಮಾಡಿದ್ದೀರಿ. ಆ ವ್ಯಕ್ತಿಯ ಇತಿಹಾಸವನ್ನು ತಾವು ಸಮರ್ಥನೆ ಮಾಡುವುದಾದರೆ ನನ್ನ ಅಡ್ಡಿಯಿಲ್ಲ. ಮತ್ತು ಇವರನ್ನು ನಾಮಿನೇಟ್ ಮಾಡಿರುವುದರಿಂದ ಈ ಇಲಾಖೆಯ ಸ್ವಚ್ಛತೆ ಸಹಕಾರಿಯಾಗುತ್ತದೆಯೇ ಎಂಬುದನ್ನು ತಾವು ಸಮರ್ಥನೆ ಮಾಡುತ್ತೀರಾ ಎಂಬುದನ್ನು ಹೇಳಬೇಕು. ಎರಡನೆಯದಾಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಇಬ್ಬರು ಖಾಸಗೀ ವ್ಯಕ್ತಿಗಳನ್ನು ನಾಮಿನೇಟ್ ಮಾಡಿದ್ದೀರಿ. ಇದರ ಅವಶ್ಯಕತೆ ಏನಾದರೂ ಇತ್ತೇ? ತಮ್ಮ ಪಕ್ಷದವರ ಅತೃಪ್ತಿಗೆ ಇಂಬು ಕೊಡಬಾರದೆಂದು ಈ ಕೆಲಸಕ್ಕೆ ಕೈಹಾಕಿದ್ದೀರಿ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ವಿಷಯಗಳಿಗೆ ತಾವು ಉತ್ತರ ಕೊಡಬೇಕು.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ರೈತರ ಮಹತ್ತರವಾದ ಸಮಸ್ಯೆಗೆ ತಾವು ಉತ್ತರ ಕೊಡಲಿಲ್ಲ. ರೈತರು ಬೆಳೆದ ಬೆಳೆಗೆ ಸರಿಯಾದಂಥ ಬೆಲೆ ಸಿಗುತ್ತದೆಂಬ ಗ್ಯಾರಂಟಿ ಇಲ್ಲವಾಗಿ, ರೈತರು ಆ ಬಗ್ಗೆ ನಿಸ್ಸಹಾಯಕರಾಗಿದ್ದಾರೆ. ಈ ಬಗ್ಗೆ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಯಾವ ಮಾಲು ಬೆಳೆದರೆ ಹೆಚ್ಚು ಬೆಲೆ ಸಿಗುತ್ತದೆ ಎಂಬುದನ್ನು ರೈತರು ವಿಚಾರ ಮಾಡಬೇಕಾಗಿದೆ. ಇದನ್ನು ತಪ್ಪಿಸಲು ರೈತರು ಬೆಳೆದ ಎಲ್ಲ ರೀತಿಯ ಬೆಳೆಗೂ ಗ್ಯಾರಂಟಿ ಇರಬೇಕು. ಇದರ ಕಡೆಗೆ ಸರ್ಕಾರದವರು ವಿಚಾರ ಮಾಡಬೇಕು.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಬೇಸಾಯಕ್ಕೆ ಸಂಬಂಧಪಟ್ಟಹಾಗೆ ಸರ್ಕಾರದವರು ಒದಗಿಸತಕ್ಕಂಥಾ ಪ್ರತಿಯೊಂದು ಸೌಲಭ್ಯಗಳು ಏನೇನು ಇವೆಯೋ ಅವುಗಳನ್ನು ಅವನಿಗೆ ಸಕಾಲಕ್ಕೆ ದೊರೆಯುವ ಹಾಗೆ ಮಾಡಬೇಕು.

ಡೆಮಾನ್‌ಸ್ಟ್ರೇಷನ್ ಫಾರಂಗಳನ್ನು ಸರ್ಕಾರದವರು ಏನು ಮಾಡಿಸುತ್ತಿದ್ದಾರೆ, ಆ ಫಾರಂಗಳನ್ನು ಮಾಡುವುದಕ್ಕೆ ಬಡವರಿಗೆ ಅವಕಾಶ ಮಾಡಿಕೊಡಬೇಕು.

ಹಾರ್ಟಿಕಲ್‌ಚರಲ್ ಮತ್ತು ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ಗಳನ್ನು ಸಂಪೂರ್ಣವಾಗಿ ಬೇರ್ಪಡಿಸಿ ಅವು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುವ ಹಾಗೆ ಮಾಡಬೇಕು.

ಫಾರೆಸ್ಟ್ ಜಮೀನು ಬಡವರಿಗೆ ಸಿಕ್ಕುವುದು ಕಷ್ಟವಾಗಿರುವುದರಿಂದ, ಫಾರೆಸ್ಟ್ ಲ್ಯಾಂಡಿನಲ್ಲಿ ಎಂ.ಸಿ.ಆರ್.ಪಿ. ಯೋಜನೆಯಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಕಾಲೋನಿಗಳನ್ನು ಮಾಡಿ ಅದನ್ನು ಬಡವರಿಗೆ ಕೊಡಬೇಕು. ಮತ್ತು ಅದರ ಓನರ್‌ಷಿಪ್ ಸರ್ಕಾರಕ್ಕೆ ಇರಬೇಕು. ಅದನ್ನು ಅವರು ವ್ಯವಸಾಯ ಮಾಡುವುದಕ್ಕೆ ಅವರಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಡಬೇಕು. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಜಿ. ಎಲ್. ಕಬಾಡಿ (ಬಳ್ಳೊಳ್ಳಿ).—ಈಗ ನಮ್ಮ ಭಾಗದಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಯೋಜನೆಯಲ್ಲಿ ಬಂಡ್ ಹಾಕುವಂಥಾ ಕೆಲಸಗಳು ಏನು ಆಗಿವೆ ಅವುಗಳ ಕಾಸ್ಟ್ ಜಮೀನು ಬೆಲೆಗಿಂತ 5 ಪಟ್ಟು 6 ಪಟ್ಟಿಗಿಂತ ಜಾಸ್ತಿಯಾಗಿರುವುದರಿಂದ ಅದನ್ನು ಮಾಫಿಮಾಡಬೇಕೆಂದು ಆ ಭಾಗದ ಜನರು ಸರ್ಕಾರಕ್ಕೆ ಮನವಿಮಾಡಿಕೊಂಡಿದ್ದಾರೆ. ಆದ್ದರಿಂದ ಆ ಬಗ್ಗೆ ಸರ್ಕಾರದವರು ಏನು ಕ್ರಮತೆಗೆದುಕೊಂಡಿದ್ದಾರೆ ಎಂಬುದನ್ನು ದಯವಿಟ್ಟು ಹೇಳುತ್ತೀರಾ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಫಾರೆಸ್ಟಿನಲ್ಲಿ ಜಮೀನು ರಿಲೀಜ್ ಮಾಡುವುದಕ್ಕೆ ದೊಡ್ಡವರು ಮತ್ತು ಶ್ರೀಮಂತರಿಂದ ಮಾತ್ರ ಅರ್ಜಿಗಳು ಬಂದಿವೆಯೇ ವಿನಾ ಬಡವರಿಂದ ಅರ್ಜಿಗಳು ಬಂದಿಲ್ಲ ಎಂದು ಹೇಳಿದರು. ಪ್ರಾಜೆಕ್ಟಿನಲ್ಲಿ ಮುಳುಗಡೆಯಾದ ಜಮೀನಿನ ರೈತರು ತಮಗೆ ಫಾರೆಸ್ಟ್ ಲ್ಯಾಂಡ್ ಕೊಡಬೇಕೆಂದು ಕೇಳಿರತಕ್ಕ ಸಾವಿರಾರು ಅರ್ಜಿಗಳನ್ನು ನಾನೇ ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಅದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡಿದ್ದಾರೆಯೇ ಹೇಗೆ ?

ಎರಡನೆಯದು ಹೊಸನಗರ, ಸೊರಬ, ಸಾಗರ ಈ ಪ್ರದೇಶದಲ್ಲಿರುವ ಗೋಮಾಳದ ಜಮೀನನ್ನು ಪ್ರಪೋಜ್ಡ್ ಫಾರೆಸ್ಟಿಗೆ ಎಂದು ಇಟ್ಟಿದ್ದಾರೆ; ಆದ್ದರಿಂದ ಆ ಜಮೀನನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಆ ಜಮೀನಿಗೆ ರೈತರು ಹಾಕಿದಂತಹ ಅರ್ಜಿಗಳು ಪೆಂಡಿಂಗ್‌ನಲ್ಲಿವೆ.

ಮೂರನೆಯದು ಈಗ ಸರ್ಕಾರದವರು ರೈತರಿಗೆ ಏನು ಬಿತ್ತನೆ ಬೀಜವನ್ನು ಒದಗಿಸುತ್ತಿದ್ದಾರೆ ಅದನ್ನು ಸಮಯಕ್ಕೆ ಸರಿಯಾಗಿ ಒದಗಿಸುವುದಿಲ್ಲ. ಬಿತ್ತನೆ ಕಾಲದಲ್ಲಿ ವ್ಯವಸಾಯ ಇಲಾಖೆಯಲ್ಲಿ ಬೀಜಇರುವುದಿಲ್ಲ. ಮತ್ತು ಈಗ ವ್ಯವಸಾಯ ಇಲಾಖೆಯವರು ರೈತರಿಗೆ ಔಷಧಿಯನ್ನು ಏನು ಒದಗಿಸುತ್ತಿದ್ದಾರೆ ಅದು ಅಷ್ಟು ಎಫೆಕ್ಟಿವ್ ಆಗಿ ಇಲ್ಲ. ಆದ್ದರಿಂದ ಬೇರೆ ಸ್ವಲ್ಪ ಪವರ್‌ಫುಲ್ ಆಗಿರುವ ಹೊಸ ಔಷಧಿಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಮತ್ತು ಬೀಜವನ್ನು ರೈತರಿಗೆ ಕಾಲಕ್ಕೆ ಸರಿಯಾಗಿ ಒದಗಿಸುವ ವ್ಯವಸ್ಥೆ ಮಾಡುತ್ತೀರಾ ಮತ್ತು ವ್ಯವಸಾಯ ಇಲಾಖೆಗೆ ಬರತಕ್ಕಂಥಾ ಗೊಬ್ಬರ ಮತ್ತು ಔಷಧಿ ಇವುಗಳನ್ನೆಲ್ಲಾ ಖಾಸಗೀ ವ್ಯಾಪಾರಸ್ಥರಿಗೆ ಕೊಟ್ಟು ರೈತರಿಗೆ ಗೊಬ್ಬರ ಇಲ್ಲ, ಔಷಧಿ ಇಲ್ಲ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು.

ಅಧ್ಯಕ್ಷರು.— ಎಲ್ಲಾ ಮಾನ್ಯ ಸದಸ್ಯರು ಈ ರೀತಿ ಕ್ಲಾರಿಫಿಕೇಷನ್ ಕೇಳುತ್ತಾ ಹೋದರೆ ಅದಕ್ಕೆ ಬಹಳ ವೇಳೆ ಹೋಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಕ್ಲಾರಿಫಿಕೇಷನ್‌ಗಳನ್ನು ಒಂದೊಂದು ಪೇಪರಿನಲ್ಲಿ ಬರೆದು ಮಾನ್ಯಮಂತ್ರಿಗಳಿಗೆ ಕಳುಹಿಸಿದರೆ ಅದಕ್ಕೆಲ್ಲಾ ಅವರು ಕೊನೆಯಲ್ಲಿ ಉತ್ತರವನ್ನು ಹೇಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸದಸ್ಯರುತ್ತಮ್ಮ ಪ್ರಶ್ನೆಗಳನ್ನು ಬರೆದು ಮಂತ್ರಿಗಳಿಗೆ ಕಳುಹಿಸಿ ಎಂದು ತಾವು ಹೇಳಿದರೆ ಹೇಗೆ ? ಈಗ ನಾವು ಹೇಳಿದಂತಹ ಕೆಲವು ವಿಚಾರಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ. ಆದ್ದರಿಂದ ನಾವು ಮಾನ್ಯ ಮಂತ್ರಿಗಳನ್ನು ಕೆಲವು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಸಿರ್ಸಿ).—ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಮಧ್ಯೆ ಕ್ಲಾರಿಫಿಕೇಷನ್ ಕೇಳಬಾರದು ಉತ್ತರ ಕೊಟ್ಟಮೇಲೆ ಕೊನೆಯಲ್ಲಿ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ ಎಂದು ತಾವು ಹೇಳಿದ್ದಿರಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಾವು ಮಧ್ಯೆ ಕ್ಲಾರಿಫಿಕೇಷನ್ ಕೇಳಿದರೆ ಅವರಿಗೆ ಟ್ರೆಂಡ್ ಹೋಗುತ್ತದೆ. ಕೊನೆಯಲ್ಲಿ ಏನೋ ನಾಲ್ಕೈದು ಕ್ಲಾರಿಫಿಕೇಷನ್ ಕೇಳಿದರೆ ಪರವಾಯಿಲ್ಲ, ಎಲ್ಲ ಮಾನ್ಯ ಸದಸ್ಯರು ಎದ್ದುನಿಂತು ಕ್ಲಾರಿಫಿಕೇಷನ್ ಕೇಳುತ್ತಾ ಹೋದರೆ ಅದಕ್ಕೆ ಗಂಟೆಗಟ್ಟಲೇ ಕಾಲ ಬೇಕಾಗುತ್ತದೆ. ಅದರಿಂದ ಸಭೆಯ ಮುಂದಿನ ಕಾರ್ಯಕಲಾಪಗಳಿಗೆ ತೊಂದರೆಯಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತಹ ವಿಷಯಗಳಿಗೆ ಎಲ್ಲಕ್ಕೂ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕಾಗುವುದಿಲ್ಲ. ಆ ರೀತಿ ಉತ್ತರ ಕೊಡುತ್ತಾ ಹೋದರೆ 3 ದಿವಸಗಳಾದರೂ ಈ ಚರ್ಚೆ ಮುಗಿಯುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಂತಹ ವಿಷಯಗಳಿಗೆ ಮಂತ್ರಿಗಳು ಸಾಧ್ಯವಾದ ಮಟ್ಟಿಗೆ ಉತ್ತರ ಕೊಡುತ್ತಾರೆ. ಆದಕಾರಣ ದಯಮಾಡಿ ಮಾನ್ಯ ಸದಸ್ಯರು ತಮಗೆ ಏನೇನು ಕ್ಲಾರಿಫಿಕೇಷನ್ ಬೇಕು ಎನ್ನುವ ಬಗ್ಗೆ ಬರೆದು ಕಳುಹಿಸಿದ್ದರೆ ಅದಕ್ಕೆಲ್ಲಾ ಮಂತ್ರಿಗಳು ಒಟ್ಟಿಗೆ ಉತ್ತರವನ್ನು ಹೇಳುತ್ತಾರೆ.

Sri C. M. ARUMUGAM.—The suggestion of the Hon. Minister that we might send chits in writing and he will answer the points raised therein is a new procedure; we have not seen that procedure either here or elsewhere.

MADAM SPEAKER.—Otherwise, it will take one more hour for the Hon. Minister to reply to the clarifications.

Sri D. DEVARAJ URS (Chief Minister).—Madam, it is not a new procedure. In any debate which has taken place today or previously or in any other Assembly—of course, the Minister is expected to touch upon all important matters raised by hon. members—it may not be possible for the Government to refer to every subject that has been raised in the debate. I hope you will all appreciate that. Another thing is that supposing as a Minister I do not reply to an important point raised during the debate to that extent it is not the member who loses anything; it is the Government that stands to lose something. To that extent the image of the Government may not be proper. Members may raise so many points but it is not possible to meet every point for want of time and due to so many other things. Members will kindly appreciate that point.

Sri C. M. ARUMUGAM.—Still we feel that what the Hon. Minister is suggesting is a new procedure.

Sri K. H. PATIL.—I do not want to curtail the right of hon. members.

Sri C. M. ARUMUGAM.—The Hon. Minister has not dealt with all the points raised by hon. Members. He has only elaborated on what best he could do during the three months since the new Government has taken over. He said he would answer questions after he had finished his reply.

Sri K. H. PATIL.—I do not wish to curtail the privileges or rights of the hon. members. I am sure they must ask clarifications they want. I have tried to cover as many points as were raised in the debate. The hon. member Sri C. M. Arumugam was not present here yesterday when the debate went on. Therefore, he cannot say that I have not covered all the points raised. However, I am prepared to reply to all the queries that are likely to be raised by the hon. members. It is only to facilitate them that I suggested they can put down their points and send them to me. Even now I am prepared to give replies to the queries raised within two minutes.

Sri C. M. ARUMUGAM.—He need not do so now. Other Ministers can give reply.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಇತ್ತೀಚೆಗೆ ಬೀಟೆ ಮರಗಳನ್ನು ಹೊರ ದೇಶಕ್ಕೆ ಕಳಿಸುವ ರಹದಾರಿ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳು ತಿಳುವಳಿಕೆ ಕೊಟ್ಟಿದ್ದಾರೆಯೇ ! ಎರಡನೆಯದು ಈ ತೋಟಗಾರಿಕೆ ಇಲಾಖೆಯಲ್ಲಿ ಒಂದೇ ಜನಾಂಗದವರ ಕೈವಾಡ ಜಾಸ್ತಿಯಾಗಿದೆ. ಅಲ್ಲಿ ಬೇರೆ ಜನಾಂಗದವರಿಗೆ ಅವಕಾಶ ಇಲ್ಲದಂತಾಗಿದೆ. ಅದನ್ನು ಪರಿಶೀಲನೆ ಮಾಡುತ್ತೀರಾ ? ಮೂರನೆಯದು ಏನೆಂದರೆ, ಇವತ್ತು ಇದ್ದ ಕಾಡನ್ನು ನಾಶ ಮಾಡಿ, ಕಳ್ಳಸಾಗಾಣಿಕೆ/ ಮಾಡಿ ಹಣ ಸಂಪಾದಿಸಿ, ಎಷ್ಟೋ ಜನರು ದೊಡ್ಡ ದೊಡ್ಡ ಕಾಫಿ ತೋಟಗಳನ್ನು ಮಾಡಿಕೊಂಡಿದ್ದಾರೆ. ಅಂಥವು ಗಳ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಮತ್ತು ಇದರಲ್ಲಿ ನಿಮ್ಮ ನಿಲುವು ಏನು ?

ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಅಧ್ಯಕ್ಷರೆ, ಈಗಾಗಲೇ ಮಂತ್ರಿಯವರು ತಮ್ಮ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದರೆ ಧಾರವಾಡ ಜಿಲ್ಲೆಯಲ್ಲಿ ಗದಗ್, ಶಿರಹಟ್ಟಿ ಮತ್ತು ಮುಂಡರಗಿಯಲ್ಲಿ ಬೇಚರಾಕ್ ಭೂಮಿ ಸರ್ಕಾರದ ವಶದಲ್ಲಿ ಇದೆ. ಅಲ್ಲಿರತಕ್ಕಂತಹ ಜನರು ಈಗಾಗಲೇ ಬಳ್ಳಾರಿ ಜಿಲ್ಲೆಗೆ ವಲಸೆ ಹೋಗಿರುತ್ತಾರೆ. ಆದ್ದರಿಂದ ಅದನ್ನು ಅಭಿವೃದ್ಧಿ ಮಾಡಿ ಆ ಜನರಿಗೆ ಕೊಟ್ಟು ವಸತಿ ಕಲ್ಪಿಸುವುದಕ್ಕೆ ಏನಾದರೂ ಯೋಜನೆ ಮಾಡಿಕೊಂಡಿದ್ದೀರಾ ?

ಎರಡನೆಯದಾಗಿ ಕೊಪ್ಪದಗುಡ್ಡ ಎಂಬಲ್ಲಿ ಚಿನ್ನದ ಪರಿಶೋಧನೆಗಾಗಿ 60 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಅದನ್ನು ಕಾರ್ಯಗತ ಮಾಡುವುದಕ್ಕೆ ಏನಾದರೂ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ !

ಮೂರನೆಯದು ಏನೆಂದರೆ, ಧಾರವಾಡ ಅಗ್ರಿಕಲ್ಚರಲ್ ಕಾಲೇಜ್ ಏನು ಇದೆ, ಅದು ಸಾಕಾಗುವುದಿಲ್ಲ. ಇನ್ನೊಂದು ಮಾಡಬೇಕೆಂದು ಹೇಳುತ್ತಿದ್ದೇವೆ. ಮಂತ್ರಿಯವರೂ ಇನ್ನೊಂದು ಅಗ್ರಿಕಲ್ಚರಲ್ ಕಾಲೇಜು ಮಾಡಬೇಕೆಂದು ಇದ್ದಾರೆ. ಆದ್ದರಿಂದ ಆ ವಿಷಯ ಬಂದಾಗ ಧಾರವಾಡ ಜಿಲ್ಲೆಗೆ ಸಾಕಷ್ಟು ಗಮನ ಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಪುಟ್ಟರಂಗನಾಥರವರು ಕೇಳಿದಂತಹ ಮೊದಲನೆಯ ಪ್ರಶ್ನೆಗೆ ಉತ್ತರ ಆಗಲೇ ಹೇಳಿದ್ದೇನೆ. ಇನ್ನು ಹಾರ್ಟಿಕಲ್ಚರ್ ಇಲಾಖೆಯಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೂ ಯೋಗ್ಯವಾದ ಪ್ರಾತಿನಿಧ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಬಗ್ಗೆ ಓವರ್‌ಹಾಲ್ ಬದಲಾವಣೆ ಒಂದೇ ಸಾರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂದೆ ಅದನ್ನು ಮಾಡುತ್ತೇವೆ. ಇನ್ನು ಕಾಫಿ ತೋಟದ ಬಗ್ಗೆ ಅವರು ಹೇಳಿದ್ದಾರೆ. ಅದಕ್ಕೂ ಉತ್ತರ ಆಗಲೇ ಹೇಳಿದ್ದೇನೆ. ಇದರ ಬಗ್ಗೆ ಸೂಕ್ತವಾದ ಗಮನ ಕೊಟ್ಟು ಎಲ್ಲೆಲ್ಲಿ ಶ್ರೀಮಂತರ ವಶದಲ್ಲಿ ಅರಣ್ಯ ಸಂಪತ್ತು ಇದೆ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹಾಗೆ ಮಾಡುವಾಗ ಸಹ ನಾವು ಕಾಯಿದೆ ಕಾನೂನುಗಳಿಗೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಮಾನ್ಯ ಸನದಿಯವರು ಧಾರವಾಡದಲ್ಲಿ ಮಾಡುವ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನಾನು ಮತ್ತು ಮುಖ್ಯ ಮಂತ್ರಿಯವರು ಕೇಂದ್ರ ಸರ್ಕಾರದೊಡನೆ ಮಹಾರಾಷ್ಟ್ರ ಟೈಪ್ ಅಗ್ರಿಕಲ್ಚರಲ್ ಯುನಿವರ್ಸಿಟಿ ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅವರು ಕೊಟ್ಟ ನಂತರ ಯಾವ ಸ್ಥಳದಲ್ಲಿ ಮಾಡಬೇಕೆಂದು ವಿಚಾರ ಬಂದಾಗ ಮಾನ್ಯ ಸದಸ್ಯರ ಸಲಹೆಯನ್ನು ಸಹ ಗಮನದಲ್ಲಿಟ್ಟುಕೊಂಡು ಯೋಗ್ಯ

ಮೂರನೆಯದಾಗಿ ಹಳ್ಳಿಗಳಲ್ಲಿರತಕ್ಕಂತಹ ಜನರಿಗೆ ನಿವೇಶನ ಕೊಡುವ ಸಲುವಾಗಿ ಕೇಳಿದ್ದಾರೆ. ಅವರು ಹೇಳಿದಂತಹ ಪ್ರವೇಶವಲ್ಲದೆ, ರಾಜ್ಯದ ಇತರ ಅನೇಕ ಕಡೆಗಳಲ್ಲಿಯೂ ಅಂಥ ಪರಿಸ್ಥಿತಿ ಇದೆ. ಶಿವಮೊಗ್ಗದ ಕಡೆಗಳಲ್ಲಿ ಮತ್ತು ಹುಣಸೂರು ಕಡೆಯಲ್ಲಿ ಸಹ ಇಂತಹ ಪರಿಸ್ಥಿತಿ ಇದೆ. ಇವೆಲ್ಲ ಪರಿಸ್ಥಿತಿಗಳನ್ನೂ ಗಮನದಲ್ಲಿಟ್ಟುಕೊಂಡು ಎಲ್ಲಾ ಕಡೆಗಳಲ್ಲೂ ಒಂದೇ ತರನಾದ ನೀತಿಯನ್ನು ಇಟ್ಟುಕೊಂಡು ಸರ್ಕಾರ ಮುಂದುವರಿಯುತ್ತದೆ ಎಂದು ಹೇಳುತ್ತೇನೆ. ಇನ್ನು ಮಾನ್ಯ ಪ್ರಭಾಕರ್‌ರವರು ಒಂದು ವಿಚಾರ ಹೇಳಿದರು. ಈಗ ಫ್ಯಾಮಿಲಿ ಹೆಲ್ಪ್ ಈಸ್ ದಿ ಬೆಸ್ಟ್ ಹೆಲ್ಪ್ ಅಂದ ಹಾಗೆ ಫ್ಯಾಮಿಲಿ ಹೆಲ್ಪ್ ಕೊಡುವುದಕ್ಕೆ ಅಗ್ರಿಕಲ್ಚರಲ್ ಇಲಾಖೆಯವರು ಪ್ರಯತ್ನ ಮಾಡುತ್ತಾರೆ. ಇನ್ನು ಬಡವರಿಗೆ ಸಬ್ಸಿಡಿ ಸೌಲಭ್ಯದ ಬಗ್ಗೆ ಹೇಳುವುದಾದರೆ ಇದನ್ನು ಬೇರೆ ಬೇರೆ ಮಾಡುವುದಕ್ಕೆ ಬರುವುದಿಲ್ಲ. ಸಬ್ಸಿಡಿ ವಕ್ಕಲಿಗರಿಗೆ ಸಿಗುತ್ತದೆ. ಅದೇ ರೀತಿ ಮಾಡುತ್ತಿದ್ದೇವೆ ಅಷ್ಟೆ.

ಇನ್ನು ಹಾರ್ಟಿಕಲ್ಚರ್ ಇಲಾಖೆಯನ್ನು ಬೇರ್ಪಡಿಸಬೇಕೆಂದು ಹೇಳುತ್ತಿದ್ದಾರೆ. ಅದು ಈಗಾಗಲೇ ಬೇರೆ ಬೇರೆ ಇದೆ. ಕೆಲವರು ಎರಡನ್ನೂ ಕೂಡಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದರು. ಸದ್ಯಕ್ಕೆ ಅದು ಬೇರೆ ಬೇರೆ ಇದೆ. ಮತ್ತು ಕೋಆಪರೇಟಿವ್ ಫಾರ್ಮಿಂಗ್ ಬಗ್ಗೆ ನನಗೂ ಆಸಕ್ತಿ ಇದೆ. ಅದರ ಬಗ್ಗೆ ನಾನು ಹಾಗೂ ಸಹಕಾರ ಮಂತ್ರಿಯವರು ಸೇರಿ ಒಂದು ಯೋಗ್ಯವಾದ ನಿಲುವನ್ನು ತಾಳುತ್ತೇವೆಂದು ಮಾತ್ರ ಹೇಳುತ್ತೇನೆ. ಮಾನ್ಯ ಎಸ್. ವೈ. ಪಾಟೀಲರು ಸಹ ಒಂದು ಸಲಹೆ ಮಾಡಿದ್ದಾರೆ. ಅದನ್ನೂ ಗಮನದಲ್ಲಿಟ್ಟುಕೊಳ್ಳುತ್ತೇವೆ. ಇನ್ನು ಮಾನ್ಯ ಚಂದ್ರಶೇಖರವರು ಒಂದು ವಿಚಾರ ಹೇಳಿದರು. ಜಮೀನುಗಳನ್ನು ಡಿ—ಫಾರೆಸ್ಟ್ ಆದ ನಂತರ ಬಡವರ ಹೆಸರಿನಲ್ಲಿ ರಿಲೀಸ್ ಮಾಡುತ್ತಾರೆ. ಆದರೆ ಅದು ಬಡವರಿಗೆ ಹೋಗುವುದಿಲ್ಲ. ಸರ್ಕಾರದವರು ಸಹ ನೇರವಾಗಿ ಇಂಥವರಿಗೆ ಎಂದು ಕೊಡುವುದಕ್ಕಾಗುವುದಿಲ್ಲ. ಕೊಡುವವರು ಜಿಲ್ಲಾಧಿಕಾರಿಗಳಾಗಿರುವುದರಿಂದ ಅದು ಬೇರೆಯವರಿಗೆ ಹೋಗುತ್ತದೆ. ಹಿಂದೆ ಕೂಡ ಬಡವರ ಹೆಸರಿನಲ್ಲೇ ಅರ್ಜಿಗಳು ಬರುತ್ತಿದ್ದವು. ಸರ್ಕಾರದವರು ಇದರ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂಥ ಪರಿಸ್ಥಿತಿ ಬಂದಾಗ ಸರ್ಕಾರ ಅದನ್ನು ಪುನರ್ ಪರಿಶೀಲಿಸುತ್ತದೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ 5–6 ಪಟ್ಟು ಧಾರಣೆ ಹೆಚ್ಚಾಗಿದೆ ಎಂದು ಹೇಳಿದರು. ಭೂಮಿ ಬಹಳ ಕೆಟ್ಟ ಸ್ಥಿತಿಯಲ್ಲಿದ್ದರೆ ಹಾಗೆ ಆಗಿರಬಹುದು. ಅಂಥ ಕಡೆ ಎಷ್ಟು ಖರ್ಚು ಮಾಡಿದರೂ ಜಮೀನು ಧಾರಣೆ ಹೆಚ್ಚಾಗುವುದಿಲ್ಲ. ಸುಧಾರಣೆ ಆದಾಗ ಮಾತ್ರ ಜಮೀನು ಧಾರಣೆ ಹೆಚ್ಚಾಗುತ್ತದೆ.

ಇನ್ನು ಮಾನ್ಯ ದೇವೇ ಗೌಡರು ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನಿಗೆ ಎರಡು ನಾಮಿನೇಟ್ ಮಾಡಿದ ಬಗ್ಗೆ ಹೇಳಿದ್ದಾರೆ. ಹೋದ ಸಲ ಶ್ರೀಮಾನ್ ವಾಲಿ, ಚೇಂಬರ್ ಆಫ್ ಕಾಮರ್ಸಿನಿಂದ ಇದ್ದರು. ಮತ್ತು ಶ್ರೀಮಾನ್ ಶಿರೂರ್—ಇವರು ವಕ್ಕಲಿಗರಿದ್ದು ಒಳ್ಳೆಯ ಅನುಭವದವರಿದ್ದಾರೆ. ಮತ್ತು ಶ್ರೀ ಎಸ್. ಬಿ. ಪಾಟೀಲ್—ಇವರು ರಿಟೈರ್ಡ್ ಸರ್ಕಾರೀ ಅಧಿಕಾರಿಯವರು. ಅವರಿಗೆ ಅಗ್ರಿಕಲ್ಚರ್ ಮತ್ತು ಎಜುಕೇಷನ್ ಇಲಾಖೆಯಲ್ಲಿದ್ದು ಅದರ ಅನುಭವ ಇದೆ. ಅದೂ ಅಲ್ಲದೆ ಅವರು ಸ್ವತಃ ವಕ್ಕಲಿಗರೆಂದು ತಿಳಿದುಕೊಂಡು ಅವರನ್ನು ಹಾಕಿದ್ದೇವೆ. ಅದೇ ರೀತಿ ಕಬ್ಬಿನ ವ್ಯವಸಾಯ ಮಾಡತಕ್ಕವರು ಶ್ರೀ ಎಚ್. ಟಿ. ರೆಡ್ಡಿಯವರಾಗಿರುವುದರಿಂದ ಅವರನ್ನು ಸಹ ಹಾಕಿದ್ದೇವೆ.

ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಶ್ರೀಮಾನ್ ಮೂರ್ತಿಯವರನ್ನು ನಾಮಿನೇಟ್ ಮಾಡಿರುವ ವಿಷಯದಲ್ಲಿ ಹೇಳಬೇಕಾದರೆ, ಬಿ.ಎಸ್.ಸಿ. ಪಿ. ಎಚ್.ಡಿ. ಗ್ರಾಜುಯೇಟ್ ಎಂಬ ಕಾರಣದಿಂದ ಅವರನ್ನು ನಾಮಿನೇಟ್ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಅವರು ಅಲ್ಲಿಗೆ ಮೊದಲೇ ನಾಮಕರಣವಾಗಿರುವುದರಿಂದ ನಾನು ಈಗ ಏನೂ ಮಾಡುವುದಕ್ಕಾಗುವುದಿಲ್ಲ.

ಆದ್ದರಿಂದ ತಾವೆಲ್ಲರೂ ನಾನು ಇಷ್ಟು ಹೇಳಿದ್ದನ್ನೆಲ್ಲಾ ಕೇಳಿದ ನಂತರ ಒಮ್ಮತದಿಂದ ಈ ಅಗ್ರಿಕಲ್‌ಚರಲ್ ಬಡ್ಜೆಟ್ಟನ್ನು ಒಪ್ಪಬೇಕೆಂದು ನಾನು ಹೇಳುತ್ತೇನೆ.

12—00 NOON

ಅಧ್ಯಕ್ಷರು.—ಇನ್ನು 60 ನಿಮಿಷಗಳಷ್ಟು ಕಾಲಾವಕಾಶವಿದೆ. ಇಬ್ಬರೂ ಮಂತ್ರಿಗಳು ಈ ಕಾಲಾವಧಿಯಲ್ಲಿ ಭಾಗವಹಿಸಿಕೊಂಡು ತಮ್ಮ ಉತ್ತರಗಳನ್ನು ಮುಗಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಇದು ರೈತರ ಪ್ರಶ್ನೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಾನು ನಿನ್ನೆ ಮಾತನಾಡಿದ್ದೇನೆ.

ಅಧ್ಯಕ್ಷರು.—ಮಂತ್ರಿಗಳು ಇನ್ನೂ ಉತ್ತರ ಹೇಳಲಿಲ್ಲ.

Sri D. DEVARAJ URS.—That will bs attended to and you will get a reply later.

ಶ್ರೀ ಸಿ. ಬೈರೇಗೌಡ.—ಗೊಬ್ಬರದ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಗೊಬ್ಬರದ ನಿಯಂತ್ರಣ ಮಾಡುವ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಸೇರಿದ್ದು.

†ಶ್ರೀ ಎನ್. ಚಿಕ್ಕೇಗೌಡ (ಪಶುಸಂಗೋಪನ ಶಾಖೆಯ ರಾಜ್ಯಮಂತ್ರಿಗಳು).—ಸಭಾಧ್ಯಕ್ಷಿಣಿಯವರೇ, ಪಶುಸಂಗೋಪನ ಹಾಗೂ ಪಶು ವೈದ್ಯಕೀಯ ಇಲಾಖೆಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದಂಥ ವಿಚಾರಗಳನ್ನು ನಾನು ಬಹಳ ಕೂಲಂಕಷವಾಗಿ ತಿಳಿದುಕೊಂಡಿದ್ದೇನೆ. ಅನೇಕ ಮಾನ್ಯ ಸದಸ್ಯರು ಇಲಾಖೆಗಳ ಕೃತಿ ಹಾಗೂ ಕೆಲವು ನ್ಯೂನತೆಗಳ ಬಗ್ಗೆ ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಅವುಗಳ ಬಗ್ಗೆ ಸೂಕ್ತ ಹಾಗೂ ಯೋಗ್ಯ ಸಲಹೆಗಳನ್ನು ಪರಿಶೀಲಿಸುವುದಕ್ಕೆ ಸರ್ಕಾರ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆಂದು ನಾನು ಹೇಳುತ್ತೇನೆ.

ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರುವ ಪಶು ಸಂಪತ್ತನ್ನು ಬೆಳೆಸುವ ಬಗ್ಗೆ ನಮ್ಮ ರಾಜ್ಯದಲ್ಲಿರುವ ಪಶು ಹಾಗೂ ಪ್ರಾಣಿಗಳ ಸಂಬಂಧದ ಬಗ್ಗೆ ಲೆಕ್ಕ ಹಾಕಿದರೆ, ಇಬ್ಬರು ಮನುಷ್ಯನ ಲೆಕ್ಕಕ್ಕೆ ಒಂದು ಪಶು ಬರುತ್ತದೆ. ಇವತ್ತು ರಾಜ್ಯದಲ್ಲಿರುವ ಪಶುಸಂಪತ್ತನ್ನು ಹೇಗೆ ಬೆಳೆಸಬೇಕು, ಅದಕ್ಕೆ ಬರತಕ್ಕ ತಳಿಯ ಅಭಿವೃದ್ಧಿ, ರೋಗಗಳನ್ನು ತಡೆಗಟ್ಟುವ ಬಗ್ಗೆ ಇನ್ನೂ ಇತರ ವಿಷಯಗಳ ಬಗ್ಗೆ ಅನೇಕ ಸಲಹೆಗಳು ಬಂದಿವೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಎರಡು ಮುಖ್ಯವಾದ ತಳಿಗಳು ಅಂದರೆ, ಹಳ್ಳಿಕಾರ್ ಮತ್ತು ಅಮೃತಮಹಲ್. ಅಮೃತಮಹಲ್ ಎಂಬುದು ಈ ಪ್ರಪಂಚದಲ್ಲಿ ಹೆಸರುವಾಸಿಯಾದಂಥ ತಳಿ ಎಂಬುದಾಗಿ ಹೇಳುವುದು ಒಂದು ನಿರ್ವಿವಾದವಾದ ಸಂಗತಿ. ಕಳೆದ ಅನೇಕ ಯುದ್ಧಗಳಲ್ಲಿ ಅಮೃತಮಹಲ್ ಎತ್ತುಗಳನ್ನು ಕಟ್ಟಿ ಫಿರಂಗಿ, ಮುಂತಾದುವನ್ನು ಸಾಗಾಣಿಕೆ ಮಾಡುತ್ತಿದ್ದರು. ಈಗ ಆ ತಳಿಯನ್ನು ಉಳಿಸಬೇಕು, ಅದನ್ನು ಅಭಿವೃದ್ಧಿಗೆ ತರಬೇಕೆಂದು ಆ ಒಂದು ಪ್ರದೇಶದಿಂದ ಬಂದಂಥ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಅಮೃತಮಹಲ್ ಕಾವಲು 60 ಸಾವಿರ ಎಕರೆ. ಹಳ್ಳಿಕಾರ್ ತಳಿಯನ್ನು ಅಮೃತ್‌ಮಹಲ್ ಕಾವಲ್‌ನಲ್ಲಿರುವ 3 ಸಾವಿರ ದನಗಳನ್ನು ಇಟ್ಟುಕೊಂಡು ಅಭಿವೃದ್ಧಿ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿಗೆ ಅಂತಹ ತಳಿಯನ್ನು ಅಭಿವೃದ್ಧಿಮಾಡಿ ರೈತರಿಗೆ ಸಾಗುವಳಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಕೆಲವು ಸದಸ್ಯರು ಸೂಚನೆಕೊಟ್ಟಿದ್ದಾರೆ. ಇವತ್ತು ಅಮೃತಮಹಲ್ ಕಾವಲನ್ನು ಯೋಗ್ಯ ಜಮೀನೆಂದು ಪರಿಗಣಿಸಿ ಸಾಗುವಳಿಗೆ ಕೊಡಬೇಕೆಂದು ಕೆಲವು ಸದಸ್ಯರು ಹೇಳಿದ್ದಾರೆ. ಈಗಾಗಲೇ ಸರ್ಕಾರದ ನೀತಿ ಇದರ ಬಗ್ಗೆ ಏನೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಕಳೆದ ಅಧಿವೇಶನದಲ್ಲಿಯೇ ಪ್ರಶ್ನೋತ್ತರವೇಳೆಯಲ್ಲಿ ಹೇಳಿದ್ದಾರೆ. ಅಮೃತಮಹಲ್ ಕಾವಲು ಏನಿದೆ ಅಲ್ಲಿ ಹೆಚ್ಚು ಹಾಲು ಕೊಡತಕ್ಕ ಮಿಶ್ರ ತಳಿಯನ್ನು ಸಾಕುವುದಕ್ಕೆ ಪ್ರಯತ್ನ ಮಾಡಿ ಸಣ್ಣ ಹಾಗೂ ಮಧ್ಯಮವರ್ಗದ ರೈತರಿಗೆ ಅವನ್ನು ಹಂಚುವುದಕ್ಕೆ ಅನುಕೂಲವಾಗಬೇಕು. ಯೋಗ್ಯವಾದ ಜಮೀನನ್ನು ಹೀಗೆ ಅಭಿವೃದ್ಧಿ ಮಾಡಿ ಹುಲ್ಲನ್ನು ಹೆಚ್ಚಿಗೆ ಬೆಳೆದು ಈ ಪಶುಸಂಪತ್ತನ್ನು ಹೆಚ್ಚಿಗೆ ಮಾಡಿ ವ್ಯವಸಾಯಕ್ಕೆ ಯೋಗ್ಯವಾದ ಹಾಗೂ ಉತ್ತಮವಾದ ಹಾಲು ಕೊಡತಕ್ಕ ಹಸುಗಳನ್ನು ಯಾವಾಗಲೂ ಅಭಿವೃದ್ಧಿಪಡಿಸಬೇಕೆಂಬುದೇ ಸರ್ಕಾರದ ನೀತಿಯಾಗಿದೆ. ಆದ್ದರಿಂದ ವ್ಯವಸಾಯ ಮತ್ತು ಅರಣ್ಯ ಖಾತೆಯ ಮಂತ್ರಿಗಳು ಹೇಳಿದ ಹಾಗೆ ಸರ್ಕಾರದ ನೀತಿಯ ಪ್ರಕಾರ ಅಮೃತಮಹಲ್ ಕಾವಲ್ ಜಮೀನನ್ನು ಸಾಗುವಳಿಗೆ ಕೊಡುವುದಕ್ಕಾಗುವುದಿಲ್ಲವೆಂಬ ಮಾತನ್ನು ನಾನು ಮತ್ತೆ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪಶುಸಂಪತ್ತನ್ನು ಮತ್ತು ತಳಿಯನ್ನು ಒಂದೇ ಕಾಲದಲ್ಲಿ ಅಭಿವೃದ್ಧಿಮಾಡಬೇಕೆಂದು ಹೇಳುವಾಗ ಅವೇ ಮಾತಿನಲ್ಲಿ ಈ ಜಮೀನನ್ನು ಹಂಚುವ ಬಗ್ಗೆ ಯೋಗ್ಯವಾದ ಸಲಹೆಯೇನೂ ಇಲ್ಲ. ಈ ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಎಲ್ಲರ ಸಹಕಾರವನ್ನು ನಾನು ಕೋರುತ್ತೇನೆ. ಈ ಅಭಿವೃದ್ಧಿಯ ಬಗ್ಗೆ ತಳಿಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಸಾಕ ರೈತರಿಗೆ ವ್ಯವಸಾಯಕ್ಕೆ ಬೇಕಾದಂಥ ಎತ್ತುಗಳನ್ನು ಕಡಿಮೆ ದರದಲ್ಲಿ ಕೊಡುವುದಕ್ಕೆ ಸರ್ಕಾರ ಪ್ರಯತ್ನಮಾಡಬೇಕೆಂದು ಹೇಳಿದ್ದಾರೆ. ಆ ವಿಷಯದಲ್ಲಿ ಹೆಚ್ಚಿನ ಕಾರ್ಯವನ್ನು ತ್ವರಿತವಾಗಿ ತೆಗೆದುಕೊಳ್ಳುತ್ತೇವೆಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಅಮೃತಮಹಲ್ ಕಾವಲ್‌ನಲ್ಲಿ ಎಡೆಡ್ ಕ್ಯಾಟಲ್ ಬ್ರೀಡರ್ಸ್ ಇಟ್ಟುಕೊಂಡು ಸಾಕುತ್ತಿದ್ದರು.

ಅವರಿಗೆ ಈಗ ತೊಂದರೆಯಾಗಿದೆ. ಇವತ್ತು ಅಲ್ಲಿ ಆ ರೀತಿ ಮೇಯಿಸತಕ್ಕ ಹಕ್ಕನ್ನು ತೆಗೆದಿದ್ದರಿಂದ ಈಗ ಪುನಃ ಏಡೆಡ್ ಕ್ಯಾಟಲ್ ಬ್ರೀಡರ್ಸ್‌ನಿಂದ ಮನವಿಗಳು ಬಂದಿವೆ. ನಮ್ಮ ಸರ್ಕಾರದ ದನಗಳು ಅಲ್ಲಿ ಮೇಯಿಸಿದನಂತರ ಬೇರೆಯವರಿಗೆ ಕೊಡುವುದನ್ನು ಸಾವಧಾನವಾಗಿ ಪರಿಶೀಲಿಸಿ ಅದರ ಬಗ್ಗೆ ಕೆಲವು ಟರ್ಮ್ಸ್ ಅಂಡ್ ಕಂಡೀಷನ್ಸ್ ಹಾಕಿ ತೀರ್ಮಾನ ಮಾಡಬೇಕಾಗಿದೆ. ಈಗ ಅಲ್ಲಿ ದನಗಳನ್ನು ಸಾಕುವ ಕಾವಲುಗಾರರನ್ನು ಟೆಂಪೊರರಿಯಾಗಿ ಇಟ್ಟಿದ್ದಾರೆ. ಅವರನ್ನು ಪರ್ಮನೆಂಟಾಗಿ ಮಾಡಬೇಕೆಂಬುದಾಗಿ ಮಾನ್ಯ ಶ್ರೀ ಹನುಮೇಗೌಡರು ಹೇಳಿದ್ದಾರೆ. ಆ ವಿಷಯವನ್ನು ಸರ್ಕಾರ ಪರಿಶೀಲಿಸಿ ಇದರ ಬಗ್ಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಅಪ್ಲಿಕೇಷನ್ಸ್ ಕರೆಯದೆ ಒಂದು ವಿಶೇಷವಾದಂಥ ಕಾರ್ಯವಾಗಬೇಕಾಗಿದ್ದುದರಿಂದ ಅವರ ಕೆಲಸಗಳನ್ನು ರೆಗ್ಯುಲರೈಜ್ ಮಾಡುವ ಕೆಲಸದಲ್ಲಿದ್ದೇವೆ. ಇಷ್ಟು ಹೇಳುವಾಗ ಅಮೃತ ಮಹಲ್ ಕಾವಲಿನಲ್ಲಿ ಯೋಗ್ಯ ಜಮೀನುಗಳಲ್ಲಿ ಹುಲ್ಲು ಬೆಳೆದು ಬಂದಿದ್ದರೆ, ಅಲ್ಲಿನ ಕೆಲವು ಪ್ರದೇಶಗಳನ್ನು ಗ್ರೇಜಿಂಗ್ ಅನಿಮಲ್ಸ್‌ಗೋಸ್ಕರ ಕೊಡಬೇಕೆಂದೂ ಯೋಚನೆ ಮಾಡಿದ್ದಾರೆ. ಆ ದೃಷ್ಟಿಯಲ್ಲಿ ನಮಗೆ ಹೆಚ್ಚಿಗೆ ಕೇಂದ್ರಸರ್ಕಾರದಿಂದ ಹಣ ಸಹಾಯ ಬೇಕಾಗಿರುತ್ತದೆ. ಈ ಯೋಜನೆಯನ್ನು ಕೇಂದ್ರಸರ್ಕಾರಕ್ಕೂ ಕಳುಹಿಸಿದ್ದೇವೆ. ನ್ಯಾಷನಲ್ ಅಗ್ರಿಕಲ್‌ಚರಲ್ ಕಮಿಷನ್ನಿನವರನ್ನೂ ಸಹ ನಾವು ಒತ್ತಾಯಮಾಡಿದ್ದೇವೆ. ಅವರೂ ಸಹ ಇದರ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಈ ರಾಜ್ಯದಲ್ಲಿ ಹಾಸನ, ಮೈಸೂರು, ಬೆಂಗಳೂರು, ಮುಂತಾದ ಕಡೆಗಳಲ್ಲಿ ಕಾವ್ಸ್ ಅಂಡ್ ಹೀಫರ್ಸ್ ಬೆಳವಣಿಗೆಯ ದೃಷ್ಟಿಯಿಂದ ಕೆಲವಾರು ಕೇಂದ್ರಗಳನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ. ಇವತ್ತಿನದಿವಸ ತಮಗೆಲ್ಲಾ ತಿಳಿದಿರುವ ಹಾಗೆ ಈಗ ಸಮಗ್ರ ಭೂಸುಧಾರಣೆ ಜಾರಿಗೆ ಬರುತ್ತಿರುವಾಗ ರೈತನು ತನ್ನ ಆರ್ಥಿಕ ಸಮಸ್ಯೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಈ ಯೋಜನೆಯನ್ನು ಮಿಕ್ಸೆಡ್ ಫಾರ್ಮಿಂಗ್ ರೀತಿ ಮಾಡಬೇಕು. ರೈತ ಬರೀ ಜಮೀನು ಸಾಗುವಳಿ ಮಾಡಿ ಅದರಿಂದ ಬರತಕ್ಕ ಹಣದಲ್ಲಿ ತಾನೂ ಕೂಡ ಬಾಳುವುದಕ್ಕೆ ಪ್ರಯತ್ನಪಡಬೇಕಾಗಿದೆ. ಇನ್ನೂ ಹೆಚ್ಚಿಗೆ ಅನುಕೂಲವಾಗಲಿ ಎಂದು ಮಿಶ್ರತಳಿ ಹಸುಗಳನ್ನು ಕಟ್ಟುತ್ತೇನೆಂದು ಹೇಳುತ್ತಾನೆ. ಹಸುರು ಕ್ರಾಂತಿ ಜೊತೆಗೆ ಕ್ಷೀರ ಕ್ರಾಂತಿ ಮಾಡಬೇಕೆಂದು ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹತ್ವ ಕೊಟ್ಟಿದ್ದಾರೆ. ಅದಕ್ಕೆ ಪ್ಲಾನಿಂಗ್ ಕಮಿಷನ್ನಿನವರೂ ಸಹ ಮಹತ್ವ ಕೊಟ್ಟಿದ್ದಾರೆ. ರಾಜ್ಯ ಸರ್ಕಾರದವರೂ ಸಹ ಹೆಚ್ಚಿಗೆ ಕ್ಷೀರ ಕ್ರಾಂತಿಯಾಗಿ ರೈತನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಸಹಕಾರಿಯಾಗಬೇಕು. ಹೆಚ್ಚಿಗೆ ಹಾಲು ಕೊಡತಕ್ಕ ಹಸುಗಳನು ಸಾಕುವುದು, ಕೋಳಿ ಸಾಕಾಣಿಕೆ, ಮತ್ತು ಕುರಿ ಸಾಕಾಣಿಕೆಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಈಗಾಗಲೇ ಕೊಡುತ್ತಿದ್ದಾರೆ. ಮಿಶ್ರ ತಳಿಯನ್ನು ಉತ್ಪತ್ತಿ ಮಾಡುವುದಕ್ಕೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಾಜೆಕ್ಟನ್ನೂ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಇದುವರೆಗೂ ಸೇರಿಸಿಲ್ಲ. ಅದರ ಬಗ್ಗೆ ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಅದರ ಬಗ್ಗೆ ಸೂಕ್ತವಾಗಿ ಪರಿಶೀಲಿಸಿ ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಭೆಯ ಮೂಲಕ ಮತ್ತೊಮ್ಮೆ ಕೇಂದ್ರಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ. ಅಷ್ಟೇ ಪ್ರಾಮುಖ್ಯವಾದ ಯು.ಎನ್.ಡಿ.ಬಿ. ಪ್ರಾಜೆಕ್ಟ್ ಹಾಗೂ ಗ್ರಾಸ್ ಲ್ಯಾಂಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಕೂಡ ಇಲ್ಲಿ ಆಗಬೇಕೆಂದು ಕೇಂದ್ರ ಸರ್ಕಾರದಲ್ಲಿ ಒತ್ತಾಯಪೂರ್ವಕವಾಗಿ ಕೇಳಿದ್ದೇವೆ.

ಇಷ್ಟನ್ನು ಹೇಳಿದರೂ ಪಶುವೈದ್ಯ ಶಾಲೆಗಳೂ ಮತ್ತು ಗ್ರಾಮಾಂತರ ಪಶುವೈದ್ಯಶಾಲೆಗಳೂ ಸಾಕಷ್ಟು ಇಲ್ಲ ಈ ದಿಶೆಯಲ್ಲಿ ಬಹಳ ಕೊರತೆ ಇದೆ ಎಂದು ಅನೇಕರು ಹೇಳಿದ್ದಾರೆ. ಈ ವಿಚಾರದಲ್ಲಿ ಅನೇಕರು ಶಾಸಕರೂ ಅಂದರೆ ಮೇಲ್ಮನೆಯವರೂ ಮತ್ತು ಈ ಮನೆಯ ಶಾಸಕರೂ ನನಗೆ ಕಳೆದ ಎರಡು ತಿಂಗಳಿಂದ ಅಂದರೆ ನಾನು ಇಲ್ಲಿ ಮಂತ್ರಿಪದವಿಯನ್ನು ಸ್ವೀಕಾರ ಮಾಡಿದ ನಂತರ ತಾಲ್ಲೂಕ್ ಬೋರ್ಡಿನವರೂ ಮತ್ತು ಗ್ರಾಮಪಂಚಾಯಿತಿಯವರೂ ಅನೇಕರೂ ಇದರ ಬಗ್ಗೆ ಹೇಳಿದ್ದಾರೆ. ನಮ್ಮಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳ ಸಂಖ್ಯೆ 570; ತಾಲ್ಲೂಕ್ ಹಾಗೂ ಜಿಲ್ಲಾ ಮಟ್ಟದಲ್ಲಿರತಕ್ಕ ವೆಟ್‌ರಿನ ಆಸ್ಪತ್ರೆಗಳು 256 ಇವೆ. ರಾಜ್ಯದಲ್ಲಿರತಕ್ಕ ತಜ್ಞರ ಅಭಿಪ್ರಾಯದ ಪ್ರಕಾರ ನಮಗೆ ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಪಶುವೈದ್ಯಶಾಲೆಗಳು ಬೇಕಾಗಿರುವುದರಿಂದ ಹಾಲಿ ಇರತಕ್ಕವುಗಳನ್ನು ಉತ್ತಮಪಡಿಸಿದಾಗ್ಯೂ ಗ್ರಾಮಾಂತರ ಪ್ರದೇಶಗಳಿಗೆ ಇನ್ನೂ 516 ಆರ್. ವಿ. ಡೀಸ್ ಗಳೂ ಮತ್ತು 115 ವೆಟ್‌ರಿನರಿ ಡಿಸ್ಪೆನ್ಸರಿಗಳೂ ಬೇಕಾಗುತ್ತವೆ. ಈ ದಿಶೆಯಲ್ಲಿ ರಾಜ್ಯಾದ್ಯಂತ ಎಲ್ಲೆಲ್ಲಿ 10 ಸಾವಿರ ಜಾನುವಾರುಗಳು ಇರುತ್ತವೋ ಅಂದರೆ ಮೈದಾನ ಪ್ರದೇಶದಲ್ಲಿ ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದೂ ಮತ್ತು ಮಲೆನಾಡು ವಿಭಾಗ[illegible] ಮೂರು ಸಾವಿರ ಜಾನುವಾರುಗಳು ಇರತಕ್ಕ ಪ್ರದೇಶಕ್ಕೆ ಅಥವಾ 6 ಮೈಲಿ ಪ್ರದೇಶ[illegible]ದು ಆಸ್ಪತ್ರೆಯನ್ನು ಒದಗಿಸಬೇಕಾದ್ದು ಅತ್ಯಗತ್ಯವೆಂದು ಸರ್ಕಾರಕ್ಕೆ ಮನವರಿಕೆ

(ಶ್ರೀ ಎನ್. ಚಿಕ್ಕೇಗೌಡ)

ಯಾಗಿದೆ. ಹೀಗೆ ಆಸ್ಪತ್ರೆಗಳನ್ನು ಒದಗಿಸಬೇಕಾಗಿದ್ದರೆ ನಮಗೆ ಹೊಸದಾಗಿ 116 ಆಸ್ಪತ್ರೆಗಳೂ ಮತ್ತು 516 ಆರ್. ವಿ. ಡೀಸ್‌ಗಳೂ ಬೇಕಾಗುತ್ತವೆ. ಆದರೆ ನಾನು ತಮಗೆ ಈ ದಿವಸ ಒಂದು ವಿಷಯವನ್ನು ತಿಳಿಸಬೇಕಾಗಿದೆ. ಈ ಎಲ್ಲಾ ಆಸ್ಪತ್ರೆಗಳನ್ನೂ ಒಂದೇವರ್ಷದಲ್ಲಿ ಒದಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ ಈ ಚಾಲ್ತಿ ಸಾಲಿನಲ್ಲಿ ಕೆಲವು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸುವುದರ ಜೊತೆಗೆ ಹಾಲಿ ಇರತಕ್ಕ ಕೆಲವನ್ನು ಅಪ್‌ಗ್ರೇಡ್ ಮಾಡಲಾಗುತ್ತದೆ. ಇಷ್ಟಕ್ಕೆ ಬೇಕಾಗುವಷ್ಟು ಹಣವನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಇನ್ನು ಈ ದಿವಸ ಸರ್ಕಾರದವರ ವಶದಲ್ಲಿರತಕ್ಕ ಪಶುವೈದ್ಯಶಾಲೆಗಳಿಗೆ ಮತ್ತು ವೈದ್ಯಶಾಲೆಗಳಿಗೆ ತಾಲ್ಲೂಕ್ ಬೋರ್ಡಿನವರೂ ಮತ್ತು ಗ್ರಾಮಪಂಚಾಯಿತಿಯವರು ಏನು ಒಂದು ವಂತಿಕೆಯನ್ನು ಕೊಡಬೇಕಾಗಿದೆ ಅದು ಈ ರೆಕರಿಂಗ್ ಎಕ್ಸ್‌ಪೆಂಡಿಚರ್ ಬಗ್ಗೆ ಶೇಕಡ 25 ರಷ್ಟನ್ನು ಅನ್ಯುಯಲ್ ಕಾಂಟ್ರಿಬ್ಯೂಷನ್ ರೀತಿಯಲ್ಲಿ ಕೊಡಬೇಕಾಗಿದೆ ಎನ್ನತಕ್ಕ ವಿಷಯ ತಮಗೆಲ್ಲರಿಗೂ ತಿಳಿದಿರತಕ್ಕದ್ದೇ ಇದೆ.

ಇನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸುವುದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಲಾಗಿದೆ. ಆದರೆ ಶ್ರೀ ವಿ. ಎನ್. ಪಾಟೀಲರವರು ಟಲ್ಬರಾನ್ ಮತ್ತು ಮೆಫೆಕ್ಸ್ ಔಷಧಿಗಳು ಗ್ರಾಮಾಂತರ ಪ್ರದೇಶದಲ್ಲಿ ಸರಿಯಾಗಿ ಸಿಕ್ಕುತ್ತಿಲ್ಲ ಎಂದು ಹೇಳಿದ್ದಾರೆ. ಆದರೆ ಅವರು ಹೇಳಿದವುಗಳು ಔಷಧಿಗಳಲ್ಲ. ಅವು ಟಾನಿಕ್ಕುಗಳು. ಹಸುಗಳಲ್ಲಿ ಹಾಲು ಹೆಚ್ಚುವುದಕ್ಕಾಗಿ ಅವುಗಳನ್ನು ಕೊಡುತ್ತಾರೆ. ಅವುಗಳೇನಿದ್ದರೂ ಒಂದು ಜನರಲ್ ಟಾನಿಕ್ ಇದ್ದಹಾಗೆ. ಅವುಗಳ ಕೊರತೆ ಸ್ವಲ್ಪ ಮಟ್ಟಿಗೆ ಇದೆ. ಅವುಗಳನ್ನು ದುರುಪಯೋಗಮಾಡಿ ಮಾರುಕಟ್ಟೆಯಲ್ಲಿ ಬ್ಲಾಕ್ ಮಾರ್ಕೆಟ್ ಮಾಡುತ್ತಾರೆಂಬ ಪುಕಾರೂ ಇದೆ. ಆದರೆ ಅದು ಮಾರುಕಟ್ಟೆಯಲ್ಲಿ ಸರಳವಾಗಿ ಸಿಕ್ಕುತ್ತಿಲ್ಲ. ಸ್ವಲ್ಪ ತೊಂದರೆ ಇದೆ. ಅದನ್ನು ಎಲ್ಲಿ ಸಿಕ್ಕುತ್ತದೋ ಅಲ್ಲಿಂದ ತರಿಸುವುದಕ್ಕೆ ಸರ್ವಪ್ರಯತ್ನಗಳನ್ನೂ ಮಾಡಲಾಗುತ್ತದೆಂದು ನಾನು ತಮಗೆ ಭರವಸೆ ಕೊಡಬಲ್ಲೆ.

ಇನ್ನು ಜಾನುವಾರುಗಳಿಗೆ ಬರತಕ್ಕ ಅಂಟು ರೋಗಗಳ ವಿಚಾರದಲ್ಲಿ ಹೇಳುವುದಾದರೆ ಈ ದೊಡ್ಡ ರೋಗ ಚಪ್ಪೇರೋಗ, ಕೋಳಿಗಳಿಗೆ ಬರತಕ್ಕ ರಾಣಿಕೆಟ್ ಡಿಸೀಜ್ ಮತ್ತು ಕುರಿಗಳಿಗೆ ಬರತಕ್ಕ ರೋಗಗಳ ವಿಚಾರದಲ್ಲಿ ಅನೇಕರು ಮಾತನಾಡಿದ್ದಾರೆ. ಈ ದಿವಸ ನಮ್ಮ ಹೆಬ್ಬಾಳದಲ್ಲಿ ರತಕ್ಕ ಆ ಸೀರಂ ಇನ್‌ಸ್ಟಿಟ್ಯೂಟ್ 1926 ರಲ್ಲಿ ಸ್ಥಾಪಿತವಾಯಿತು. ಅದು ಇಲ್ಲಿಯತನಕ ನಮ್ಮ ರಾಜ್ಯದ 10 ಜಿಲ್ಲೆಗಳಿಗೆ ಸೀರಂ ವ್ಯಾಕ್ಸೀನ್ ಕೊಡತಕ್ಕ ಶಕ್ತಿಯನ್ನು ಗಳಿಸಿರುತ್ತೆ. ಅದನ್ನು ಇನ್ನೂ ಅಭಿವೃದ್ಧಿ ಮಾಡುವುದಕ್ಕಾಗಿ ಅಲ್ಲಿಗೆ ಇನ್ನೂ ಹೆಚ್ಚಿನ ಸಲಕರಣೆಗಳನ್ನೂ ಮತ್ತು ತಜ್ಞರ ಒಂದು ಸಮಿತಿಯನ್ನೂ ಕೂಡ ಮಾಡಿ ಅವರ ವರದಿಯನ್ನು ಈಗಾಗಲೇ ತರಿಸಿಕೊಂಡಿದ್ದೇವೆ. ಇನ್ನು ಮುಂದಕ್ಕೆ ಅಲ್ಲಿ ಮಾಡರನ್ ಮೆಥೆಡ್ಸ್ ಪ್ರಕಾರ ವ್ಯಾಕ್ಸೀನನ್ನು ತಯಾರು ಮಾಡಿ ರಾಜ್ಯಕ್ಕೆ ಹೆಚ್ಚಿನ ಮಟ್ಟದಲ್ಲಿ ಸರಬರಾಯಿ ಮಾಡತಕ್ಕ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ. ಇನ್ನು ಮಿಶ್ರ ಥಳಿ ಹಸುಗಳಿಗೆ ಬರತಕ್ಕ ಕಾಲುಜ್ವರ ಬಾಯಿಜ್ವರ ಇದನ್ನು ವಾಸಿಮಾಡತಕ್ಕ ಹಾಗೂ ಆ ರೋಗ ಬಾರದಂತೆ ಅದನ್ನು ತಡೆಗಟ್ಟತಕ್ಕ ವ್ಯಾಕ್ಸೀನನ್ನು ತರಿಸುವುದಕ್ಕೆ ಸರ್ವಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಆದರೆ ಈ ಔಷಧಿಯನ್ನು ಇಲ್ಲಿಯವರೆಗೂ ನಾವು ಆ ಇಜತ್‌ನಗರದಿಂದಲೇ ತರಿಸಬೇಕಾಗಿತ್ತು. ಆದರೆ ಈ ದಿವಸ ಈ ಔಷಧಿಯನ್ನು ಇಲ್ಲೇ ತಯಾರಿಸತಕ್ಕ ಬಗ್ಗೆ ಡೆನ್ಮಾರ್ಕಿನ ಕೊಲಾಬೊರೇಷನ್ ಮೂಲಕ ಕಾರ್ಯನಡೆದಿದೆ ಅವರಿಗೆ ನಮ್ಮ ಸರ್ಕಾರ ಸುಲಭವಾಗಿ ಭೂಮಿಯನ್ನೂ ನೀರನ್ನೂ ಹಾಗೂ ಬಿಲ್ಡಿಂಗುಗಳನ್ನೂ ಒದಗಿಸಿದೆ. ಅದನ್ನು ಒಂದು ಕೋಟಿ ರೂಪಾಯಿ ಬಂಡವಾಳದಲ್ಲಿ ಪ್ರಾರಂಭವಾಗತಕ್ಕ ಒಂದು ಪ್ರಾಜೆಕ್ಟಾಗಿದೆ. ಇದನ್ನು ನಾವು ಕೇಂದ್ರ ಸರ್ಕಾರದವರ ನೆರವಿನಿಂದ ಮಾಡುತ್ತಿದ್ದೇವೆ.

ಇನ್ನು ನಮ್ಮಲ್ಲಿ ಜನರ ಪೂರೈಕೆಯನ್ನು ಈ ಕ್ರಾಸ್‌ಬ್ರೀಡ್ ಹಸುಗಳ ಬಗ್ಗೆ ನಡೆಸಲು ನಮಗೆ ಸಾಕಷ್ಟು ಹಸುಗಳು ಸಿಕ್ಕುತ್ತಿಲ್ಲ. ಒಂದು ವೇಳೆ ಸಿಕ್ಕಿದರೂ ಅವು ಸುಲಭ ದರದಲ್ಲಿ ಸಿಕ್ಕುತ್ತಿಲ್ಲ. ನಮ್ಮ ರಾಜ್ಯದಲ್ಲಿ ಕೆಲವು ಹೆಚ್ಚು ಮಳೆ ಬರತಕ್ಕ ಜಿಲ್ಲೆಗಳನ್ನು ಬಿಟ್ಟು ಬಾಕಿ ಜಿಲ್ಲೆಗಳಿಗೆ ಈ ಮಿಶ್ರ ಥಳಿ ಹಸುಗಳನ್ನು ಸಾಧ್ಯವಾದ ಮಟ್ಟಿಗೂ ಒದಗಿಸುತ್ತಿದ್ದೇವೆ. ಬೆಂಗಳೂರು ಮತ್ತು ಇದರ ಸುತ್ತಮುತ್ತ ಇರತಕ್ಕ ಗ್ರಾಮಗಳಲ್ಲಿ ಮತ್ತು ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ಈ ಮಿಶ್ರಥಳಿ ಹಸುಗಳನ್ನು ಸಾಕುವುದು ಬಹಳ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ನಮ್ಮ ಬೆಂಗಳೂರಿನ ಹಾಲಿನ ಕೇಂದ್ರಕ್ಕೆ ಈ ಸ್ಥಳಗಳಿಂದ ಈ ದಿವಸ ದಿವಸಕ್ಕೆ 600 ಲೀಟರ್ಸ್ ಹಾಲು ಬರುತ್ತಿದೆ. ಇನ್ನು ಈಗ ಸರ್ಕಾರದವರು ಈ ಮಿಶ್ರಥಳಿ ಹಸುಗಳನ್ನು ಹಾಸನ ಮಂಗಳೂರು ಭಾಗಗಳಿಗೆ ಒದಗಿಸುವುದಕ್ಕೆ ಹಾಗೂ ಅಲ್ಲಿ ಕ್ಷೀರ ಕೇಂದ್ರಗಳನ್ನು ತಯಾರು ಮಾಡುವುದಕ್ಕೆ ಸರ್ವಪ್ರಯತ್ನ

ಗಳನ್ನೂ ಮಾಡುತ್ತಿದ್ದಾರೆ. ಈ ದಿಶೆಯಲ್ಲಿ ಸರ್ಕಾರದವರು ಈ ಮಿಶ್ರತಳಿ ಹಸುಗಳನ್ನು ಸಾಕಿ ಅವುಗಳ ಕರುಗಳು ಗರ್ಭಧಾರಣೆ ಮಾಡಿದ ಕೂಡಲೇ ಅವುಗಳನ್ನು ಅಲ್ಲಿ ರೈತರಿಗೆ ಒದಗಿಸುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದರಿಂದ ಮಧ್ಯಮ ವರ್ಗದವರಿಗೂ ಈ ಹಾಲನ್ನು ಹಂಚುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕಾಗಿದೆ.

ಇನ್ನು ರಾಜ್ಯದಲ್ಲಿ 8 ಕ್ಯಾಟಲ್ ಫಾರಂಗಳಿವೆ. ಆದರೆ ಅಲ್ಲಿ ಕೆಲಸಗಳು ಈದಿವಸ ವೇಗದಾಯಕ ರೀತಿಯಲ್ಲಿ ನಡೆಯುತ್ತಿಲ್ಲ. ನಮ್ಮಲ್ಲಿ ಆ ಹಸುರು ಕ್ರಾಂತಿ, ಬಿಳಿ ಕ್ರಾಂತಿ ಮತ್ತು ಕ್ಷೀರ ಕ್ರಾಂತಿ ಯೋಜನೆಗಳು ಅಷ್ಟು ಬೇಗ ಆಗುವುದು ಕಷ್ಟವಾದ್ದರಿಂದ ಸರ್ಕಾರದವರು ಇಂಟೆನ್‌ಸೀವ್ ಕ್ಯಾಟಲ್ ಡೆವಲಪ್‌ಮೆಂಟ್ ಪ್ರಾಜೆಕ್ಟುಗಳನ್ನು ಮಾಡಲು ಕೆಲವು 'ಕೀ' ವಿಲೇಜುಗಳ ಸ್ಕೀಮನ್ನು ಜಾರಿಗೆ ತಂದಿದ್ದಾರೆ. ಇದನ್ನು ಪ್ರಾರಂಭಮಾಡುವುದಕ್ಕಾಗಿ ಚಾಮರಾಜನಗರ ಮತ್ತು ಹುಣಸೂರುಗಳನ್ನು ಈಗಾಗಲೇ ಈ 'ಕೀ' ವಿಲೇಜ್ ಸ್ಕೀಮಿಗೆ ನಿರ್ಧಾರಮಾಡಿದೆ ಅಲ್ಲಿ ಈ ಸ್ಕೀಮನ್ನು ಪ್ರಾರಂಭಮಾಡಲಾಗುತ್ತಿದೆ.

ಇನ್ನು ಕೃತಕ ಗರ್ಭಧಾರಣೆಯ ಕೇಂದ್ರಗಳು ನಮ್ಮಲ್ಲಿ 410 ಇವೆ. ಇನ್ನು ಕೆಲವು ಕೇಂದ್ರಗಳನ್ನು ಮಂಗಳೂರಲ್ಲಿ ಮಾಡಬೇಕಾಗಿದೆ. ಜನರು ಈ ದಿವಸ ಆ ಮುರಾಬ್ರೀಡ್ ಮತ್ತು ದೇವನೀ ಬ್ರೀಡ್ ಗೂಳಿಗಳಿಗೂ ಮತ್ತು ಕೋಣಗಳಿಗೂ ಡಿಮ್ಯಾಂಡ್ ಜಾಸ್ತಿ ಇದೆ. ಆದರೆ ಅವುಗಳ ಸಪ್ಲೈಸಾಕಷ್ಟು ಆಗುತ್ತಿಲ್ಲ. ಅದಕ್ಕಾಗಿ ನಾವು ಡಿಫೆನ್ಸ್ ಇಲಾಖೆಯವರಿಗೆ ಕೇಂದ್ರಕ್ಕೆ ಬರೆದಿದ್ದೇವೆ. ಅಲ್ಲಿಂದ ಇವನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ವರ್ಲ್ಡ್ ಫುಡ್ ಪ್ರೋಗ್ರಾಂನಲ್ಲಿ ಬೇಕಾದ ಮೈಜ್ ಮತ್ತು ಜೋಳ ಕೊಟ್ಟಿದ್ದಾರೆ. ಅದನ್ನು ರೈತರಿಗೆ ಹಾಲು ಕರೆಯುವ ಹಸುಗಳು ಮತ್ತು ಕೋಳಿಗಳಿಗೆ ಫೀಡ್ ಮಾಡಲು ಕೊಡಲಾಗಿದೆ. ಇದಕ್ಕೆ ಸುಮಾರು 7 ಲಕ್ಷ ಹಣವಿದೆ, ಇದನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕೆಂಬುದನ್ನು ಯೋಚನೆಮಾಡುತ್ತಿದ್ದೇವೆ. ಇದರ ಜೊತೆಗೆ ರಾಜ್ಯದ ಆದ್ಯಂತ ಸಾಕುವವರಿಗೆ ಒಂದೊಂದು ಒಳ್ಳೆಯ ಹೋರಿಯನ್ನು ಕೊಡಬೇಕೆಂದಿದ್ದೇವೆ, ಈ ರೀತಿ ನೂರು ಹೋರಿ ಸುಲಭ ದರದಲ್ಲಿ ಕೊಡಬೇಕು, ಸಬ್ಸಿಡಿ ರೂಪವಾಗಿ 500 ರೂಪಾಯಿ ಕೊಟ್ಟು ಸಹಾಯಮಾಡಬೇಕು ಎಂದು ಗೊತ್ತುಮಾಡಿದ್ದೇವೆ. ತಾಲ್ಲೂಕು ಬೋರ್ಡಿನಿಂದ ಶಿಫಾರ್ಸು ಮಾಡಲ್ಪಟ್ಟವರಿಗೆ ಈ ವರ್ಷ ಅದನ್ನು ಕೊಡಲಾಗುವುದು. ಇಂದು ಜಾತ್ರೆಗಳಲ್ಲಿ ಹಾಲು ಕೊಡುವ ಹಸುಗಳಿಗೆ ಸಂಬಂಧಪಟ್ಟಂತೆ ಕಾಂಪಿಟಿಷನ್ ಇಟ್ಟು ಪ್ರೋತ್ಸಾಹ ಕೊಡಬೇಕೆಂದು ಯೋಚಿಸಿದ್ದೇವೆ, ಬಜೆಟ್ಟಿನಲ್ಲಿ ಸಾಕಷ್ಟು ಹಣ ಮಂಜೂರಾದನಂತರ ಅದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ರಾಜ್ಯದಲ್ಲಿ ಕುರಿಗಳನ್ನು ಅಭಿವೃದ್ಧಿ ಮಾಡಲು ಚಳ್ಳಕೆರೆಯಲ್ಲಿ 10 ಸಾವಿರ ಎಕರೆಯಲ್ಲಿ ಕುರಿಗಳ ಫಾರಂ ಪ್ರಾರಂಭಿಸಿ ಆಸ್ಟ್ರೇಲಿಯಾದಲ್ಲಿರುವ ಕಾರ್ಡಿಯಲ್ ಬ್ರೀಡ್ ತಂದು ಕ್ರಾಸ್ ಮಾಡಿ ರೈತರಿಗೆ ಹಂಚಬೇಕೆಂದಿದ್ದೇವೆ. ಬನ್ನೂರು ಬ್ರೀಡ್ ಹೆಸರುವಾಸಿಯಾಗಿದೆ, ಅದು ಮಟನ್ ಬ್ರೀಡ್, ಪ್ರಪಂಚದಲ್ಲೆಲ್ಲಾ ಪ್ರಖ್ಯಾತವಾಗಿದೆ. ಮಳವಳ್ಳಿ ತಾಲ್ಲೂಕಿನ ಧನಗೂರಿನಲ್ಲಿ ಇದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಕೋಳಿ ಸಾಕಲು ಈಗ ಬಹಳ ಜನರು ಮುಂದೆ ಬರುತ್ತಿದ್ದಾರೆ. ಇದರಿಂದ ರೈತರಿಗೆ ಶೀಘ್ರವಾಗಿ ಹಣ ಸಿಕ್ಕುವುದು. ಸೆಂಟ್ರಲ್ ಪೌಲ್ಟ್ರಿ ಫಾರಂ ಹೆಸರಗಟ್ಟದಲ್ಲಿದೆ, 11 ರೀಜನಲ್ ಫಾರಂಗಳನ್ನು ತೆರೆಯಲಾಗಿದೆ, 11 ಪೌಲ್ಟ್ರಿ ಎಕ್ಸ್‌ಟೆನ್‌ಷನ್ ಸ್ಕೀಮ್ಸ್ ಇದೆ. ಅವುಗಳ ಮೂಲಕ ರೈತರಿಗೆ ಬೇಕಾದ ಕೋಳಿ ಮರಿಗಳನ್ನು ಸಾಕಲು ಒದಗಿಸುವುದಕ್ಕೆ ಪ್ರಯತ್ನ ಮಾಡಿದೆ. ಹೆಸರುಗಟ್ಟದಲ್ಲಿ ಅಭಿವೃದ್ಧಿ ಮಾಡಿದ ಮೈಟಿಕ್‌ಸ್ಟೀನ್ ಕೋಳಿ ತಳಿ, ಇದೆ ವೈಟ್ ಲೆಗ್ ಹಾರನ್, ಇದು ಮೊದಲನೆಯ ದರ್ಜೆಯದು. ಇದು ವರ್ಷಕ್ಕೆ ಸುಮಾರು 240 ಮೊಟ್ಟೆಗಳನ್ನು ಕೊಡುವುದು. ಐ.ಪಿ.ಡಿ.ಸಿ. ಪ್ರಾಜೆಕ್ಟ್ ಮೈಸೂರು, ಮತ್ತು ಹುಬ್ಬಳ್ಳಿ–ಧಾರವಾಡದಲ್ಲಿ ಪ್ರಾರಂಭಿಸಲಾಗಿದೆ. ಆದರೂ ಅನೇಕರು ಕೋಳಿ ಫಾರಂ ತೆರೆಯಲು ಅವರ ಆರ್ಥಿಕ ಪರಿಸ್ಥಿತಿಯನು ಸುಧಾರಿಸಬೇಕೆಂದು ಬೇಡಿಕೆಯನು ಇಡುತ್ತಿದ್ದಾರೆ. ಅದಕ್ಕನುಗುಣವಾಗಿ ನಮ್ಮ ಕೇಂದ್ರದಲ್ಲಿ ಮೈಟಿಕ್ಸ್ ಮುಂತಾದ ತಳಿಗಳನ್ನು ಬೆಳೆಸಿ ಕೊಡಲು ಸರಕಾರ ಏರ್ಪಾಡು ಮಾಡುತ್ತಿದೆ. ಈಗ ಎಗ್ ಬೋರ್ಡ್ ಮಾಡಲು ಒಂದು ಕನ್‌ಸಲ್ಟೇಷನ್ ಬೋರ್ಡ್ ಆಸ್ಟ್ರೇಲಿಯಾದಲ್ಲಿರುವ ಹಾಗೆ ಇಲ್ಲೂ ಮಾಡಬೇಕೆಂದಿದ್ದೇವೆ. ನಮ್ಮ ಬೆಂಗಳೂರು ಸುತ್ತಮುತ್ತ ಪೌಲ್ಟ್ರಿ ಫಾರಂನಲ್ಲಿ ಈಗ ಮೊಟ್ಟೆಗಳನ್ನು ಉತ್ಪತ್ತಿ ಮಾಡುತ್ತಿದ್ದಾರೆ. ಮೈಸೂರು ಪ್ರಾಡ್ಯೂಸರ್ಸ್ ಸೊಸೈಟಿಯವರು ಮೊಟ್ಟೆಗಳನ್ನು ಶೇಖರಿಸುತ್ತಿದ್ದಾರೆ, ಅದಕ್ಕೆ ಮದ್ರಾಸಿನಿಂದ ಬೇಡಿಕೆ ಇದೆ. ಮದ್ರಾಸಿನಲ್ಲಿ ಹೆಚ್ಚು ಕೋಳಿ ಸಾಕುವುದಕ್ಕೆ ಕಷ್ಟವಿದೆ, ಅಲ್ಲಿ ಮೊಟ್ಟೆಗಳ ಉತ್ಪತ್ತಿ ಕಡಮೆಯಿರುವುದರಿಂದ ಅಲ್ಲಿಗೆ ರೈಲಿನ ಮುಖಾಂತರ ಕಳಿಸಬೇಕು ಎಂದು ಯೋಚನೆಮಾಡುತ್ತಿದ್ದೇವೆ. ಈ ಬೋರ್ಡನ್ನು ಮಾಡಲು ಸ್ಟ್ಯಾಚ್ಯೂಟರಿ ಪವರ್ ಏನು ಬೇಕು ಅದನ್ನು ತಿಳಿಯಕೊಳ್ಳಲು ಆಸ್ಟ್ರೇಲಿಯದಲ್ಲಿರುವ ಕಾಯಿದೆ ಮತ್ತು ರೂಲ್ಸ್ ತರಿಸಿ

ಲೀಟರ್ ಹಂಚುತ್ತಿದ್ದರು. ಚಾಲ್ತಿ ಸಾಲಿನಲ್ಲಿ ಆಗಸ್ಟ್, ಸೆಪ್ಟೆಂಬರ್ ಮತ್ತು ನವಂಬರ್ ಸೀಸನ್‌ನಲ್ಲಿ ಫ್ಲೆಷ್ ಸೀಸನ್ ಬರುತ್ತದೆ. ಅವಾಗ ಇದು 80 ಸಾವಿರ ಲೀಟರ್‌ಗೆ ಏರಬಹುದು ಎಂದು ಲೆಕ್ಕ ಹಾಕಿದ್ದೇವೆ. ಟ್ರೇಡಿಂಗ್ ಲಾಸ್ 1968—69 ರಲ್ಲಿ 34.44 ಲಕ್ಷ ಇತ್ತು, 1971—72 ರಲ್ಲಿ 1.25 ಲಕ್ಷಕ್ಕೆ ಇಳಿಸಿದ್ದೇವೆ. 1972-73 ಕ್ಕೆ ಲಾಸ್ ಕಡಿಮೆ ಮಾಡಿ ನಷ್ಟ ಆಗದೇ ಇದ್ದ ರೀತಿಯಲ್ಲಿ ನಡೆಸಬೇಕು ಎಂದು ಮಾಡುತ್ತಿದ್ದೇವೆ. ಮುಂದಿನ ವರ್ಷದಲ್ಲಿ ಭರವಸೆ ಕೊಡಬಲ್ಲೆ. ಲಾಸ್ ಇಲ್ಲದೇ ನಡೆಸುತ್ತೇವೆ ಎಂದು. ಮಾನ್ಯ ಸದಸ್ಯರೊಬ್ಬರು ಹೇಳಿದರು ಬೆಂಗಳೂರು ಡೈರಿಯಲ್ಲಿ ಹಾಲು ಮಾರುತ್ತಾರೆ, ಕೊಂಚ ಬೆಣ್ಣೆ ಮಾರುತ್ತಾರೆ ಎಂದು. 1971-72 ರಲ್ಲಿ 100 ಟನ್ ಬೆಣ್ಣೆ, 21 ಟನ್ ತುಪ್ಪ, 15 ಟನ್ ಕ್ಯಾಸಿನ್, 150 ಟನ್ ಐಸ್ ಕ್ರೀಂ ಮಿಕ್ಸ್, ಕೊಟ್ಟಿದ್ದೇವೆ. ಅದೇರೀತಿಯಲ್ಲಿ ಹೋಲ್ ಮಿಲ್ಕ್ ಜೊತೆಗೆ ಡಬ್ಬಲ್ ಟೋನ್ ಮಿಲ್ಕ್, ಚಾಕ್ಲೇಟ್ ಮಿಲ್ಕ್ ಸಂಬಂಧಪಟ್ಟ ಐಸ್ ಕ್ರೀಂ ಮಿಲ್ಕ್, ಚಾಯ್ಸ್ ಐಸ್ ಕ್ರೀಂ ಮಾರುತ್ತಿದ್ದೇವೆ. ಬೆಂಗಳೂರಿನ ಜನತೆಯ ಹಾಲಿನ ಕನ್‌ಸ್ಯೂಮರ್ಸ್ 4 ರಲ್ಲಿ ಒಬ್ಬರು ನಮ್ಮ ಡೈರಿ ಹಾಲನ್ನು ಉಪಯೋಗಿಸುತ್ತಿದ್ದಾರೆ. ಇಷ್ಟು ಮಾತ್ರ ಹೇಳಬಲ್ಲೆ. ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ಮಾಡಿರುವ ಡೈರಿ ಖಾಸಗಿ ಹಾಲು ಮಾರುವವರ ಜೊತೆಗೆ ಕಾಂಪಿಟಿಷನ್ ಮಾಡುವುದರಿಂದ ಹಾಲಿನ ಗುಣಮಟ್ಟ ಉತ್ತಮವಾಗಿ ಉತ್ತಮ ದರ್ಜೆ ಹಾಲು ಬೆಂಗಳೂರು ಜನತೆಗೆ ಸಿಕ್ಕುವುದಕ್ಕೆ ಅನುಕೂಲವಾಗಿದೆ. ಡೈರಿಯವರು ಹಾಲು ಮಾರಾಟ ಮಾಡುವ ಕಾಲದಲ್ಲಿ ಸೆಲಿಂಗ್ ಬೂತ್ಸ್ ಇದ್ದಾಗ ಹಾಲು ಮಾರಾಟವಾಗದೆ ಕೊಳೆತು ನಷ್ಟವಾಗುತ್ತಿತ್ತು. ಈಗ ಆ ಸೆಲಿಂಗ್ ಬೂತ್ಸ್‌ನ್ನು ತಪ್ಪಿಸಿ ಕಮೀಷನ್ ಏಜೆಂಟ್ ಅಂತ ನೇಮಕ ಮಾಡಿ ಹಾಲು ಮಾರುತ್ತಾ ಇರುವುದರಿಂದ ಈಗ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಮಾನ್ಯ ಕೃಷ್ಣನ್‌ರವರು ಹೇಳಿದಂತೆ ಒಬ್ಬಿಬ್ಬರು ತಪ್ಪುದಾರಿಗೆ ಹೋಗಿರುವವರು ಇದ್ದಾರೆ. ಆರೀತಿ ಹೋಗಿದ್ದವರಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಬಡವರ ಮಕ್ಕಳಿಗೆ 3 ವರ್ಷದ ಕೆಳಗೆ ಇರುವ ಮಕ್ಕಳಿಗೆ ಸ್ಲಮ್ ಏರಿಯಾಗಳಲ್ಲಿರುವವರಿಗೆ ಬೆಂಗಳೂರು ಹಾಗೂ ಕೆ. ಜಿ. ಎಫ್. ನಲ್ಲಿರುವವರಿಗೆ 7,893 ಲೀಟರ್ಸ್ ಹಾಲನ್ನು ಕೊಡುತ್ತಿದ್ದೇವೆ. ಯೂನಿಸೆಫ್ ಅಗ್ರಿಮೆಂಟ್ ಪ್ರಕಾರ 72380 ಮಕ್ಕಳಿಗೆ ಹಾಲನ್ನು ಕೊಡುತ್ತಿದ್ದೇವೆ.

ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ದೇವೇಗೌಡರು ಕೆಲವು ವಿಚಾರಗಳನ್ನು ನನ್ನ ಖಾತೆ ಬಗ್ಗೆ ಹೇಳಿದ್ದಾರೆ. ಇದರ ಜೊತೆಗೆ ಅನೇಕ ಸದಸ್ಯರು ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಆಸ್ಪತ್ರೆಗಳನ್ನು ಪ್ರಾರಂಭ ಮಾಡಬೇಕು ಮತ್ತು ಅದಕ್ಕೆ ಬೇಕಾದ ಔಷಧಿಗಳನ್ನು ಒದಗಿಸಬೇಕು ಎಂದು ಹೇಳಿದ್ದಾರೆ ಮತ್ತು ಲೇವಣಿ ಬ್ರೀಡ್ ಅಭಿವೃದ್ಧಿ ಮಾಡುವ ವಿಷಯದಲ್ಲಿ ಸಲಹೆ ಕೊಟ್ಟಿದ್ದಾರೆ. ಇನ್ನೂ ಅನೇಕ ಮಾನ್ಯ ಸದಸ್ಯರು ಇನ್ನೂ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ, ಅದರ ಕಡೆಯೂ ಗಮನ ಕೊಡುತ್ತೇನೆ. ಬಿಜಾಪುರ, ಕುಮಟ ಮತ್ತು ಹಾಸನದಲ್ಲಿ ರೂರಲ್ ಡೈರಿ ಸೆಂಟರ್ಸ್ ಪ್ರಾರಂಭ ಮಾಡುತ್ತೇವೆ. ಮತ್ತು ಬಳ್ಳಾರಿ ಮತ್ತು ರಾಯಚೂರು ಕ್ಷೇತ್ರಗಳಲ್ಲಿ ಇನ್ನೂ 2 ಡೈರಿಗಳನ್ನು ಪ್ರಾರಂಭ ಮಾಡಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಈ ವರ್ಷದಲ್ಲಿ ತೀವ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆಧುಕೊಳ್ಳುತ್ತಾರೆ ಎಂದು ಹೇಳುತ್ತೇನೆ. ಇದರ ಜೊತೆಗೆ ರಾಜ್ಯದಲ್ಲಿರುವ ಹೆಸರುಘಟ್ಟದಲ್ಲಿ ಪ್ರಾರಂಭವಾಗಿದ್ದಂಥ ಇಂಡೋ ಡ್ಯಾನಿಷ್ ಅಗ್ರಿಮೆಂಟ್ ಪ್ರಕಾರ ಇನ್ನೂ 2 ಸಬ್ ಸ್ಟೇಷನ್ಸ್ ಕುಡ್ಲಗಿ ಮತ್ತು ಮುನಿರಾಬಾದ್‌ನಲ್ಲಿ ಪ್ರಾರಂಭ ಮಾಡಿದ್ದೇವೆ. 30 ಜೆರ್ಸಿ ಹಸುಗಳನ್ನು ಉಚಿತವಾಗಿ ಕೊಟ್ಟಿದ್ದಾರೆ. ಕುಡ್ಲಗಿಯಲ್ಲಿ ಸ್ಥಳಿವ ರಾಸುಗಳನ್ನು ಕ್ರಾಸ್ ಬ್ರೀಡ್ ಮಾಡಿ ಹುಟ್ಟಿದಂಥ ಕರುಗಳನ್ನು ಹಂಚಬೇಕು ಎಂದು ತೀರ್ಮಾನ ಮಾಡಿದ್ದೇವೆ.

ಇನ್ನು ಶ್ರೀಮಾನ್ ದೇವೇಗೌಡರು ಬೆಂಗಳೂರು ಡೈರಿ ಮೇಲೆ ಮಾಡಿದ ಅಪಾದನೆಗಳ ಬಗ್ಗೆ ಈ ಸಭೆಯ ಮೂಲಕ ಅವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಶ್ರೀಮಾನ್ ದೇವೇಗೌಡರು ಈ ಒಂದು ಸದನದಲ್ಲಿ ಬೆಂಗಳೂರು ಡೈರಿ ನೋಡಿಕೊಳ್ಳತಕ್ಕ ಅಧಿಕಾರಿಯ ಒಂದು ಜವಾಬ್ದಾರಿ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಆದಷ್ಟು ಬೇಗ ಸವಿಸ್ತಾರವಾಗಿ ಸಂಬಂಧಪಟ್ಟ ದಾಖಲೆಗಳನ್ನು ಸಂಬಂಧಪಟ್ಟವರಿಂದ ತರಿಸಿ ನಿನ್ನೆಯಿಂದ ಈವೊತ್ತಿನವರೆಗೂ ಪರಿಶೀಲನೆ ಮಾಡುತ್ತಿದ್ದೇನೆ. ಅವರು ಹೇಳಿದಂಥ ಒಂದು ಜನರಲ್ ಮ್ಯಾನೇಜರ್ ಪೋಸ್ಟ್ ಹಾಗೆಯೇ ಖಾಲಿ ಇಟ್ಟಿದ್ದೇವೆ. ಜನರಲ್ ಮ್ಯಾನೇಜರ್ ಪೋಸ್ಟ್‌ಗೆ ಅರ್ಜಿ ಹಾಕಿದಂಥ ಮಂಚೇಗೌಡರ ಬಗ್ಗೆ ಕಡೆಗಾಣಿಸಿದ್ದೇವೆ ಆತನ ವಿಚಾರದಲ್ಲಿ ಕಾನ್‌ಫಿಡೆನ್ಶಿಯಲ್ ರಿಪೋರ್ಟ್ ಅಡ್ವರ್ಸ್ ಆಗಿ ಬರೆದು ಪಿ.ಎಸ್.ಸಿ. ಯಲ್ಲಿ ಅವನಿಗೆ ಸೌಲಭ್ಯ ದೊರಕದ ಹಾಗೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆತ ಅರ್ಜಿ ಹಾಕಿದ್ದು ಜನರಲ್ ಮ್ಯಾನೇಜರ್ ಪೋಸ್ಟ್‌ಗೆ ಅಲ್ಲ. ಡೈರಿ ಟೆಕ್ನಾಲಜಿಕಲ್ ಪೋಸ್ಟ್‌ಗೆ ಜನರಲ್ ಮ್ಯಾನೇಜರ್ ಪೋಸ್ಟ್ ವೇಕೆಂಟ್ ಆಗಿದೆ. ಯಾರನ್ನೂ ಜನರಲ್ ಮ್ಯಾನೇಜರ್ ಪೋಸ್ಟ್‌ಗೆ ಹಾಕಿಲ್ಲ.

(ಶ್ರೀ ಎನ್. ಚಿಕ್ಕೇಗೌಡ)

ನೋಡುತ್ತಿದ್ದೇವೆ. ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಬೆಂಗಳೂರಿನಲ್ಲಿ ಒಂದು ಕ್ಯಾಟಲ್ ಮಾರ್ಕೆಟ್ ಮಾಡಬೇಕೆಂದು ಪ್ರಯತ್ನಮಾಡಿದ್ದೇವೆ. ಇಂದು ತಳಿ ಹಸು ಒಳ್ಳೆಯದನ್ನು ಆರಿಸಿ ತರಲು ಗೋಪಾಲಕರಿಗೆ ಅನುಕೂಲವಾಗುವಂತೆ ತಜ್ಞ ಪಶು ವೈದ್ಯರ ಸಲಹೆ ದೊರೆಯುವಂತೆ ಮಾಡಲಾಗುವುದು. ಬೆಂಗಳೂರಿನಲ್ಲಿ ಮಾರ್ಕೆಟ್ ಆದರೆ ರೈತರಿಗೆ ಅನುಕೂಲವಾಗುವುದು. ಇದಕ್ಕೆ ನಿವೇಶನ ಪಡೆಯಲು ಕಾರ್ಪೊರೇಷನ್ನಿನೊಂದಿಗೆ ವ್ಯವಹರಿಸುತ್ತಿದ್ದೇವೆ. ಜಾಗ್ರತೆ ಇದನ್ನು ಕಾರ್ಯಗತ ಮಾಡುತ್ತೇವೆ.

ಕ್ಷೀರ ಕ್ಷೇತ್ರ. ಬೆಂಗಳೂರು ಡೈರಿ ಬಗ್ಗೆ ಶ್ರೀ ದೇವೇಗೌಡರು ಮತ್ತಿತರರು ಕೆಲವು ಮಾತುಗಳನ್ನು ಹೇಳಿದ್ದಾರೆ. ಇದರಲ್ಲಿ ನಷ್ಟ ಬಹಳವಾಗಿದೆ ಎಂದು ಹೇಳಿದ್ದಾರೆ. ವಿವರ ಹೇಳುತ್ತೇನೆ. ಪಶುವೈದ್ಯ ಇಲಾಖೆ ಸರಕಾರಿ ಡೈರಿ ಬೆಂಗಳೂರು, ಧಾರವಾಡ, ಭದ್ರಾವತಿ, ಗುಲ್ಬರ್ಗ, ಮಂಗಳೂರು, ಮೈಸೂರು ಮತ್ತು ಕೊಡಗು ಈ ಭಾಗಗಳಲ್ಲಿದೆ. ಇವುಗಳನ್ನು ಪ್ರಾರಂಭ ಮಾಡಿರುವ ತಾರೀಖುಗಳನ್ನು ಹೇಳುತ್ತೇನೆ. ಅವು 10 ಸಾವಿರ ಲೀಟರುಗಳನ್ನು ಸರಬರಾಯಿ ಮಾಡಬೇಕೆಂದೇನು ಗುರಿಯಿತ್ತು ಅದು ಇನ್ನೂ ಎಲ್ಲಾ ಕಡೆ ಮುಟ್ಟಿಲ್ಲ. ಕೆಲವು ಕಡೆ ಕಡಮೆ ಸರಬರಾಯಿ ಆಗುತ್ತಿದೆ. ಎಷ್ಟು ಸರಬರಾಯಿಯಾಗುತ್ತಿದೆಯೆಂಬುದನ್ನು ಹೇಳುತ್ತೇನೆ. ಹುಬ್ಬಳ್ಳಿ—ಧಾರವಾಡದಲ್ಲಿ 15-12-68 ರಲ್ಲಿ ಡೈರಿ ಪ್ರಾರಂಭವಾಯಿತು, ಮೇ 72 ರಿಂದ ದಿನಕ್ಕೆ 10,800 ಲೀಟರು ಸರಬರಾಯಿ ಆಗುತ್ತಿದೆ; ಭದ್ರಾವತಿಯಲ್ಲಿ 21-5-71 ರಲ್ಲಿ ಪ್ರಾರಂಭವಾಗಿ ದಿನಕ್ಕೆ 1,025 ಲೀಟರನ್ನು ಸರಬರಾಯಿ ಮಾಡುತ್ತಿದ್ದಾರೆ. ಬೆಳಗಾಂನಲ್ಲಿ 6-8-71 ರಲ್ಲಿ ಪ್ರಾರಂಭವಾಗಿ 2,965 ಲೀಟರನ್ನು ಸರಬರಾಯಿ ಮಾಡುತ್ತಿದ್ದಾರೆ. ಗುಲ್ಬರ್ಗದಲ್ಲಿ 24-1-71 ರಲ್ಲಿ ಪ್ರಾರಂಭವಾಗಿದೆ, 1,872 ಲೀಟರುಗಳನ್ನು ಸರಬರಾಯಿ ಮಾಡುತ್ತಿದ್ದಾರೆ. ಮಂಗಳೂರಿನಲ್ಲಿ 6-5-71 ರಲ್ಲಿ ಪ್ರಾರಂಭವಾಗಿದೆ, 3544 ಲೀಟರುಗಳನ್ನು ಸರಬರಾಯಿ ಮಾಡುತ್ತಿದ್ದಾರೆ. ಮೈಸೂರಿನಲ್ಲಿ ಈ ವರ್ಷ ಸೆಪ್ಟೆಂಬರಿನಲ್ಲಿ ಪ್ರಾರಂಭವಾಗುವುದು. ಆಗ 1,378 ಲೀಟರ್ ಸರಬರಾಯಿ ಆಗಬಹುದು. ಕೂಡ್ಲಿಗಿಯಲ್ಲಿ ಕೆಪ್ಯಾಸಿಟಿ 2 ಸಾವಿರ ಲೀಟರು, 1,019 ಲೀಟರು ಹಂಚುತ್ತಿದ್ದಾರೆ. ಕೆಲವು ಚೆನ್ನಾಗಿ ಕೆಲಸ ಮಾಡುತ್ತಿವೆ. ಕೆಲವು ಕಡೆ ವೆಂಡರುಗಳು ಖಾಸಗಿಯಾಗಿ ಅನೂಚಾನವಾಗಿ ಒಂದು ರೀತಿಯಲ್ಲಿ ಹಾಲನ್ನು ಸರಬರಾಯಿ ಮಾಡುತ್ತಿದ್ದಾರೆ. ಅಂಥ ಕಡೆಗಳಲ್ಲಿ ಡೈರಿ ತೆರೆದು ಸಹಕಾರ ಸಂಘಗಳ ಮೂಲಕ ಹಾಲನ್ನು ಒದಗಿಸಿಕೊಳ್ಳಲು ಸ್ವಲ್ಪ ನಿಧಾನವಾಗುವುದು, ಇದಕ್ಕೆ ಕಾಲಾವಕಾಶ ಬೇಕು.

ಇಂದು ಎಷ್ಟು ಹಣ ಕೊಟ್ಟರೂ ಕೂಡ ಒಳ್ಳೆಯ ತಳಿ ಹಸು ಸಿಕ್ಕುವುದು ಕಷ್ಟ. ನಮ್ಮ ರಾಜ್ಯದಲ್ಲಿ ಕೊಂಡು ಮದ್ರಾಸು, ಊಟಿ, ಸೇಲಂ ಜಿಲ್ಲೆಗಳಲ್ಲಿ ಸಾಕುವರು. ಒಂದು ಲೀಟರ್ ಕೊಡುವ ಹಸುವಿಗೆ 250 ರೂಪಾಯಿ ಬೆಲೆಯಾದರೆ 10 ಲೀಟರ್ ಕೊಡುವುದಕ್ಕೆ 2,500 ರೂಪಾಯಿ ಬೆಲೆಯಾಗುವುದು. ಈಗ ಹಣ ಕೊಟ್ಟರೂ ಯೋಗ್ಯವಾದ ಹಸು ಸಿಕ್ಕುವುದಿಲ್ಲ. ಆದುದರಿಂದ ಇದಕ್ಕಾಗಿ ಪ್ರತ್ಯೇಕ ಕೇಂದ್ರವನ್ನು ತೆರೆಯಲಾಗಿದೆ. ಹಳ್ಳಿಗಳಲ್ಲಿ ಸ್ವಲ್ಪ ಹಾಲು ಕೊಡುವ ಹಸುಗಳಿಂದ ಡೈರಿಗೆ ಬೇಕಾದಷ್ಟು ಹಾಲು ದೊರೆಯುವುದಿಲ್ಲ. ಆದುದರಿಂದ ಹೆಚ್ಚು ಹಾಲುಕೊಡುವ ತಳಿಗಳನ್ನು ಕೇಂದ್ರದಿಂದ ಹಂಚಬೇಕೆಂದಿದೆ.

ರೈತರು ಮುಂದೆ ಬಂದು ಅಲ್ಲಿಂದ ಹಸುಗಳನ್ನು ತೆಗೆದುಕೊಂಡು ಹಾಲನ್ನೊದಗಿಸಬೇಕು. ಇದರಿಂದ ಏಕಾಏಕಿ ಲಾಭ ಪಡೆಯುವುದಕ್ಕಾಗುವುದಿಲ್ಲ, ಸ್ವಲ್ಪ ನಷ್ಟವಾಗಲು ಕಾರಣವಿದೆ. ಕೇವಲ ಒಂದು ವರ್ಷದ ಹಿಂದೆ ಪ್ರಾರಂಭವಾಗಿದೆ.

ಸರಕಾರಿ ಡೈರಿ ಬೇರೆ, ಅಮ್ಮಾವರ ಡೈರಿ ಬೇರೆ ಇದೆ ಎಂದು ಒಬ್ಬರು ಹೇಳಿದರು. ಅಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. ಅದು ಎಲ್ಲಿದೆ ಎಂಬುದನ್ನು ಹೇಳಿಲ್ಲ. ಎಲ್ಲಿದೆ ಎಂದು ತಿಳಿಸಿದರೆ ಆ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

12-30 P.M.

ಈವೊತ್ತು ಬೆಂಗಳೂರು ಡೈರಿ ಬಗ್ಗೆ 3—4 ವರ್ಷದ ಅಂಕಿ ಅಂಶಗಳು ನೋಡುವುದಾದರೆ ಬೆಂಗಳೂರು ಡೈರಿಯಲ್ಲಿ 60 ಸಾವಿರ ಲೀಟರ್ಸನ್ನು ಸಹಕಾರ ಸಂಘಗಳವರು ಹಾಗೂ ಖಾಸಗಿಯವರು ಸಪ್ಲೈ ಮಾಡುತ್ತಿದ್ದಾರೆ. ಆ ಹಾಲನ್ನು ಪಾಶ್ಚೀಕರಿಸಿ ಬೆಂಗಳೂರು ಜನತೆಗೆ ಮತ್ತು ಬೃಹತ್ ಕೈಗಾರಿಕೆಗಳಿಗೆ ಹಂಚುತ್ತಿದ್ದಾರೆ. ಕಳೆದ 3 ವರ್ಷದ ಹಿಂದೆ ನೋಡಿದರೆ 20 ಸಾವಿರ

(ಶ್ರೀ ಎನ್. ಚಿಕ್ಕೇಗೌಡ)

ಗುಜರಾತ್‌ನಿಂದ ಶ್ರೀ ಭಾಸ್ಕರ್ ರಾವ್ ಎಂದು ಬಂದಿದ್ದಾರೆ. ಅವರು ಡೈರಿ ಸೂಪರಿಂಟೆಂಡೆಂಟ್ ಅಷ್ಟೆ. ಅವರನ್ನು ಇನ್‌ಛಾರ್ಜ್ ಇಟ್ಟಿದ್ದೇವೆ. ಡೈರಿ ಟೆಕ್ನಾಲಜಿಕಲ್ ಪೋಸ್ಟ್ ಬಗ್ಗೆ ಪಿ.ಎಸ್.ಸಿ. ಅವರು ಒಂದು ಅಡ್ವರ್ಟೈಸ್ ಮಾಡಿದ್ದುದನ್ನು ನೋಡಿದ್ದೇನೆ. ಅವರು ಮಾಡಿದ ಕಾಲದಲ್ಲಿ ಶ್ರೀ ಮಂಚೇಗೌಡರು ಅರ್ಜಿ ಹಾಕಿದ ಕಾಲದಲ್ಲಿ ಸಂಬಂಧಪಟ್ಟ ಡೈರೆಕ್ಟರ್ ಹಾಗೂ ಜನರಲ್ ಮ್ಯಾನೇಜರ್ ಆಗಿದ್ದವರು ಆರ್. ಡಿ. ಪಟೇಲ್ ಅವರು 31-3-1972 ರಲ್ಲಿ ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್‌ಗೆ ಹೋಗಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ಅರ್ಜಿ ಹಾಕಬೇಡಿ ಎಂದು ಮೆಮೋ ಕೊಟ್ಟಿಲ್ಲವೇ?

ಶ್ರೀ ಎನ್. ಚಿಕ್ಕೇಗೌಡ.— ಸಂಬಂಧ ಟ್ಟ ಅಡ್ವರ್ಟೈಸ್‌ಮೆಂಟ್ ಓದಿದ್ದೇನೆ.

The post of General Manager, Bangalore Dairy has not been advertised at any time. The post of Dairy Technologist was advertised by the Mysore Public Service Commission in the Mysore Gazette on 20th May 1971 at Part VII, page 145 of the Mysore State Gazette. For the post of Dairy Technologist they have prescribed the following minumum qualifications for recruitment :

(a) A Master's Degree in Dairy Technology, Food Technology, Chemical Engineering or in any related discipline.

(b) Five Years research or field experience in Dairying, Dairy Food Technology, as evidenced by published work.

ಶ್ರೀ ಮಂಚೇಗೌಡರು ಕೇವಲ 4 ವರ್ಷದಿಂದ ಆ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಎಂ. ಎಸ್. ಸಿ. ಇನ್ ಡೈರಿ ಟೆಕ್ನಾಲಜಿ ಮಾಡಿರುವುದು ನಿಜ. ಆದರೆ ಆ ಹುದ್ದೆಯಲ್ಲಿ ಕೆಲಸ ಮಾಡಿರತಕ್ಕ ಅನುಭವ ಇಲ್ಲ. ಆದ್ದರಿಂದ ಅವರ ಅರ್ಜಿಯನ್ನು ಕಳುಹಿಸುವುದಕ್ಕೆ ಆಗುವುದಿಲ್ಲ ಎಂದು ಮೆಮೋ ಕೊಟ್ಟಿದ್ದಾರೆ. ಆ ಮೆಮೋ ಕೊಟ್ಟನಂತರ ಡೈರಿ ಟೆಕ್ನಾಲಜಿಸ್ಟ್ ಹುದ್ದೆಗೆ ನನ್ನ ಅಪ್ಲಿಕೇಷನ್‌ನ್ನು ಕಳುಹಿಸಿಕೊಡಿ, ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ಏನಾದರೂ ತೀರ್ಮಾನ ತೆಗೆದುಕೊಳ್ಳಲಿ ಎಂದು ಮಂಚೇಗೌಡರು ಹೇಳಿದರು. ಆಮೇಲೆ ಸಂಬಂಧಪಟ್ಟ ಡೈರಿ ಅಧಿಕಾರಿಗಳು ಅಪ್ಲಿಕೇಷನ್ ಕಳುಹಿಸಿಕೊಟ್ಟರು. Three candidates including Sri Manche Gowda had applied for the post. The P.S.C. did not select Sri Manche Gowda or any other candidate who applied for it.

ಶ್ರೀ ಎಚ್. ಡಿ. ದೇವೇಗೌಡ.— ಸಭೆಯನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಬೇಡಿ. ಪೋಸ್ಟ್ ಅಡ್ವರ್ಟೈಸ್ ಮಾಡಿದ್ದು, ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಅರ್ಜಿ ಹಾಕತಕ್ಕದ್ದು ಅಭ್ಯರ್ಥಿಗೆ ಸಂಬಂಧಪಟ್ಟ ವಿಷಯ. ಅರ್ಜಿ ಹಾಕಬೇಡಿ ಎಂದು ಮೆಮೋ ಕೊಡುವುದಕ್ಕೆ ಏನು ಅಧಿಕಾರವಿದೆ? ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಮಾಡುವ ನಿಬಂಧನೆಗಳಿಗೆ ಸರಿಯಾಗಿ ಅರ್ಜಿ ಇಲ್ಲದೆ ಇದ್ದರೆ ಅವರು ಅದನ್ನು ರಿಜೆಕ್ಟ್ ಮಾಡುತ್ತಾರೆ.

What made your Director issue a memo not to apply for that post? I want to know that. I do not want any other agrument. There were six pages of confidential report. Is it not? Is it not a fact that the report of the General Manager is an adverse report? ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಅವರನ್ನು ಸೆಲೆಕ್ಟ್ ಮಾಡದೆ ಇರುವುದಕ್ಕೆ ಕಾರಣ ಮತ್ತೊಂದು ಇದೆ. ಕಾನ್‌ಫಿಡೆನ್‌ಷಿಯಲ್ ಮೆಮೊ ಆರು ಪುಟಗಳಷ್ಟು ಬರೆದಿದ್ದಾರೆ. ಯಾವುದಾದರೂ ಅಪಾದನೆಯನ್ನು ಮಾಡುವಾಗ ಜವಾಬ್ದಾರಿಯಿಂದ ಮಾಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ದಿವಸ ಹೇಳಿದರು. ಈ ಬಗ್ಗೆ ತಾವಾಗಲೀ, ಮುಖ್ಯ ಮಂತ್ರಿಗಳಾಗಲೀ ಅಥವಾ ವಿಜಿಲೆನ್ಸ್ ಕಮಿಷನ್‌ನಿಂದಾಗಲೀ ಎನ್‌ಕ್ವೈರಿ ಮಾಡಿಸಿದರೆ ನಾನು ಎವಿಡೆನ್ಸ್ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ತಮ್ಮ ಅಧಿಕಾರಿಗಳು ಮಾಡಿರುವುದನ್ನು ಸಮರ್ಥನೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರಿಗೆ ಒಂದು ವಿಷಯವನ್ನು ಹೇಳುತ್ತೇನೆ, ನನ್ನ ಮುಂದೆ ಇರುವಂತೆ ಸಂಬಂಧಪಟ್ಟ ಫೈಲುಗಳನ್ನು ತರಿಸಿ ನೋಡಿದ್ದರಲ್ಲಿ It is a fact that the report of the General Manager is an adverse report. I never said that he has not given an adverse report. He has given an adverse report.

Sri H. D. DEVE GOWDA.—Will the Government come forward to hold an impartial enquiry ?

ಶ್ರೀ ಎನ್. ಚಿಕ್ಕೇಗೌಡ.—ಈ ಪೋಸ್ಟ್ ಬಗ್ಗೆ ಅರ್ಜಿ ಹಾಕಿದಾಗ ಆಗ ಇದ್ದ ಜನರಲ್ ಮ್ಯಾನೇಜರ್ ಅಡ್ವರ್ಸ್ ರಿಪೋರ್ಟ್ ಬರೆದರು. ಶ್ರೀ ಮಂಚೇಗೌಡ ಎನ್ನುವವರು ಡೈರಿ ಟೆಕ್ನಾಲಜಿಸ್ಟ್ ಹುದ್ದೆಗೆ ಅರ್ಜಿ ಹಾಕುವಾಗ ಅದನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಸಂಬಂಧಪಟ್ಟ ಆಯ್ಕೆ ಸಮಿತಿಗೆ ಕಳುಹಿಸಬೇಕು. ಹಾಗೆ ಕಳುಹಿಸುವಾಗ ನಾಲ್ಕು ವರ್ಷ ಅನುಭವ ಸಾಲದು ಮತ್ತು ನಿನ್ನ ಬಗ್ಗೆ ಅಡ್ವರ್ಸ್ ರಿಪೋರ್ಟ್ ಇದೆ ಎಂದು ತಿಳಿಸಿದರೂ ಸಹ ಅಪ್ಲಿಕೇಷನ್ ಕಳುಹಿಸಿ ಕೊಡಿ ಎಂದು ಹೇಳಿರುವುದು ನಿಜವಾದ ವಿಷಯ.

Sri H. D. DEVE GOWDA.—I want to know whether the Government is prepared to hold an impartial enquiry. I do not want any other argument. If you say there is some force in what I had alleged, are you prepared to hold an impartial enquiry ? I want to know that.

ಶ್ರೀ ಎನ್. ಚಿಕ್ಕೇಗೌಡ.—ಅಧ್ಯಕ್ಷಣಿಯವರೇ, ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ, ನನಗೆ ಹೆಚ್ಚು ಕಾಲಾವಕಾಶವಿರಲಿಲ್ಲ. ಈ ಬಗ್ಗೆ ಇನ್ನೂ ಹೆಚ್ಚಾಗಿ ನೋಡಿ, ಅದರಲ್ಲಿ ಅನ್ಯಾಯವಾಗಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಹಿಂಜರಿಯುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ದೇವೇಗೌಡರು ಬೆಂಗಳೂರು ಡೈರಿಯಿಂದ ಸ್ಕಿಮ್ಡ್ ಮಿಲ್ಕ್ ಪೌಡರ್ ಟೆಂಡರ್ ಕರೆದು ಮಾರಾಟ ಮಾಡಿದ್ದರಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದ್ದಾರೆ. ಮಿಲ್ಕ್ ಪೌಡರನ್ನು ನಮಗೆ ಕಳುಹಿಸಿದವರು ಯೂನಿಸೆಫ್‌ನವರು. ಕಾಲ ಮೀರಿ ಹೋಗಿದ್ದುದರಿಂದ ನಾವು ಯೂನಿಸೆಫ್‌ಗೆ ತಿಳಿಸಿದೆವು.

The UNICEF people have said that it should not be used after a certain period. The Bangalore Dairy received the Skim Milk Powder under the World Food Programme in 1971. This Powder was received at Bangalore Dairy after 2 years from the date of its manufacture. According to the manufacturing conditions, Skim Milk Powder must be used within 14 months. Since this powder was time-barred, the matter was taken up with the World Food Programme authorities. On the advice of the Government of India and the World Food Programme authorities, the Bangalore Dairy decided to auction the Skim Milk Powder for the manufacture of Cattle Feed or Poultry Feed and accordingly, tenders were called for. Sri Milk Supply was not a tenderer in the disposal of this Milk Powder received in 1971. The Bangalore Dairy received four tenders duly sealed. The highest rate offered was Rs. 2.25 per K.G. The hon. member is aware that the only method adopted by the Dairy to dispose of Milk Powder was by calling for tenders and not by auction.

Sri H. D. DEVE GOWDA.—Who is the person that has been selected ?

Sri N. CHIKKE GOWDA.—

1. Sri S. V. Venkatesh,
   Dealer in Oil Seeds Oils,
   Bangalore-2.

(SRI N. CHIKKE GOWDA)

2. Murugesh & Co.,
Oil Merchants, No. 32,
Avenue Road, Bangalore-2.

The rates quoted by them were the same *viz.*, Rs. 2.25 per k.g. These two persons were given at the rate of 5.012 tonnes each. Because their tender rates were equal, they were given the skim milk powder.

The person who, you said had applied, is not at all present. The other two tenderers were :

M/s. Royal Stores,
No. 11, M. G. Road, Bangalore-1.
and
The Empire Stores,
No. 77, Commercial Street, Bangalore-1.

Then there is the allegation that these tenderers misused this milk powder and supplied it to the private dairies and to one of the societies in nekal Taluk.

SRI H. D. DEVE GOWDA.—The Dairy authorities made a complaint to the Corporation Commissioner.

SRI N. CHIKKE GOWDA.—The aggreament was that it should not be used for human consumption and it should be used as poultry feed and cattle feed. It is a fact that the Bangalore Dairy complained to the Corporation authorities about the sub-standard milk supplied by Sri Milk Supply to the consumers.

SRI H. D. DEVE GOWDA.—That means the milk cream powder passed on through the Sri Milk Supplies for human consumption in Bangalore. You agree to that extent that the Bangalore Dairy Authorities have made a complaint to the Corporation Commissioner that such a quality of milk is supplied by Sri Milk Supplies. The proprietor of Sri Milk Supplies is a relative of the then General Manager R. D. Patel.

SRI N. CHIKKE GOWDA.—Regarding the allegation made about Sree Milk Supply, I bring it to your kind notice that the cream we are getting is from Erode and the tender is from different parties. I will give the tender rates also. It is being supplied from M/s. K. C. Ramaswamy and Sri Armugam of Erode and not Sree Milk Supplies. As per information available, at no time has the Sree Milk Supply has supplied Cream to Bangalore Dairy. It is only M/s. K. C. Ramaswamy and Armugam from Erode.

SRI H. D. DEVE GOWDA.—How many tenders were received for cream supply for making butter and whose tender was the least ? During the rule of the Governor, the concerned aggrieved party made a complaint. I am making this allegation with a certain sense of responsibility. That complaint is pending before vegilance commission. Whether there is any idea to couduct an impartial enquiry ?

1	M/s. K. V. Armugam of Erode	Rs. 7·80 per KG
2	M/s. K. C. Ramaswamy of Erode	Rs. 7·80 per KG
3	M/s. Sree Milk Supply, Seshadripuram	Rs. 7·9) per KG
4	M/s. Tulasimani, Erode	Rs. 7·80 per KG

So the lowest tenders were accepted. Cream supply was stopped in November 1971. There was adequate milk supply from February 1972. Sree Milk supply has not made any supply of cream to Bangalore Dairy so far.

Regarding repairs to CANS, I want to bring it to the notice of the Hon'ble Speaker that this person is in no way related to the then General Manager.

SRI H. D. DEVE GOWDA.—I never said he is related to the General Manager. I said he is from Gujarat.

SRI N. CHIKKE GOWDA.—He is a Muslim and it is a fact that he has got a good reputation for repairing.

SRI C. M. ARUMUGAM.—Why do you say he is Muslim ? He only said that he is a man from Gujarat.

SRI N. CHIKKE GOWDA.—He said he is his distant relative.

SRI H. D. DEVE GOWDA.—I never said that he is related to the general Manager. I said that he comes from Gujarat.

SRI N. CHIKKE GOWDA.—It is a fact that he is from Gujarat.

SRI D. DEVARAJ URS.—Supposing he is there for a number of years what are we to do ?

SRI N. CHIKKE GOWDA.—For repairing the CANS the General Manager called for tenders. One tender quoted Rs. 34·75 per can and another quoted Rs. 33·00 per can. The later tender was considered because it was the lowest tender. He had experience of having repaired cans in Gujarat and Maharashtra.

SRI C. M. ARUMUGAM.—It is said here that they have spent about Rs. 65,000 for repairing cans and the work is unsatisfactory.

SRI N. CHIKKE GOWDA.—The work is satisfactry. Cans are being made use of now.

SRI H. D. DEVE GOWDA.—How many new cans were got ? Rs. 60,000 he has swindled !

SRI N. CHIKKE GOWDA.—I will verify these facts. If the Hon'ble House wants further information, I am ready to furnish.

SRI H. D. DEVE GOWDA.—I only want that a proper impartial enquiry on this should be made and the culprits should be suitably punished.

SRI D. DEVARAJ URS.—If the Hon'ble Leader of the Opposition thinks that there may be misuse of funds with a view to help X or Y that requires further probe, we will do it and bring it to the notice of the House. We will get it further checked and find out whether this

(SRI D. DEVARAJ URS)

expenditure incurred on repairs to Cans was infructuous or was not necessary. Let the Hon'ble Minister go into the question and see whether it was done with a view to help X or Y or whether it was an act of favouritism. We will look into that and if there is any suspicion or doubts about the *bona fides* of the transaction, it will be further looked into and proper action taken. If it is *bona fide* that also we will tell you.

SRI H. D. DEVE GOWDA.—There is already a written allegation that all necessary documents and photostat copies of evidence which is pending before the Vigilance Commissioner. You may request the Vigilance Commissioner to see that the enquiry is expedited and a report furnished early.

SRI D. DEVARAJ URS.—Madam Speaker, I may assure the House that we are not interested in shielding or covering or safeguarding anybody if he has committed an error or if anything is done maliciously. The case is already before the Vigilance Commission. You know the Vigilance Commissioner is impartial and he cannot be influenced by anybody. We are not interested in influencing anybody. Let it be looked into. I will request the Vigilance Commission to expedite the matter. Whatever report comes from the Vigilance Commission, we will take action accordingly.

1-00 P.M.

SRI C. M. ARUMUGHAM.—Madam, the Director of Animal Husbandry is a highly qualified and experienced person and such persons should be put in charge of the Dairy. What can an I.A S. Officer do in a Dairy ? What experience will he have about the working of Dairies ? The Government must put proper persons in proper places. Instead of posting an I.A.S. Officer to the Bangalore Dairy, I think the Director of Animal Husbandry is the proper person for the Dairy Project.

SRI D. DEVARAJ URS.—I understand the general statement of the Hon. Member that a qualified person who can comprehend the dairy schemes and plans and implement them, should be posted as Director of the Dairy. If the present Director of Animal Hubandry is to be put to the Bangalore Dairy, I have to find another Director for the Department of Animal Husbandry. I have had some experience of the Bangalore Dairy. If the Director of Animal Husbandry is also put in additional charge of the Bangalore Dairy, it becomes difficult for one and the same person to handle two Departments. The Bangalore Dairy requires an exclusive Officer. The general proposition as to why we should not put a technically qualified and experienced person to the Bangalore Dairy is a matter which we have to really consider. We will have to examine it. ನಿಮಗೆ ಬಂದಿರುವ ಇನ್‌ಫರ್‌ಮೇಷನ್ ಸರಿಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ನಮಗೆ ಗೊತ್ತಿರುವ ಪ್ರಕಾರ ಯಾವುದೂ ಆ ರೀತಿಯಾಗಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ಮಾಡೋಣ.

ಶ್ರೀ ಎನ್. ಚಿಕ್ಕೇಗೌಡ.—ಹಾಲಿ ಬಂದಿರತಕ್ಕವರು ಗುಜರಾತಿನಿಂದ ಬಂದಿದ್ದಾರೆ. He is an S.S.L.C. Also he has got a dairy diploma. At present, the General Manager's Post is vacant and we have not posted any one as General Manager. The Dairy Superintendent, to whom a reference was made by the Leader of Opposition, was drawing Rs 870 per month. He has been posted as Dairy Superintendent and he is also in charge of the responsibilities of the General Manager. It is not true that he was formerly drawing Rs. 250.

SRI H. D. DEVE GOWDA.—But he had applied to the post of Supervisor carrying a pay of Rs. 250.

ಶ್ರೀ ಎನ್. ಚಿಕ್ಕೇಗೌಡ.—ಅವರು 870 ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ್ದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ. ಇದರ ಬಗ್ಗೆ ಇನ್ನು ಏನಾದರೂ ವಿಚಾರಣೆ ಮಾಡಬೇಕಾದ ವಿಷಯ ಇದ್ದರೆ ವಿಚಾರ ಮಾಡುತ್ತೇನೆ. ಮಾನ್ಯ ರಾಮಸ್ವಾಮಿಯವರು ಹೇಳಿದಂಥ ವಿಷಯ ಸತ್ಯಕ್ಕೆ ದೂರವಾದ ವಿಚಾರ. ಹೈಕೋರ್ಟಿನಲ್ಲಿ ತೀರ್ಮಾನವಾಗಿಲ್ಲ. ಹೈಕೋರ್ಟಿನಲ್ಲಿ ಸೀನಿಯಾರಿಟಿ ಬಗ್ಗೆ ಪರಿಶೀಲಿಸಬೇಕು ಎಂದು ಹೇಳಿದ್ದಾರೆ ಸರ್ಕಾರ ಸುಪ್ರೀಂ ಕೋರ್ಟಿನ ಮುಂದೆ ಹೋಗಿದ್ದಾರೆ. ಅದು ಸುಪ್ರೀಮ್ ಕೋರ್ಟಿನ ಮುಂದೆ ಇರುವುದರಿಂದ ಅದರ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಯಾರಿಗೂ ಅನ್ಯಾಯವಾಗಿಲ್ಲ. ಅನ್ಯಾಯವಾಗಿರುವುದು ಇದ್ದರೆ ಕೋರ್ಟಿನವರ ಮುಂದೆ ಇದೆ. ಅವರು ವಿಚಾರ ಮಾಡುತ್ತಾರೆ. ಮಾನ್ಯ ಸದಸ್ಯರು ಅನೇಕ ವಿಷಯಗಳ ಬಗ್ಗೆ ಸೂಕ್ತ ಸಲಹೆ ಕೊಟ್ಟಿದ್ದಾರೆ, ಇದರ ಬಗ್ಗೆ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳುತ್ತಾ ಪಶುಪಾಲನೆ ಮತ್ತು ಪಶು ವೈದ್ಯಕೀಯ ಬೇಡಿಕೆಗೆ ಮಾನ್ಯ ಸದಸ್ಯರು ಸರ್ವಾನುಮತದಿಂದ ಮಂಜೂರಾತಿಯನ್ನು ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

(Some Hon. Members stood up)

MADAM SPEAKER.—Let me explain to the members the time taken on Demands by the Congress and Opposition Members :

29th June		6 Opposition Members spoke and took 1.57 hours 2 Congress Members spoke and took 0.52 hours
30th June and 1st July	On Education Deamand	15 Opposion Members spoke and took 3.32 hours 16 Congress Members spoke and took 3.03 hours
3rd and 4th July	On Chief Minister's Demands	15 Opposition Members spoke and took 4.46 hours 15 Congress Members spoke and took 3.26 hours
5th July	Demand of Minister for Co-operation	7 Opposition Members spoke and took 1.18 hours 6 Congress members spoke and took 1.12 hours
6th and 7th July	Public Works Demand	16 Opposition Members spoke and took 5·0 hours 18 Congress Members spoke and took 3.10 hours
8th July	Demands of Minister for Revenue	5 Opposition Members spoke and took 1.43 hours 7 Congress Members spoke and took 1.36 hours

(MADAM SPEAKER)

10th July	Labour Demand	7 Opposition Members spoke and took 2.25 hours 4 Congress Members spoke and took 0.58 hours
11th July	Medical and Public Health Demand	10 Opposition members spoke and took 2.28 hours 12 Congress Members spoke and took 2.11 hours
12th July	Agriculture, Forests and Animal Husbandary Demands.	11 Opposition Members spoke and took 3.05 hours 15 Congress Members spoke and took 2.39 hours

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಶ್ರೀಮಾನ್ ಹನುಮೇಗೌಡರು ನಾವು ಇಲ್ಲಿಗೆ ಏತಕ್ಕೆ ಬರಬೇಕಾಗಿತ್ತು ಎಂದು ಪ್ರಶ್ನೆ ಮಾಡಿದರು. ಮಾನ್ಯ ಸದಸ್ಯರೇ ಮಾತನಾಡಿದರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದು ಬೇಡವೇ? ಈಗ ಮೂರು ಗಂಟೆಗೆ ಸಭೆ ಸೇರಬೇಕೆಂದು ಗೊತ್ತಾಗಿತ್ತು. ಅಗ್ರಿಕಲ್ಚರ್ ಮಂತ್ರಿಗಳು 2 ಗಂಟೆ ಉತ್ತರ ಕೊಟ್ಟಮೇಲೆ, ಎಲ್ಲರೂ ಕ್ಲಾರಿಫಿಕೇಷನ್ ಕೇಳಬೇಕೆಂದು ನಿಂತುಕೊಂಡರೆ ಹೇಗೆ? ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಡಿಸೈಡ್ ಮಾಡಿದಂತೆ ನಾನು ಈ ಸಭೆಯನ್ನು ನಡೆಸಬೇಕಾಗುತ್ತದೆ. 216 ಜನ ಸದಸ್ಯರೂ ಇಚ್ಛೆ ಬಂದಹಾಗೆ ಮಾತನಾಡಲು ಎದ್ದರೆ ಸಭೆ ನಡೆಸುವುದಕ್ಕೆ ಆಗುವುದಿಲ್ಲ. ದಯಮಾಡಿ ಪಾರ್ಟಿ ಲೀಡರ್ಸ್ ಮತ್ತು ವಿಪ್ಸ್ ಜೊತೆಗೆ ಮಾತನಾಡಿಕೊಂಡು ಇಲ್ಲಿ ಮಾತನಾಡಬೇಕು. ಈಗ ಫಿಷರೀಸ್ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಕೆ. ಟಿ. ರಾಥೋಡ್.—(ಮೀನುಗಾರಿಕೆ ಇಲಾಖೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಖಾತೆಯ ಬೇಡಿಕೆಗಳ ಮೇಲೆ ಮಾತನಾಡಿದ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರು ಮಾಡಿರುವ ಸಲಹೆಗಳನ್ನು ಕೇಳಿದಮೇಲೆ ನನಗೆ ಎರಡು ವಿಚಾರಗಳು ಸ್ಪಷ್ಟವಾಗಿ ಕಂಡುಬಂದವು. ನನ್ನ ಖಾತೆಯ ಬಗ್ಗೆ ಯಾವ ಆರೋಪಗಳೂ ಸಾಮಾನ್ಯವಾಗಿ ಇರಲಿಲ್ಲ. ಎರಡನೇದು ನನ್ನ ಬೇಡಿಕೆಗಳ ಬಗ್ಗೆ ಯಾವ 'ಕಟ್ ಮೋಷನ್'ಗಳೂ' ಸಹ ಇರಲಿಲ್ಲ. ಇದರಿಂದಾಗಿ ಮಾನ್ಯ ಸದಸ್ಯರು ಈ ಖಾತೆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆಂದು ನಾನು ತಿಳಿದುಕೊಳ್ಳುತ್ತೇನೆ.

ಶ್ರೀ ಭಾಸ್ಕರಶೆಟ್ಟಿಯವರು ಇಲ್ಲಿ ಒಂದು ಸವಾಲು ಮಾಡಿದರು. "ಈ ಖಾತೆಯ ಬೇಡಿಕೆ ಮಂಡಿಸಿದ್ದುದನ್ನು ಈ ಸದನದ ಮಾನ್ಯ ಸದಸ್ಯರಿಗೆ ತಿಳಿಸಿಲ್ಲ, ಮತ್ತು ಮೀನುಗಾರಿಕೆಯ ಮಂತ್ರಿಗಳೂ ಅದನ್ನು ಮಂಡಿಸಲಿಲ್ಲ. ಇದನ್ನು ನೋಡಿದರೆ ಈ ಖಾತೆಯನ್ನು ಇಷ್ಟೊಂದು ಕಡೆಗಣಿಸಿದುದರ ಕಾರಣವೇನು ಎನ್ನುವುದು ತಿಳಿಯಲಿಲ್ಲ" ಎಂದು ಹೇಳಿದರು. ಈ ಖಾತೆ ತುಂಬ ಮಹತ್ವದ ಖಾತೆಯಾಗಿದೆಯೆಂದೇ ನನ್ನ ಭಾವನೆ. ಕರಾವಳಿಯಲ್ಲಿರುವ ಎರಡು ಮುಖ್ಯ ಜಿಲ್ಲೆಗಳಲ್ಲಿ ಇದೊಂದು ಮುಖ್ಯ ಉದ್ದಿಮೆಯಾಗಿ ಮೀನುಗಾರಿಕೆಯ ಕೆಲಸಗಳು ನಡೆಯುತ್ತಿವೆ. ಈ ಖಾತೆ ನನ್ನ ಕೈಗೆ ಬಂದಾಗ ನನಗೂ ಹೀಗೆಯೇ ಭಾಸವಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ನನಗೆ ಈ ಖಾತೆಯನ್ನು ವಹಿಸಿದಾಗ, ಅವರು ಇದು ಅಷ್ಟು ಸಣ್ಣ ಖಾತೆಯೆಂದು ತಿಳಿಯಬಾರದು, ಅಭಿವೃದ್ಧಿಗೆ ತುಂಬಾ ಅವಕಾಶವಿದೆ, ಕೆಲಸ ಮಾಡುತ್ತಾ ಹೋದಹಾಗೆಲ್ಲಾ ಇದರ ಮಹತ್ವ ಗೊತ್ತಾಗುತ್ತದೆ ಎಂದೂ ಹೇಳಿದ್ದರು. ಅದನ್ನು ಗಮನದಲ್ಲಿಟ್ಟುಕೊಂಡು ನಾನು ಈ ಖಾತೆಯ ಪೂರ್ಣ ಅಭ್ಯಾಸವನ್ನು ಕಳೆದ ಮೂರು ತಿಂಗಳಿಂದಲೂ ಮಾಡುತ್ತಾ ಬಂದಿದ್ದೇನೆ. ಮೈಸೂರು ರಾಜ್ಯದಲ್ಲಿ ಇದು ಒಂದು ಅತಿ ಮಹತ್ವವಾದ ಉದ್ದಿಮೆಯಾಗಿದೆ., ಈ ಬಗ್ಗೆ ಕೆಲವಾರು ವಿಚಾರಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಮೈಸೂರು ರಾಜ್ಯದಲ್ಲಿ 200 ಮೈಲಿ ಕರಾವಳಿ ಪ್ರದೇಶವಿದೆ. ಇದರ ಜೊತೆಗೆ ಸುಮಾರು ಹತ್ತು ಲಕ್ಷ ಎಕರೆಗಳಷ್ಟು ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ನೀರು ಸರಬರಾಜು ಇದೆ. ಇದರಲ್ಲಿ ಆರು ಲಕ್ಷ ಎಕರೆಗಳಷ್ಟು ಭಾಗದಲ್ಲಿ ಮೀನು ಅಭಿವೃದ್ಧಿ ಮಾಡುವ ಕಾರ್ಯ ನಡೆದಿದೆ. ನಮ್ಮ ರಾಜ್ಯದಲ್ಲಿ ಮೀನುಗಾರಿಕೆ ಸಂಪತ್ತಿನ ಅಭಿವೃದ್ಧಿಗೆ ಒಳ್ಳೇ ಅವಕಾಶವಿದೆ. ಎಂದು ನಾನು ಹೇಳಬಯಸುತ್ತೇನೆ.

ಈ ಇಲಾಖೆಯನ್ನು ಪ್ರಾರಂಭಿಸಿದ್ದು 1957 ರಲ್ಲಿ, ಎಂದರೆ, ಸುಮಾರು ಹದಿನೈದು ವರ್ಷಗಳಾದವು. ಈ ಹದಿನೈದು ವರ್ಷದಲ್ಲಿ ಸಾಕಷ್ಟು ಪ್ರಗತಿಯನ್ನೂ ಸಾಧಿಸಲಾಗಿದೆ. ಕರಾವಳಿಯಲ್ಲಿ ಸುಮಾರು 1094 ಯಾಂತ್ರಿಕ ದೋಣಿಗಳನ್ನು ಒದಗಿಸಲಾಗಿದೆ. 1971-72 ರಲ್ಲಿ ಈ ಉದ್ದಿಮೆ ನಮ್ಮ ರಾಜ್ಯಕ್ಕೆ ಸುಮಾರು 2.14 ಕೋಟಿ ರೂಪಾಯಿಗಳ ವಿದೇಶೀ ವಿನಿಮಯವನ್ನು ಗಳಿಸಿ ಕೊಟ್ಟಿದೆ. ಇದರ ಜೊತೆಗೆ 1-1-1971 ರಿಂದ 'ಫಿಷರೀಸ್ ಕಾರ್ಪೊರೇಷನ್' ಒಂದನ್ನೂ ಸ್ಥಾಪನೆ ಮಾಡಲಾಗಿದೆ. ಈ ಕಾರ್ಪೊರೇಷನ ಆಶ್ರಿತ ಕಕ್ಷೆಯಲ್ಲಿ '14 ಐಸ್-ಕಂ ಕೋಲ್ಡ್ ಸ್ಟೋರೇಜು' ಸೆಂಟರುಗಳೂ, ಎಂಟು ಮೀನುಸಾಗಣೆ ವಾಹನಗಳೂ ಹಾಗೂ 57 ಅಡಿ ಉದ್ದದ ಫಿಷ್ ಟ್ರಾಲರುಗಳೂ ಇದ್ದು ಈ ಸಾಧನೆಗಳ ಉಪಯೋಗಪಡೆದು ಸುಮಾರು ಐದು ಲಕ್ಷ ರೂಪಾಯಿ ಬೆಲೆಯ ಮೀನುಗಳನ್ನು ಹಿಡಿದು ರಫ್ತು ಮಾಡಲಾಗಿದೆ. ಇದರ ಜೊತೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದೂ, ಒಟ್ಟು ಎರಡು ಫೆಡರೇಷನ್‌ಗಳನ್ನು ಸಹಕಾರಿ ತತ್ವದಮೇಲೆ ರೂಪಿಸಿ ಮೀನುಗಾರರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಿಕ್ಕಾಗಿ ಸ್ಥಾಪಿಸಲಾಗಿದೆ. ಈ ಸಂಸ್ಥೆಗಳು ಉತ್ಸಾಹಿ ನಾಯಕರ ನೇತೃತ್ವದಲ್ಲಿ ತಮ್ಮ ಗುರಿಸಾಧನೆಯತ್ತ ಬಹಳ ಚೆನ್ನಾಗಿ ಕೆಲಸ ಮಾಡುತ್ತ ಬರುತ್ತಿವೆ. ನಮ್ಮಲ್ಲಿ 19 ಫಿಷರೀಸ್ ಬಂದರುಗಳು ಇವೆ. (ಇದರಲ್ಲಿ ನಾಲ್ಕು ಮೇಜರು ಪೋರ್ಟುಗಳಿವೆ ಎಂದರೆ ಮಂಗಳೂರು, ಕಾರವಾರ) ಮಲ್ಪೆ ಮತ್ತು ಹೊನ್ನಾವರಗಳಲ್ಲಿರುವ ಬಂದರುಗಳನ್ನು ಇಲ್ಲಿ ಅನುಕೂಲತೆಗಳನ್ನು ಪಡೆದ ಮೀನುಗಾರಿಕೆ ಬಂದರುಗಳೆಂದು ಅಭಿವೃದ್ಧಿಪಡಿಸಲು ಯೋಜನೆ ರೂಪಿತವಾಗಿದ್ದು ಕೇಂದ್ರದ ಮಂಜೂರಾತಿ ನಿರೀಕ್ಷಿಸಲಾಗಿದೆ. ಇವು ನಮ್ಮ ಮೀನು ಅಭಿವೃದ್ಧಿಯ ಬಗ್ಗೆ ಬಹಳವಾಗಿ ಸಹಾಯ ಮಾಡುತ್ತೇವೆ. ಇದರ ಜೊತೆಗೆ ಉಳಿದ ಕಡೆಗಳಲ್ಲೂ ಮೀನುಗಳನ್ನು ಇಳಿಸಲು Landing ಮತ್ತು Beything ಅನುಕೂಲಗಳನ್ನು ಒದಗಿಸಲಾಗಿದೆ. ಇವೆನ್ನೆಲ್ಲಾ ನೋಡಿದರೆ ನಮ್ಮ ಖಾತೆ ನಿಜವಾಗಿಯೂ ಬಹಳ ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೆಂದು ಹೇಳಬಹುದು. ನಾನು ಅಧಿಕಾರ ಸ್ವೀಕಾರ ಮಾಡಿದಾಗಿನಿಂದ ಅನೇಕ ಕೆಲಸಕಾರ್ಯಗಳನ್ನೂ ಹಾಗೂ ಅಭಿವೃದ್ಧಿ ಕೆಲಸಗಳನ್ನೂ ತೆಗೆದುಕೊಂಡಿದ್ದೇನೆ. ಈ ಅಧಿವೇಶನ ಮೊದಲು ಜರುಗಿದಾಗ ಕರಾವಳಿ ಪ್ರದೇಶಗಳಾದ ಎರಡೂ ಜಿಲ್ಲೆಯಲ್ಲಿರುವ ಮಾನ್ಯ ವಿಧಾನಸಭಾ ಸದಸ್ಯರುಗಳು ಹಾಗೂ ವಿಧಾನ ಪರಿಷತ್ತಿನಲ್ಲಿರುವ ಸದಸ್ಯರುಗಳನ್ನೂ ಬರಮಾಡಿಕೊಂಡು ಅವರೊಡನೆ ವಿಚಾರ ವಿನಿಮಯ ಮಾಡಿ ಅವರ ಸಲಹೆ ಸೂಚನೆಗಳನ್ನು ಕೇಳಿದೆ. ಅವರು ಅನೇಕ ಉತ್ತಮ ಸಲಹೆಗಳನ್ನು ನನಗೆ ಕೊಟ್ಟರು ನಾನು ಈ ಬಗ್ಗೆ ಟಿಪ್ಪಣಿಗಳನ್ನು ತಯಾರು ಮಾಡಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಕಳುಹಿಸಿದ್ದೇನೆ. ಅವರೂ ಸಹ ಇದರಲ್ಲಿ ಇರುವ ಮುಖ್ಯವಾದ ಎರಡು ಸಮಸ್ಯೆಗಳನ್ನು ಮನಸ್ಸಿಗೆ ತೆಗೆದುಕೊಂಡು ಅವಕ್ಕೆ ಸೂಕ್ತ ಮಾರ್ಗದರ್ಶನವನ್ನು ದೊರಕಿಸಿಕೊಟ್ಟಿದ್ದಾರೆ; ಮುಖ್ಯವಾಗಿ ಮೀನುಗಾರಿಕೆಯಲ್ಲಿ ಕೆಲಸ ಮಾಡುವ ಜನಕ್ಕೆ ಸಾಕಷ್ಟು ವಸತಿ ಸೌಕರ್ಯಗಳಿಲ್ಲ. ಇವರಿಗೆ ಮನೆಗಳ ಸೌಕರ್ಯ ಕಲ್ಪಿಸಿ ಕೊಡಬೇಕೆಂದು ಯತ್ನ ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು 'ಹೌಸಿಂಗ್ ಬೋರ್ಡು' ಮೂಲಕ ಇವರಿಗೆ ಮನೆಗಳನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಸೂಕ್ತವಾದ ಯೋಜನೆಯೊಂದನ್ನು ರೂಪಿಸಲೂ ಸಹ ಆದೇಶ ನೀಡಿದ್ದಾರೆ. ಇದಕ್ಕೆ ಬೇಕಾಗುವ ಹಣವನ್ನೂ ಒದಗಿಸಲೂ ಆಲೋಚಿಸುತ್ತಿದ್ದಾರೆ. ಈ ಬಗ್ಗೆ ಈಗಾಗಲೇ ಸಾಕಷ್ಟು ಪ್ರಯತ್ನಗಳೂ ನಡೆಯುತ್ತಿವೆ. ಮೀನುಗಾರಿಕೆ ಮುಖ್ಯವಾಗಿರುವ ಎರಡು ಕರಾವಳಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಬೇಕೆಂದು ನಾನು ಸುಮಾರು ಎಂಟು ದಿನಗಳ ಪ್ರವಾಸವನ್ನು ಕೈಕೊಂಡು ಇಲ್ಲಿರುವ ಜನರ ಭೇಟಿಮಾಡಿ ಅವರ ಅನೇಕ ಕುಂದುಕೊರತೆಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಂಡು ಅದಕ್ಕೆ ತಕ್ಕ ಪರಿಣಾಮವನ್ನು ದೊರಕಿಸಿಕೊಡಲು ಕೆಲಸ ಮಾಡುತ್ತಿದ್ದೇನೆ. ಇಲ್ಲಿನ ಜನರಿಗೆ ಇದ್ದ ಅಡಚಣೆಗಳೇನು ಎನ್ನುವುದನ್ನು ಲಕ್ಷಕ್ಕೆ ತೆಗೆದುಕೊಂಡು ಅದಕ್ಕೆ ಸೂಕ್ತ ಪರಿಹಾರಗಳನ್ನು ದೊರಕಿಸಿಕೊಡಲು ಈಗಾಗಲೇ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇನೆ. ಇಲ್ಲಿರುವ ಸಮಸ್ಯೆಗಳೇನು ಎನ್ನುವುದು ಸರಕಾರಕ್ಕೆ ಗೊತ್ತಾಗಿದೆ. ಇಲ್ಲಿರುವ ಎಲ್ಲ ಜನರ ಸಹಾಯ ಸೌಕರ್ಯಗಳನ್ನು ಪಡೆದು ಇಲ್ಲಿನ ಮೀನುಗಾರಿಕೆಯಲ್ಲಿ ತೊಡಗಿರುವವರಿಗೆ ಅನುಕೂಲವಾಗುವ ಅಭಿವೃದ್ಧಿಕಾರ್ಯಗಳನ್ನು ಮಾಡುವತ್ತ ಸಾಕಷ್ಟು ಪ್ರಗತಿಯನ್ನುಸಾಧಿಲಾಗಿದೆ. ಈ ರೀತಿಯಾಗಿ ನಮ್ಮ ಮೀನುಗಾರಿಕೆ ಅಭಿವೃದ್ಧಿ ತ್ವರಿತವಾಗಿ ಬಹಳ ಸಮಾಧಾನಕರವಾದ ಕೆಲಸಕಾರ್ಯಗಳನ್ನು ಮಾಡುತ್ತಿದೆ ಎಂದು ತಮ್ಮಲ್ಲಿ ಹೇಳಬಯಸುತ್ತೇನೆ. ನಮ್ಮ ಅನೇಕ ಮಾನ್ಯ ಸದಸ್ಯರು ತಮ್ಮ ಉತ್ತಮ ಸಲಹೆ ಸೂಚನೆಗಳನ್ನು ಈ ಸದನದಲ್ಲಿ ಈಗ ಹೇಳಿದ್ದಾರೆ. ಪ್ರಥಮವಾಗಿ, ಹಾಸನದ ಮಾನ್ಯ ಸದಸ್ಯ ಶ್ರೀ ಹನುಮೇಗೌಡರು ಒಂದು ಸಲಹೆ ಕೊಟ್ಟರು. ಕೆರೆಗಳಲ್ಲಿ ಮೀನುಗಳನ್ನು ಬೆಳೆಸಲು ಸಾಕಾದಷ್ಟು ಮೀನು ಮರಿಗಳು ಸಿಕ್ಕುತ್ತಿಲ್ಲ ಎಂದೂ ಮತ್ತು ಇದನ್ನು ಪೂರೈಕೆ ಮಾಡಬೇಕೆಂದೂ ಹೇಳಿದರು. ಎಲ್ಲ ಕಡೆಗಳಿಗೂ ಸಾಕಷ್ಟು ಮೀನುಮರಿಗಳನ್ನು ಪೂರೈಕೆ ಮಾಡಲು ಆಗುತ್ತಿಲ್ಲ ಎಂದು ತಿಳಿಧು

(ಶ್ರೀ ಕೆ. ಟಿ. ರಾಥೋಡ್)

ಬಂದಮೇಲೆ, ಈ ಕೊರತೆ ನಿವಾರಿಸುವ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಮೀನು ಮರಿಗಳಿಗೆ ಇರುವ ಬೇಡಿಕೆಯನ್ನು ಪೂರ್ತಿಯಾಗಿ ನಿರ್ವಹಿಸಬೇಕಾದರೆ ನಮ್ಮ ರಾಜ್ಯಕ್ಕೆ ಸುಮಾರು ಇಪ್ಪತ್ತು ಕೋಟಿಗಳಷ್ಟು ಮೀನುಮರಿಗಳು ಬೇಕಾಗುತ್ತವೆ. ಇದಕ್ಕಾಗಿ ಒಂದು 'ಫೇಜ್ಡ್-ಪ್ರೋಗ್ರಾಮ್' ಹಾಕಿಕೊಂಡು ಈ ಕೊರತೆಯನ್ನು ತುಂಬಬೇಕು ಎಂದು ಪ್ರಯತ್ನ ಮಾಡುವುದರಲ್ಲಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ನರ್ಸರಿಯನ್ನು ಪ್ರಾರಂಭ ಮಾಡಿ ಅಲ್ಲಲ್ಲಿ ಫಿಷ್ ಫಾರ್ಮುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಅವಶ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಪಿ.ಡಬ್ಲ್ಯು.ಡಿ. ಇಲಾಖೆಯ ಮೂಲಕ ನೀರಿನ ಸೌಕರ್ಯ ಇರುವ ಕಡೆಗಳಲ್ಲೆಲ್ಲಾ ಇದಕ್ಕೆ ಬೇಕಾಗುವ ಕೆಲಸಕಾರ್ಯಗಳನ್ನು ತಕ್ಕೊಳ್ಳಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ. ಇನ್ನು ಒಂದು ವರ್ಷದಲ್ಲಿ ಈ ದಿಶೆಯಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಮುಗಿಸಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ.

ಇನ್ನು ಮಾನ್ಯ ಶ್ರೀ ದಾಮೋದರ ಮುಲ್ಕೀಯವರು ಕೆಲವು ಸಲಹೆಗಳನ್ನು ಕೊಟ್ಟರು. ಅವರು 'ಫಿಷರೀಸ್ ಕಾರ್ಪೊರೇಷನ್ನಿಗೆ' ಚೇರ್ಮನ್ನರನ್ನು ನೇಮಕ ಮಾಡಿರುವುದರ ಬಗ್ಗೆ ಪ್ರಸ್ತಾಪಿಸಿದರು. ಕರಾವಳಿ ಭಾಗದ ಮೀನುಗಾರಿಕೆಯಲ್ಲಿ ತಜ್ಞರಾದವರು ಒಬ್ಬರು ಇದರ ಚೇರ್ಮನ್ನರಾಗಿದ್ದರೆ ಇಲ್ಲಿನ ಕೆಲಸಕಾರ್ಯಗಳಿಗೆ ಸರಿಹೋಗುತ್ತಿತ್ತು ಎನ್ನುವ ಅಭಿಪ್ರಾಯವನ್ನು ಸೂಚಿಸಿದರು. ಈಗ ನೇಮಕವಾಗಿರುವವರು ಅಷ್ಟು ತಜ್ಞರಲ್ಲ ಎನ್ನುವ ಅಭಿಪ್ರಾಯ ವ್ಯಕ್ತ ಮಾಡಿದರು. ನಾನು ಅವರಿಗೆ ಹೇಳಬಯಸುತ್ತೇನೆ. ಈಗ ಇರುವ ಚೇರ್ಮನ್ನರವರೂ ಬಹಳ ದಕ್ಷತೆಯಿಂದ ಕೆಲಸ ಮಾಡಬಲ್ಲರು ಮತ್ತು ಅವರು ಬಂದು ಕೇವಲ ಹದಿನೈದು ದಿನಗಳಾದವು. ಇನ್ನು ಕೆಲವು ಕಾಲ ನಾವು ನೋಡಿದರೆ ಅವರು ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಾರೆ ಎನ್ನುವುದು ನಮಗೆಲ್ಲಾ ಗೊತ್ತಾಗುತ್ತದೆ. ಅವರು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೆಲಸ ಕಾರ್ಯಗಳನ್ನು ಮಾಡಿ ಪ್ರಗತಿ ಸಾಧಿಸಲಿಕ್ಕೆ ಅವಕಾಶವಾಗುತ್ತದೆ ಎಂಬ ಸದಿಚ್ಛೆಯಿಂದ ಅವರನ್ನು ನೇಮಕ ಮಾಡಲಾಗಿದೆ. ಮುಲ್ಕಿಯಲ್ಲಿರುವ 'ಐಸ್ ಪ್ಲಾಂಟನ್ನು' ಸುಧಾರಿಸಿ ಇಂಪ್ರೂವ್ ಮಾಡಿ ಇದಕ್ಕೆ ಒಂದು 'ಫ್ರೀಜಿಂಗ್ ಪ್ಲಾಂಟನ್ನು' ಸೇರಿಸಬೇಕೆಂದೂ ಸಹಾ ಶ್ರೀ ಮುಲ್ಕಿಯವರು ಹೇಳಿದರು. ಇದನ್ನು ಪರಿಶೀಲನೆ ಆದಷ್ಟು ಜಾಗ್ರತೆ ದೊರಕಿಸಿ ಕೊಡಲು ಪ್ರಯತ್ನ ಮಾಡುತ್ತೇನೆ, ಎಂದು ಇಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯೆಯರಾದ ಶ್ರೀಮತಿ ಮನೋರಮ ಮಧ್ವರಾಜ್‌ರವರೂ ಕೆಲವು ಸಲಹೆಗಳನ್ನು ಹಾಗೂ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಪ್ಲಾನು ಸ್ಕೀಂನ್‌ನಲ್ಲಿ ದುಡ್ಡನ್ನು ಬಹಳ ಕಡಿಮೆ ಕೊಟ್ಟಿದ್ದಾರೆ ಎಂದು ಹೇಳಿದರು. ಕಳೆದ ವರ್ಷ ರೂ. 73 ಲಕ್ಷ ಇತ್ತು, ಈ ವರ್ಷ 66 ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದಾರೆ ಇದಕ್ಕೆ ಕಾರಣವೇನು ಎಂದು ಕೇಳಿದರು. ಇದಕ್ಕೆ ಕಾರಣ ಇದೆ. ನಮ್ಮ 'ಪ್ಲಾನು ಪ್ರಾವಿಷನ್' ನಾಲ್ಕನೇ ಯೋಜನೆಯಲ್ಲಿ ಸುಮಾರು 300 ಲಕ್ಷ ರೂಪಾಯಿ ಇತ್ತು. ಮೊದಲನೆ ಮೂರು ವರ್ಷಗಳಲ್ಲಿ ಪ್ಲಾನ್ ಸ್ಕೀಂಗಳ ವೆಚ್ಚ ಸ್ವಲ್ಪ ಹೆಚ್ಚು ಬಂದುದರಿಂದ, ಈ ವರ್ಷ ಪ್ಲಾನಿಂಗ್ ಕಮಿಷನ್‌ರವರು ಸ್ವಲ್ಪ ಕಡಿತ ಮಾಡಿ, ಸುಮಾರು 66 ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದಾರೆ. ಈ ಬಗ್ಗೆ ಹೆಚ್ಚು ಹಣ ಪಡೆಯಲು ಪ್ರಯತ್ನ ಮಾಡೋಣ. ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ನಮ್ಮ ಇಲಾಖೆಯ ಆದ್ಯತೆಗಳನ್ನೂ ಅವಶ್ಯಕತೆಗಳನ್ನೂ ಒತ್ತಿ ಹೇಳಿ ಇನ್ನೂ ಹೆಚ್ಚು ಹಣವನ್ನು ಒದಗಿಸಿಕೊಡಲು ಪ್ರಯತ್ನಮಾಡಬೇಕೆಂದು ಕೇಳುತ್ತೇವೆ, ಎಂದು ಮಾತ್ರ ಈಗ ಇಲ್ಲಿ ಹೇಳಬಯಸುತ್ತೇನೆ.

ಅದರಂತೆ ಫಿಷ್ ಕ್ಯೂರಿಂಗ್ ಯಾರ್ಡ್ಸ್‌ನ್ನು ರದ್ದುಮಾಡಬೇಕು, ಅದು ಇರುವುದು ಅನಾವಶ್ಯಕ ಎಂಬುದಾಗಿ ಶ್ರೀಮತಿ ಮನೋರಮ ಮಧ್ವರಾಜ್ ಅವರು ತಿಳಿಸಿದ್ದಾರೆ. ರಾಜ್ಯ ಪುನರ್ವಿಂಗಡಣೆಗೆ ಮುಂಚಿತವಾಗಿ ಮದ್ರಾಸ್ ಮತ್ತು ಮುಂಬೈ ಸರ್ಕಾರದವರೇ ಈ ವ್ಯವಸ್ಥೆ ಮಾಡಿದ್ದರು ಅದನ್ನೇ ನಾವೂ ಮುಂದುವರಿಸಿಕೊಂಡು ಬಂದಿದ್ದೇವೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 15, ಈ ಪ್ರಕಾರ ಒಟ್ಟು 30 ಫಿಸ್ ಕ್ಯೂರಿಂಗ್ ಯಾರ್ಡ್‌ಗಳಿವೆ. ಈ ಸೆಂಟರ್‌ಗಳನ್ನು ಈಗ ಫಿಷರ್‌ಮನ್ ಕೋ ಆಪರೇಟಿವ್ ಸೊಸೈಟಿಗಳಿಗೆ ವಹಿಸಬೇಕೆಂದು, ಆ ಬಗ್ಗೆ ವಿಚಾರವಿನಿಮಯ ನಡೆದಿದೆ. ಈ ಸೊಸೈಟಿಗಳ ಮುಖಾಂತರ ಯಾವ ರೀತಿಯಾಗಿ ಈಗ ಕೆಲಸ ಮಾಡುತ್ತಿರುವವರ ಸೇವೆಯನ್ನು ಮಾರ್ಪಾಡು ಮಾಡಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ಸಹ ಸರ್ಕಾರದವರು ಅವರೊಡನೆ ವಿಚಾರ ಮಾಡುತ್ತಿದ್ದಾರೆ. ಈ ಸಿಬ್ಬಂದಿಯ ಸೇವೆ ನಮಗೆ ಬಹಳ ಅವಶ್ಯಕವಿದೆ: ಏಕೆಂದರೆ "the yard staff in addition to the issue of salt for

fish curing, are collecting statistics of marine fish landed in their jurisdiction. ಮತ್ತು A proposal to convert these yards into improved fish handling and processing centres is also under consideration." ಇದೇ ಮಾನ್ಯ ಸದಸ್ಯರು ಮತ್ತೊಂದು ಸೂಚನೆಯನ್ನು ಮಾಡಿದ್ದಾರೆ. ಫಿಷರೀಸ್ ಸ್ಕೂಲ್‌ಗಳನ್ನು ವಿದ್ಯಾ ಇಲಾಖೆಗೆ ವಹಿಸಿಕೊಟ್ಟು, ಅದರಿಂದ ಉಳಿತಾಯವಾಗುವ ಸುಮಾರು 15 ಲಕ್ಷ ರೂಪಾಯಿಗಳನ್ನು ಈ ಇಲಾಖೆಯ ಇನ್ನಿತರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬಹುದು ಎಂದು. ನಿಜವಾಗಿ ಹೇಳಬೇಕೆಂದರೆ ನಮ್ಮ ಮೀನುಗಾರರು ಬಹಳ ಹಿಂದುಳಿದ ವರ್ಗದವರು. ಅವರ ಪರಿಸ್ಥಿತಿ ಬಹಳ ಚಿಂತಾಜನಕದ್ದಾಗಿದೆ. ನಾನು ಪ್ರವಾಸ ಹೋದಾಗ ಅವರ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದ್ದೇನೆ. ಈ ಜನರು ನಿಜವಾಗಿಯೂ ಶಿಕ್ಷಣವನ್ನು ಪಡೆಯಲು ಸಾಮಾನ್ಯವಾಗಿ ತಾವೇ ಮುಂದೆ ಬರುವವರಲ್ಲ. ಶಿಕ್ಷಣ ಎಂದರೆ ಹಿಂದಿರುವವರು, ಇವರಿಗೆ ಶಿಕ್ಷಣದ ಅಭಿಮಾನವನ್ನು ದೊರಕಿಸಿಕೊಡುವ ಸಲುವಾಗಿಯೂ ಮತ್ತು ಅವರ ಮಕ್ಕಳನ್ನು ಶಾಲೆಗೆ ಕಳಿಸಿಕೊಡುವಂತೆ ಅನುಕೂಲ ಮಾಡಲು ಅವರ 'ಲೊಕ್ಯಾಲಿಟಿ'ಯೊಳಗೇ ಫಿಷರೀಸ್ ಸ್ಕೂಲ್‌ಗಳನ್ನು ತೆರೆಯಲಾಗಿದೆ. ಈ ಶಾಲೆಗಳನ್ನು ಇನ್ನು ಮೇಲೆ ಶಿಕ್ಷಣಖಾತೆಗೆ ವಹಿಸಿಕೊಡಬೇಕೋ ಅಥವಾ ನಾವೇ ಉಳಿಸಿಕೊಳ್ಳಬೇಕೋ ಎಂಬ ಬಗ್ಗೆ ರಾಜ್ಯಮಟ್ಟದ 'ಅಡ್ವೈಸರಿ ಕಮಿಟಿಯಲ್ಲಿ' ಈಗಾಗಲೇ ವಿಚಾರ ಮಾಡಿದ್ದೇವೆ. ಈ ಬಗ್ಗೆ ಎರಡು ತರಹದ ಅಭಿಪ್ರಾಯಗಳು ಬಂದಿವೆ. ಉತ್ತರಕನ್ನಡ ಜಿಲ್ಲೆಯವರು ವಿದ್ಯಾ ಇಲಾಖೆಗೆ ವರ್ಗ ಮಾಡೋಣ ಎಂದು ಹೇಳುತ್ತಾರೆ. ಆದರೆ ದಕ್ಷಿಣಕನ್ನಡ ಜಿಲ್ಲೆಯವರು ನಮ್ಮ ಇಲಾಖೆಯವರ ಆಡಳಿತದಲ್ಲಿಯೇ ಇರಬೇಕು ಎಂದು ಹೇಳುತ್ತಾರೆ. ಆದರೂ ಈ ವಿಷಯವನ್ನು ಪೂರ್ತಿಯಾಗಿ ಪರಿಶೀಲಿಸುವ ಉದ್ದೇಶದಿಂದ 5 ಜನ ಸದಸ್ಯರಿರುವ ಒಂದು ಉಪಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯಲ್ಲಿ ಈ ಕೆಳಗಿನವರು ಸದಸ್ಯರು ಇದ್ದಾರೆ:

1. Secretary to Government, Social Welfare Department.
2. Director of Public Instruction.
3. Director of Fisheries.
4 Sri S. K. Amin.
5. Sri P. M. Tandel.

ಈ ಕಮಿಟಿಯವರ ವರದಿ ಬಂದಮೇಲೆ ಅದನ್ನು ಸರ್ಕಾರದವರು ವಿಚಾರಮಾಡಿ ನೋಡಿ ಎಲ್ಲರೂ ಇಷ್ಟಪಟ್ಟರೆ ಈ ಶಾಲೆಗಳನ್ನು ಶಿಕ್ಷಣ ಇಲಾಖೆಗೇ ವರ್ಗಮಾಡಲು ಯೋಚನೆ ಮಾಡುತ್ತೇವೆ.

ಯಾಂತ್ರಿಕ ಮೀನುಗಾರಿಕೆಯಲ್ಲಿ ತರಬೇತು ಕೊಟ್ಟ ಮೀನುಗಾರರ ಯುವಕರಿಗೆ ಯಾಂತ್ರಿಕ ದೋಣಿಗಳನ್ನು ಒದಗಿಸದಿದ್ದರೆ ಅವರಲ್ಲಿಯೂ ನಿರುದ್ಯೋಗದ ಸಮಸ್ಯೆ ಉಂಟಾಗುತ್ತದೆ ಎಂಬುದಾಗಿ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಹೇಳಿದ್ದಾರೆ. ಈ ವಿಷಯ ಕುರಿತು ನಾವು ಈಗಾಗಲೇ ಪರಿಶೀಲಿಸುತ್ತಿದ್ದೇವೆ. ಟ್ರೈನಿಂಗ್ ಆದವರಿಗೆಲ್ಲಾ ಹೆಚ್ಚು ಪ್ರಮಾಣದಲ್ಲಿ ದೋಣಿಗಳು ಸಿಕ್ಕುವ ಹಾಗೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಅವರಿಗೆ ತಿಳಿಸುತ್ತೇನೆ. ಈಗಾಗಲೇ 340 ಯಾಂತ್ರಿಕ ದೋಣಿಗಳ ಪೂರೈಕೆ ಮಾಡಿದ್ದೇವೆ. ಈ ವರ್ಷ ಮತ್ತೆ 84 ದೋಣಿಗಳನ್ನು ಕೊಡುವುದಕ್ಕೆ ವಿಚಾರ ಮಾಡುತ್ತೇವೆ.

'ಫಿಷರೀಸ್ ರೋಡ್ಸ್' ಬಗ್ಗೆಯೂ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಇದಕ್ಕಾಗಿ ನಾವು ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಆದರೆ ಇಷ್ಟು ಹಣ ಸಾಲುವುದಿಲ್ಲ. ಅಂತೆಯೇ 'ರೂರಲ್ ಕಮ್ಯುನಿಕೇಷನ್ ರೋಡ್ಸ್' ಕೆಳಗೆಯೂ ಕೆಲ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಸಹ ವಿಚಾರ ಮಾಡುತ್ತಿದ್ದೇವೆ. ಈ ವಿಚಾರವನ್ನು ಸಂಬಂಧಪಟ್ಟ ಇಲಾಖೆಯವರಿಗೆ ಈಗಾಗಲೇ ತಿಳಿಸಿದ್ದೇವೆ. ಅವರೂ ಸಹ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರ ಸಲಹೆಗಳು ಮತ್ತು ನಮ್ಮ ಸಲಹೆಗಳೂ ಸಂಯುಕ್ತವಾಗಿ ಒಳ್ಳೆಯ ಸಲಹೆಗಳಾಗಿರುವುದರಿಂದ ಸರ್ಕಾರ ಇವೆಲ್ಲವನ್ನೂ ಗಮನಿಸಿ ಯೋಗ್ಯ ಕ್ರಮವನ್ನು ಕೈಕೊಳ್ಳುವುದೆಂದು ತಿಳಿಸುತ್ತೇನೆ. ಇದರ ಜೊತೆಗೆ ಮಾನ್ಯ ಭಾಸ್ಕರಶೆಟ್ಟರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಸಿಗಡಿ ಮೀನು ಮತ್ತು ಪ್ರಾನ್ಸ್ ಮೀನುಗಳ ಕ್ಯಾಚ್‌ನ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ, ಇದರ ಬಗ್ಗೆ ಕಾರಣ ಕಂಡುಹಿಡಿಯಲೂ ವಿಚಾರವಿನಿಮಯ ಮಾಡಬೇಕು ಎಂದು ಹೇಳಿದ್ದಾರೆ. ನಾನು ಅವರ ಕ್ಷೇತ್ರದಲ್ಲಿ ಪ್ರವಾಸ ಕೈಕೊಂಡಾಗ ಈ ವಿಷಯವೂ ಸಹಾ ನನ್ನ ಗಮನಕ್ಕೆ ಬಂದು ನಾನು ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಿಗಡಿ ಮೀನನ್ನು ಮೀನು ಎಂಬುವನ್ನು ಒಪ್ಪುತ್ತೀರಾ?

ಶ್ರೀ ಕೆ. ಟಿ. ರಾಥೋಡ್.— ಆ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಈ ಮೀನುಗಳು ಕಡಿಮೆಯಾಗಿರುವುದಕ್ಕೆ ಕಾರಣವೇನು ಎಂಬ ಬಗ್ಗೆ ಸೆಂಟ್ರಲ್ ಮೇರಿನ್ ಫಿಷರೀಸ್ ರಿಸರ್ಚ್ ಇನ್ಸ್ಟಿಟ್ಯೂಟ್‌ನವರು ವಿಚಾರ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ತಜ್ಞರೂ ಸಹ ಈ ವಿಷಯದಲ್ಲಿ ಪರೀಕ್ಷಾ ಪರಿಶೀಲನಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮತ್ತು ಇವರ ಬಗ್ಗೆ ಒಂದು ಟೆಕ್ನಿಕಲ್ ಕಮಿಟಿಯನ್ನು ನೇಮಕ ಮಾಡುತ್ತಿದ್ದೇವೆ. ಆ ಕಮಿಟಿಯಲ್ಲಿ ಅಗ್ರಿಕಲ್ಚರಲ್ ರೀಫೈನಾನ್ಸ್ ಕಾರ್ಪೊರೇಷನ್ ರೆಪ್ರಸೆಂಟೇಟಿವ್ ಒಬ್ಬರು, ಕೇಂದ್ರ ಸರ್ಕಾರದ ಮೀನುಗಾರಿಕೆ ಖಾತೆ ಪ್ರತಿನಿಧಿ ಒಬ್ಬರು ಮತ್ತು ನಮ್ಮ ಇಲಾಖೆ ಡೈರೆಕ್ಟರೂ ಮತ್ತು ಸೆಕ್ರೆಟರಿಯವರೂ ಇದ್ದಾರೆ.

ದೊಡ್ಡ ದೋಣಿಗಳನ್ನು ಮೀನುಗಾರರಿಗೆ ಕೊಡಬೇಕೆಂದು ಮಾನ್ಯ ಸದಸ್ಯರೊಬ್ಬರು ಸೂಚನೆ ಕೊಟ್ಟಿದ್ದಾರೆ. ದೊಡ್ಡ ದೋಣಿಗಳನ್ನು ತಯಾರು ಮಾಡುವ ಸಲುವಾಗಿ ಎ. ಆರ್. ಸಿ. ಅವರ ಸಹಾಯ ಸ್ಥಗಿತವಾಗಿದೆ. ನಾನು ಕೆಲವು ದಿವಸಗಳ ಹಿಂದೆ ದೆಹಲಿಗೆ ಹೋಗಿದ್ದಾಗ ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ವಿಚಾರವಿನಿಮಯ ಮಾಡಿದ್ದೇನೆ. ಅವರೂ ಮತ್ತೆ ಎ.ಆರ್.ಸಿ. ಸ್ಕೀಮನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿದ್ದಾರೆ ಮತ್ತು ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ. ಆದ್ದರಿಂದ ಇನ್ನು ಮುಂದೆ ದೊಡ್ಡ ದೋಣಿಗಳನ್ನು ಹೆಚ್ಚು ಪ್ರಮಾಣದಲ್ಲಿ ಹಂಚುವುದಕ್ಕೆ ಅವಕಾಶವಾಗುತ್ತದೆಂದು ಆಶಿಸುತ್ತೇನೆ. ಮೀನುಗಾರಿಕಾ ಅಭಿವೃದ್ಧಿಗೆ ಒದಗಿಸಿರುವ ಹಣ ಬಹಳ ಕಡಿಮೆ ಎಂಬುದಾಗಿ ಶ್ರೀಮತಿ ಮನೋರಮ ಮಧ್ವರಾಜ್ ಅವರು ತಿಳಿಸಿದ್ದಾರೆ. ನಮ್ಮ ಕೆಲಸಕಾರ್ಯಗಳಿಗಾಗಿ ಹೆಚ್ಚು ಹಣವನ್ನು ಒದಗಿಸಿಕೊಳ್ಳಲು ಇನ್ನು ಮುಂದೆ ಪ್ರಯತ್ನ ಮಾಡುತ್ತೇವೆ. ಮೀನುಗಾರಿಕಾ ಅಭಿವೃದ್ಧಿ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರನೇಕರು ಸೂಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು, ಯೋಗ್ಯ ಪರಿಹಾರ ದೊರಕಿಸಿಕೊಡುವುದಕ್ಕೆ ಸರ್ಕಾರ ಪ್ರಯತ್ನಿಸುತ್ತದೆಂದು ತಿಳಿಸಿ, ನಮ್ಮ ಖಾತೆಯ ಬಗ್ಗೆ ಆ ಕಡೆಯ ಸದಸ್ಯರಿಂದ ಯಾವ ತರಹದ ಟೀಕೆಗಳು ಬರದಿದ್ದರೂ ಸಹಾ ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಅವುಗಳನ್ನು ಕಾರ್ಯರೂಪದಲ್ಲಿ ತರಲೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ. ಈಗ ನಮ್ಮ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಭೆಯ ಮುಂದೆ ಸಾದರಪಡಿಸಿದ್ದೇವೆ, ಅವುಗಳಿಗೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—I will put the Demands to the Vote of the House. The question is :

"That a sum not exceeding Rs. 14,95,15,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 20 'Agriculture'."

"That a sum not exceeding Rs. 8,84,90,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March, 1973 in respect of Demand No. 38 'Forest'."

"That a sum not exceeding Rs. 22,00,000, inclusive of the sum granted 'an account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 51 'Capital Outlay on Forests'."

"That a sum not exceeding Rs. 2,83,00,000 inclusive of the sum granted 'on account' be granted to the Government to defray the charges which will come in oourse of payment during the financial year for the period ending 31st day of March 1973, in respect of Demand No. 22 'Animal Husbandry'."

The Motions were adopted and the Demands were granted.

Now the House will rise and meet again at 3 p.m.

The House adjourned at Thirty Minutes past One of the Clock and re-assembled at Three of the Clock.

(MADAM SPEAKER in the Chair)

STARRED QUESTIONS

(to which oral answers were given)

Construction of a Bridge Across the halla near Karur Village

186 Sri B. E. RAMAIAH (Siruguppa).—

Will the Minister for Public Works and Electricity be pleased to state :—

(*a*) whether provision was made in the budget for 1971-72 for the construction of a bridge across the Halla near Karur Village in Siruguppa Taluk ;

(*b*) if so, the reasons for delay in taking up and executing the work ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The work could not be taken up due to Economy Measures.

ಶ್ರೀ ಬಿ. ಇ. ರಾಮಯ್ಯ.—ಕರೂರು ಗ್ರಾಮದ ಬಳಿಯ ಹಳ್ಳಕ್ಕೆ ಅಡ್ಡಲಾಗಿ ಸೇತುವೆಯನ್ನು ನಿರ್ಮಿಸುವ ಬಗ್ಗೆ ಎಸ್ಟಿಮೇಟ್ ತಯಾರಾಗಿದೆ ಎಂದು ಹೇಳಿದ್ದೀರಿ, ಅದು ಎಷ್ಟಕ್ಕೆ ಎಸ್ಟಿಮೇಟ್ ಆಗಿದೆ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಎಸ್ಟಿಮೇಟು 4,20,000 ರೂಪಾಯಿಗಳಿಗೆ ತಯಾರು ಆಗಿದೆ.

ಶ್ರೀ ಬಿ. ಇ. ರಾಮಯ್ಯ.—ಇದು 1971-72ನೇ ಇಸವಿಯ ಬಡ್ಜೆಟ್ಟಿನಲ್ಲಿ ಇದೆಯೆಂದು ಹೇ[illegible] ಕಾ[illegible]ೀರಿ, ಇವೊತ್ತಿನವರೆಗೂ ಎಮರ್ಜೆನ್ಸಿ ಬಂದ ಕಾರಣ ಆ ಕೆಲಸವನ್ನು ಶುರು ಮಾಡಲಿಲ್ಲ ಎಂದು ಷು[illegible]ದೆ, ಹಾಗಾದರೆ ಯಾವಾಗ ಎಮರ್ಜೆನ್ಸಿ ತೆಗೆಯುತ್ತೀರಿ, ಯಾವಾಗ ಈ ಕೆಲಸವನ್ನು [illegible]ಡುತ್ತೀರಿ ?